
ಕುಮಾರ ಪದ್ಮರಸ ವಿರಚಿತ

ಸಾನಂದ ಚರಿತೆ

ಕನ್ನಡ ಅಧ್ಯಯನ ಸಂಸ್ಥೆ : : ಮೈಸೂರು ವಿಶ್ವವಿದ್ಯಾನಿಲಯ

ಸಂಪಾದಕ
ಎಸ್. ಬಸಪ್ಪ





ಕುಮಾರ ಪದ್ಮರಸ ವಿರಚಿತ

ಸಾನಂದ ಚರಿತೆ

ಸಂಪಾದಕ

ಎಸ್. ಬಸಪ್ಪ

ಕನ್ನಡ ಅಧ್ಯಯನ ಸಂಸ್ಥೆ

ಮೈಸೂರು ವಿಶ್ವವಿದ್ಯಾನಿಲಯ

೧೯೭೫

SANANDA CHARITE by Kumara Padmarasa; edited by Sri S. Basappa: published by the Institute of Kannada Studies, University of Mysore, Manasa Gangotri, Mysore-570006.
First Edition 1975; pp. xxii+320

ಬೆಲೆ: ರೂ 15-00

ಮಾರಾಟಗಾರರು : ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-570012
ಮುದ್ರಣ : ಯಜ್ಞಾನ್ ಪ್ರಿಂಟರ್ಸ್, ವಿದ್ಯಾರಣ್ಯಪುರಂ, ಮೈಸೂರು-570008

ಮುನ್ನುಡಿ

ಕನ್ನಡ ಅಧ್ಯಯನಕ್ಕೆ ಸಂಬಂಧಪಟ್ಟ ಚಟುವಟಿಕೆಗಳೆಲ್ಲವನ್ನೂ ಕೇಂದ್ರೀಕರಿಸುವ ದೃಷ್ಟಿಯಿಂದ ೧೯೬೬ರ ಕೊನೆಯಲ್ಲಿ ಪ್ರಾಚ್ಯ ಸಂಶೋಧನಾಲಯದ ಕನ್ನಡ ವಿಭಾಗವನ್ನು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ವಿಲೀನಗೊಳಿಸಲಾಯಿತು. ಅಂದಿನಿಂದ ಈ ವಿಭಾಗವನ್ನು ಅಧ್ಯಯನ ಸಂಸ್ಥೆಯ 'ಸಂಪಾದನ ವಿಭಾಗ'ವೆಂದು ಹೆಸರಿಸಲಾಯಿತು. ಕ್ರಿ.ಶ. ೧೩೪೨ರಲ್ಲಿ ಪ್ರತಿಮಾಡಲಾಗಿರುವ ಹಾಗೂ ಅತ್ಯಂತ ಪ್ರಾಚೀನ ಉಪಲಬ್ಧ ಹಸ್ತಪ್ರತಿಯಾಗಿರುವ ರನ್ನನ 'ಗದಾಯುದ್ಧ'ದ ಹಸ್ತಪ್ರತಿಯಿಂದ ಹಿಡಿದು ೧೮೫೦ರಲ್ಲಿ ಲಿಖಿತವಾಗಿರುವ 'ಪ್ರಭಾವತಿ ಪರಿಣಯ'ದ ಹಸ್ತಪ್ರತಿಯವರೆಗೆ ಇಂದು ೫೦೦ಕ್ಕೂ ಹೆಚ್ಚು ಹಸ್ತಪ್ರತಿಗಳನ್ನು ಹೊಂದಿರುವ 'ಸಂಪಾದನ ವಿಭಾಗ' ಅಧ್ಯಯನ ಸಂಸ್ಥೆಯ ಒಂದು ಪ್ರಧಾನ ಅಂಗವಾಗಿದೆ. ಕನ್ನಡ ಭಾಷಾಸಾಹಿತ್ಯಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಕೈಗೊಳ್ಳುವವರಿಗೆ, ಸಂಶೋಧಕರಿಗೆ, ಸ್ನಾತಕ ಮತ್ತು ಸ್ನಾತಕೋತ್ತರ ಕನ್ನಡ ವಿದ್ಯಾರ್ಥಿಗಳಿಗೆ ಇದು ಆಕರಗ್ರಂಥಗಳ ತವರಾಗಿದೆ, ಪ್ರೇರಣೆಯ ಸ್ರೋತವಾಗಿದೆ.

ಮುದ್ರಣಸೌಲಭ್ಯ ಈಗ್ಗೆ ಕೆಲವು ಶತಮಾನಗಳಿಂದೀಚೆಗೆ ಮಾನವ ಜನಾಂಗಕ್ಕೆ ದೊರೆತಿರುವ ವರ. ಈ ಸೌಲಭ್ಯವಿಲ್ಲದಿದ್ದ ಕಾಲದಲ್ಲಿ ಓಲೆಗರಿ ಅಥವಾ ತಾಡಪತ್ರದ ಮೇಲೆ ಕಂಠದಿಂದ ಕೊರೆದು, ಅನನ್ಯಶ್ರದ್ಧೆಯಿಂದ ಆ ಸಾಹಿತ್ಯವನ್ನು ಅಭ್ಯಸಿಸಿ, ಅದನ್ನು ಕಾಯ್ದುಕೊಂಡು ಬಂದ ಹಿರಿಯರಿಂದ ಅಂದಿನ ಅಪೂರ್ವ ಸಾಹಿತ್ಯ ನಮ್ಮ ಸಂಪತ್ತಾಗಿ ಉಳಿದಿದೆ. ತಮಗೆ ಪ್ರಿಯವೆನಿಸಿದ ಸಾಹಿತ್ಯಕೃತಿಗಳನ್ನು ಪ್ರತಿಮಾಡಿಸಿ ಇಟ್ಟುಕೊಳ್ಳುತ್ತಿದ್ದುದು ಆ ಕಾಲದ ಒಂದು ಬಗೆಯ ಹವ್ಯಾಸವೇ ಆಗಿತ್ತು. ಈ ಕಾರಣದಿಂದಾಗಿಯೇ, ಓಲೆಗರಿಯ ಒಂದು ಸಂಪುಟದಲ್ಲಿಯೇ, ಅನೇಕ ಗ್ರಂಥಗಳನ್ನು ಗ್ರಂಥಭಾಗಗಳನ್ನು ಪ್ರತಿಲಿಪೀಕರಿಸಿರುವುದನ್ನು ಕಾಣುತ್ತೇವೆ. ಹಸ್ತಪ್ರತಿಗಳ ಅನೇಕ ಪ್ರತಿಗಳನ್ನು ಸಿದ್ಧಪಡಿಸಿ ಹಂಚುವುದನ್ನು ಪುಣ್ಯಕಾರ್ಯವೆಂದು ಬಗೆದು ಆ ರೀತಿ ಮಾಡುತ್ತಿದ್ದುದಕ್ಕೂ ಉದಾಹರಣೆಗಳಿವೆ. ಪ್ರತಿಲಿಪೀಕರಣ ಹಲವರಿಗೆ ಜೀವನೋಪಾಯದ ಸಾಧನವಾಗಿಯೂ ಇತ್ತು. ಹಸ್ತಪ್ರತಿಗಳನ್ನು ಸುಂದರ ಸಂದರ್ಭೋಚಿತ ಚಿತ್ರಗಳಿಂದ ಅಲಂಕರಿಸುವ ವಾಡಿಕೆಯೂ ಇತ್ತು. ಇವು ನಮ್ಮ ಜನಗಳ ಸಾಹಿತ್ಯ-ಶಾಸ್ತ್ರ-ಕಲಾಭಿರುಚಿಯ ಪ್ರತೀಕವಾಗಿವೆ.

ಸಂಸ್ಕೃತಿ, ಇತಿಹಾಸ, ಭಾಷಾಚರಿತ್ರೆ–ಇವುಗಳ ಸಮಗ್ರ ಅರಿವಿಗೆ ಶಾಸ್ತ್ರೀಯವಾಗಿ ಸಂಪಾದಿಸಿದ ಸಾಹಿತ್ಯ ಅತ್ಯಾವಶ್ಯಕ. ಅಷ್ಟೇ ಅಲ್ಲ, ಕೋಶ ಅಥವಾ ನಿಘಂಟು

ಗಳ ರಚನೆಗೆ, ಅವುಗಳ ಮೂಲಘಟಕಗಳಾದ ಶಬ್ದಗಳ ಅರ್ಥನಿರ್ಧಾರಕ್ಕೆ ಶಾಸ್ತ್ರೀಯ ವಾಗಿ ಸಂಪಾದಿಸಿದ ಸಾಹಿತ್ಯಕೃತಿಗಳು ಅನಿವಾರ್ಯವಾಗುತ್ತವೆ. ಸಾಂಸ್ಕೃತಿಕ ಮತ್ತು ಐತಿಹಾಸಿಕ ಪುನರ್ರಚನೆಗೆ ಅಗತ್ಯವಾಗಿ ಬೇಕಾಗಿರುವ ಅನೇಕ ಗ್ರಂಥಗಳು ಇಂದಿಗೂ ಅನುಪಲಬ್ಧವಾಗಿವೆ. ಶಾಸನಗಳಲ್ಲಿ ಅನ್ಯಕವಿಗಳ ಕೃತಿಗಳಲ್ಲಿ ಉಕ್ತವಾಗಿರುವುದರಿಂದ ಮಾತ್ರ ಹಲವು ಕವಿಗಳ ಮತ್ತು ಗ್ರಂಥಗಳ ಹೆಸರುಗಳು ತಿಳಿದುಬರುತ್ತವೆ 'ಕಾವ್ಯ ಪ್ರಯೋಗ ಪರಿಣತಮತಿ'ಗಳಾಗಿದ್ದ ಕನ್ನಡ ಜನತೆಯ ಬಳಿ ಒಂದು ಕಾಲದಲ್ಲಿ ಇವೆಲ್ಲ ಲಭ್ಯವಾಗಿದ್ದಿರಬೇಕು. ನಾಡಿನ ಹಲವೆಡೆಗಳಲ್ಲಿ ಓಲೆಗರಿಯ ಸಾಹಿತ್ಯ ಅನೇಕ ಶತಮಾನ ಗಳವರೆಗೆ ತನ್ನ ವೈಭವವನ್ನು ಮೆರೆದಿತ್ತು. ಕಾವ್ಯಪಾರಾಯಣ ಸಾಂಸ್ಕೃತಿಕ ಜೀವನದ ಅಂಗವಾಗಿ ಪರಿಣಮಿಸಿತ್ತು. ಕಾಲಕ್ರಮದಲ್ಲಿ ದೇಶಕಾಲಪರಿಸರಗಳ ಪ್ರಭಾವದಿಂದ, ಜನತೆಯ ಅಜ್ಞಾನ, ಅಶ್ರದ್ಧೆ ಮತ್ತು ಔದಾಸೀನ್ಯಗಳ ಫಲವಾಗಿ ಅವು ಮೂಲೆಗುಂಪಾ ಗುತ್ತ ಬಂದು ಕೀಟಗಳಿಗೆ ಆಹಾರವಾಗತೊಡಗಿದವು. ಅವುಗಳನ್ನು ಸಂರಕ್ಷಿಸಲಾರದೆ ನದಿಯ ಪಾಲೋ, ಬೆಂಕಿಯ ಪಾಲೋ ಮಾಡುತ್ತಿದ್ದ ಉದಾಹರಣೆಗಳೂ ಅಸಂಖ್ಯಾ ಗಿವೆ; ಮತ್ತೆ ಕೆಲವೆಡೆಗಳಲ್ಲಿ ನವರಾತ್ರಿಯಂದು ಬೆಳಕುಕಂಡು ಪೂಜಾರ್ಹವಾಗಿ ಹಾಲುಂಡು ಮತ್ತೆ ಕತ್ತಲ ಕೋಣೆಯ ಮೂಲೆ ಸೇರಬೇಕಾದ ದುಃಸ್ಥಿತಿ ಒದಗಿ ಹಲ ವಾರು ಅಮೂಲ್ಯ ಪ್ರತಿಗಳು ತ್ರುಟಿತವಾಗಿಹೋಗಿವೆ. ಇಂಥ ಮೌಢ್ಯವನ್ನು ದೂರ ಮಾಡಿ, ಹಸ್ತಪ್ರತಿಗಳನ್ನು ಹೊರಗೆಳೆದು, ಅವುಗಳನ್ನು ಕೊಂಡು ಇಲ್ಲವೆ ಎರವಲಾಗಿ ಪಡೆದು ಪರಿಷ್ಕರಿಸಿ, ಸಂಪಾದಿಸುವ ಹೊಣೆಯನ್ನು ಈ ಸಂಸ್ಥೆಯ ಸಂಪಾದನ ವಿಭಾಗ ಹೊತ್ತಿದೆ.

ಅನುಪಲಬ್ಧವಾಗಿರುವ ಸಾಹಿತ್ಯರಾಶಿಯನ್ನು ಹೊರತರಲು, ಉಪಲಬ್ಧ ಸಾಹಿ ತ್ಯಕ್ಕೆ ಪರಿಹಾರ ನೀಡಲು ಹಸ್ತಪ್ರತಿಗಳ ಸಂಗ್ರಹಕಾರ್ಯ ಸತತವಾಗಿ ನಡೆಯಬೇಕಾ ಗಿದೆ. ಸಾಹಿತ್ಯಿಕ ಚಟುವಟಿಕೆಯ ಕೇಂದ್ರಗಳಾಗಿದ್ದ ಎಡೆಗಳಲ್ಲಿ, ಕವಿಗಳ ಕೀರ್ತಿ ಹರ ಡಿದ್ದ ಪ್ರದೇಶಗಳಲ್ಲಿ, ಜ್ಞಾನಗಂಗೆಯನ್ನು ಮನೆಮನೆಯ ಬಾಗಿಲಿಗೆ ಕೊಂಡೊಯ್ದ ಶಿವಶರಣರು ಮತ್ತು ದಾಸರುಗಳು ಸಂಚರಿಸುತ್ತಿದ್ದ ಸ್ಥಳಗಳಲ್ಲಿ, ಅವರ ನೆನಪಿಗಾಗಿ ಮಠಗಳು ಸ್ಮಾರಕಗಳು ನಿರ್ಮಿತವಾಗಿರುವ ಕಡೆಗಳಲ್ಲಿ, ಅನುಯಾಯಿಗಳ ಮತ್ತು ಭಕ್ತರ ಮನೆಗಳಲ್ಲಿ, ಸಾಹಿತ್ಯೋಪಾಸಕರ ಬಳಿಯಲ್ಲಿ ಹೇಗೋ ಎಂತೋ ಸಂಗ್ರಹಿತ ವಾಗಿರುವ ಹಸ್ತಪ್ರತಿಗಳನ್ನು ಸಂಗ್ರಹಿಸಿ ರಕ್ಷಿಸಬೇಕಾಗಿದೆ. ಈ ಸಂಸ್ಥೆಯ ಭಂಡಾರ ವನ್ನು ಈ ದೃಷ್ಟಿಯಿಂದ ಬೆಳೆಸಿಕೊಂಡು ಬರುವತ್ತ ಆದ್ಯಗಮನ ಕೊಡಲಾಗಿದೆ.

ಸಂಗ್ರಹಿಸಿದ ಪ್ರತಿಗಳನ್ನು ಎಚ್ಚರಿಕೆಯಿಂದ ಕಾಪಾಡಿಕೊಂಡು ಬರುವುದೂ ಅತ್ಯಂತ ಮುಖ್ಯವಾದ ಹೊಣೆ. ಕೀಟಗಳ ಹಾವಳಿಗೆ ಸಿಕ್ಕಿ ಪ್ರತಿಗಳು ಶಿಥಿಲವಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ಸಾಧ್ಯವಾದಷ್ಟು ಸಲ ಅವುಗಳನ್ನು ಸ್ವಚ್ಛಗೊಳಿಸುವುದು, ಕೀಟನಿರೋಧಕತೈಲ ಲೇಪನಮಾಡುವುದು, ವಾಯುನಿಯಂತ್ರಿತ ಕೊಠಡಿಯಲ್ಲಿಟ್ಟು

ಪ್ರಧೂಮನ ಉಪಚಾರ ನೀಡುವುದು (fumigation treatment), ಶೀರ ತ್ರುಟಿತ ವಾದ ಹಸ್ತಪ್ರತಿಗಳನ್ನು ಮೈಕ್ರೊಫಿಲಂಗಳಲ್ಲಿ ಶಾಶ್ವತಗೊಳಿಸುವುದು ಅಗತ್ಯವಾಗು ತ್ತದೆ. ಈ ರೀತಿ ಹಸ್ತಪ್ರತಿಗಳನ್ನು ಕಾಪಾಡಿಕೊಂಡು ಬರುವುದು ವ್ಯಕ್ತಿಗಳಿಗೆ ಶ್ರಮ ಸಾಧ್ಯವಾದ ಹಾಗೂ ಆರ್ಥಿಕವಾಗಿ ಸುಲಭಸಾಧ್ಯವಲ್ಲದ ಕಾರ್ಯ. ಕನ್ನಡ ಅಧ್ಯಯನ ಸಂಸ್ಥೆ ಹಸ್ತಪ್ರತಿಗಳ ಸಂರಕ್ಷಣೆಗೆ ಅಗತ್ಯವಾದ ಮೇಲ್ಕಂಡ ಎಲ್ಲ ಕ್ರಮಗಳನ್ನೂ ಕೈಗೊಂಡಿದೆ.

ಗ್ರಂಥಸಂಪಾದನೆ ಶ್ರಮಸಾಧ್ಯವಾದ ಕಾರ್ಯ. ವಿದ್ವತ್ತು, ವ್ಯುತ್ಪತ್ತಿ, ಪ್ರತಿಭೆ ಮೇಳವಿಸಿರುವ ಸಮರ್ಥರು ಕೈಗೊಳ್ಳಬೇಕಾದ ಕಾರ್ಯ. ಈ ಕಾರ್ಯದಲ್ಲಿ ಹಲವಾರು ಭಾಷೆಗಳ, ಶಾಸ್ತ್ರಗಳ ಪರಿಚಯವೂ ಅಗತ್ಯವಾಗುತ್ತದೆ. ಹಸ್ತಪ್ರತಿಗಳು ಕಾಲ ದೇಶ ಮತ್ತು ಪರಿಸರಗಳ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾಹಿತ್ಯಾಭ್ಯಾಸಿಗಳು ಹಸ್ತಪ್ರತಿ ಗಳ ಮೇಲೆ ಟಿಪ್ಪಣಿಗಳನ್ನು, ತಮ್ಮ ಅನಿಸಿಕೆಗಳನ್ನು ಬರೆದುಬಿಡುತ್ತಿದ್ದುದೂ ಉಂಟು. ಕಾಲಕ್ರಮದಲ್ಲಿ ಅವು ಮೂಲದ ಅಂಗವೋ ಎಂಬಂತೆ ಸೇರಿಬಿಡುತ್ತಿದ್ದುದೂ ಸಹಜವೇ. ಪ್ರತಿಭಾವಂತರೂ ವ್ಯುತ್ಪನ್ನಮತಿಗಳೂ ಕಾವ್ಯರಚನಾಸಮರ್ಥರೂ ಮೂಲವನ್ನು ಕೆಲವು ವೇಳೆ ಉತ್ತಮಪಡಿಸಿ, ಕೆಲವು ವೇಳೆ ಕೆಡಿಸಿ, ಅರ್ಥಸೌಲಭ್ಯಕ್ಕಾಗಿ ಅರ್ಥವಾಗು ವಂತಹ ಪಾಠಾಂತರಗಳನ್ನು ಕಲ್ಪಿಸಿ, ಅಲ್ಲಲ್ಲಿ ಮೂಲಧಾಟಿಗೆ ಭಂಗ ಬರದಂತೆ ತಮ್ಮ ಸ್ವಂತ ರಚನೆಗಳನ್ನು ಪ್ರಕ್ಷೇಪಿಸಿಬಿಟ್ಟಿರುವುದೂ ಉಂಟು. ಇಂತಹ ಪ್ರಕ್ಷೇಪಗಳು ಕೆಲವೊಮ್ಮೆ ಸನ್ನಿವೇಶದ ಪ್ರಭಾವವನ್ನು ಹೆಚ್ಚಿಸಿರುವುದೂ ಉಂಟು; (ಒಂದು ವೇಳೆ ವಾಸ್ತವವಾಗಿ ಹಾಗಾಗದಿದ್ದರೂ ಪ್ರಕ್ಷೇಪಕರು ಹಾಗೆ ಭಾವಿಸಿಕೊಂಡದ್ದೂ, ತಮ್ಮ ಚಪಲವನ್ನು ತೀರಿಸಿಕೊಂಡದ್ದೂ ಸತ್ಯ) ಒಟ್ಟಿನಲ್ಲಿ ಅನಾವಶ್ಯಕವಿಸ್ತರಣಕ್ಕೆ ಕಾರಣ ವಾಗಿ ಕೃತಿಯ ಗಾತ್ರದ ಹೆಚ್ಚಳಕ್ಕೆ ಮಾತ್ರ ನೆರವಾಗಿರುವುದೂ ಉಂಟು. ಲಿಪಿಕಾರರೂ ಅನೇಕ ವೇಳೆ ತಮಗೆ ಸರಿದೋರಿದಂತೆ ಅಥವಾ ಸೂಕ್ತಕಂಡಂತೆ ಶಬ್ದರೂಪಗಳನ್ನು ಬದಲಾಯಿಸಿ ಅಥವಾ ಬೇರೆ ಶಬ್ದವನ್ನು ತಂದು ಗಿಡಿದು, ತಿಳಿದೋ ತಿಳಿಯದೆಯೋ ಮೂಲಕ್ಕೆ ತಿದ್ದುಪಡಿಗಳನ್ನು ತಂದುಬಿಡುತ್ತಿದ್ದುದುಂಟು. ಇಂತಹ ಅನೇಕ ಕಾರಣ ಗಳಿಂದಾಗಿ ಒಂದೇ ಕೃತಿಯ ಹಲವು ಪ್ರತಿಗಳಲ್ಲಿ ಪಾಠವ್ಯತ್ಯಾಸಗಳು ಕಂಡುಬರುತ್ತವೆ. ಒಂದೊಂದೇ ಪ್ರತಿಗಳು ದೊರಕಿದ್ದು ಅದೂ ತ್ರುಟಿತವಾಗಿರುವಂತಹ ಸಂದರ್ಭಗಳಲ್ಲಿ ಮೂಲಪ್ರತಿಯ ಪಾಠವನ್ನು ಪುನರ್ರಚಿಸಬೇಕಾಗುತ್ತದೆ. ಇದು ನಿಜಕ್ಕೂ ಪ್ರತಿಭೆಯ ಕೆಲಸವಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಂಪಾದಕನ ಪರೀಕ್ಷೆಯೇ ನಡೆದುಹೋಗು ತ್ತದೆ. ವಿದ್ವತ್ತಿನ ಹಿನ್ನೆಲೆಯಲ್ಲಿ ತಾಳ್ಮೆ, ಶ್ರಮಸಹಿಷ್ಣುತೆ ಇಲ್ಲವಾದರೆ ಈ ಕ್ಷೇತ್ರದಲ್ಲಿ ಯಶಸ್ಸು ಪಡೆಯುವುದು ಸಾಧ್ಯವಾಗುವುದಿಲ್ಲ. ಗ್ರಂಥಸಂಪಾದನೆ ಇಂದು ವಿಶಿಷ್ಟ ಶಾಸ್ತ್ರವಾಗಿಯೇ ಬೆಳೆದಿದೆ.

'ಸಂಪಾದನ ವಿಭಾಗ' ಹಲವಾರು ಸಾಹಿತ್ಯ ಮತ್ತು ಶಾಸ್ತ್ರಗ್ರಂಥಗಳನ್ನು

ವೈಜ್ಞಾನಿಕವಾಗಿ ಸಂಪಾದಿಸಿ, ಪಾಠಗಳನ್ನು ನಿರ್ಧರಿಸಿ, ಪಾಠಾಂತರಗಳನ್ನು ಒದಗಿಸಿ, ವಿಸ್ತಾರವಾದ ಪೀಠಿಕೆಗಳನ್ನು ಬರೆದು, ಕವಿಯ ಕಾಲ, ದೇಶ, ಕೃತಿಗಳ ವಿಚಾರವನ್ನು ಚರ್ಚಿಸಿ, ಅವುಗಳ ಸಾಹಿತ್ಯಿಕ ಮೌಲ್ಯವನ್ನು ಪರಿಶೀಲಿಸಿ, ಅಗತ್ಯವಾದಲ್ಲಿ ಟಿಪ್ಪಣಿ ವ್ಯಾಖ್ಯಾನಗಳನ್ನು ನೀಡಿ, ಕೆಲವು ಸಂದರ್ಭಗಳಲ್ಲಿ ಗದ್ಯಾನುವಾದಗಳನ್ನು ಕೊಟ್ಟು ಅರ್ಥ ಕೋಶವನ್ನು ಒದಗಿಸಿ ಬೆಳಕಿಗೆ ತರುತ್ತಿದೆ. ಪ್ರಾಚ್ಯವಿದ್ಯಾಸಂಶೋಧನಾಲಯದ ಅಂಗ ವಾಗಿದ್ದಾಗ ಹೊರತಂದಿರುವ ೪೦ ಗ್ರಂಥಗಳ ಜೊತೆಗೆ ಅಧ್ಯಯನ ಸಂಸ್ಥೆಯಲ್ಲಿ ಸೇರ್ಪಡೆ ಯಾದ ಮೇಲೆ 'ಪ್ರಾಚ್ಯಕಾವ್ಯಮಾಲೆ'ಯ ಹೆಸರಿನಲ್ಲಿ ಈಗಾಗಲೇ ೩೩ ಗ್ರಂಥಗಳನ್ನು ಹೊರತರಲಾಗಿದೆ. ಬೆಳಕುಕಾಣಲು ಹಾತೊರೆಯುತ್ತಿರುವ ಗ್ರಂಥಗಳನ್ನೂ ವ್ಯವಸ್ಥಿತ ರೀತಿಯಲ್ಲಿ ಹೊರತರಲು ಸಂಸ್ಥೆ ಸತತವಾಗಿ ಶ್ರಮಿಸುತ್ತಿದೆ. ಇದುವರೆಗೂ ಸಂಪಾದನ ವಿಭಾಗದ ಸಂಶೋಧನ ಸಹಾಯಕರು ಸಿದ್ಧಪಡಿಸಿದ ಕೃತಿಗಳನ್ನು ಮಾತ್ರ ಪ್ರಕಟಿಸ ಲಾಗುತ್ತಿತ್ತು. ಈಗ ಈ ವಿಭಾಗದಲ್ಲಿ ಸಂಗ್ರಹಿತವಾಗಿರುವ ಹಸ್ತಪ್ರತಿಗಳನ್ನು ಉಪಯೋಗಿಸಿಕೊಂಡು ಹೊರಗಿನವರೂ ಸಂಪಾದಿಸಬಹುದಾದ ಗ್ರಂಥಗಳನ್ನೂ ಪ್ರಕಟಿ ಸಲು ಯೋಜಿಸಲಾಗಿದೆ. ಇದರಿಂದ ಪ್ರಕಟಣೆಯ ಕೆಲಸ ತ್ವರಿತಗೊಳ್ಳುತ್ತದೆ. ಹಸ್ತ ಪ್ರತಿಗಳಲ್ಲೇ ಉಳಿದು ಸಾಮಾನ್ಯರ ಕೈಗೆಟುಕದ ಗ್ರಂಥಗಳನ್ನು ಸರ್ವರ ಸ್ವತ್ತಾಗಿಸುವ ಉದ್ದೇಶವೂ ತೀವ್ರಗೊಳ್ಳುತ್ತದೆ.

ಸಂಪಾದನ ವಿಭಾಗ ಸಂಕಲಿತ ಗ್ರಂಥಗಳನ್ನು ಹೊರತರುವಲ್ಲಿಯೂ ನಮಗೆ ನೆರ ವಾಗುತ್ತಿದೆ. ಎರಡುಸಾವಿರ ವರ್ಷಗಳ ಸುದೀರ್ಘ ಪರಂಪರೆಯನ್ನುಳ್ಳ ಕನ್ನಡ ಸಾಹಿತ್ಯದ ಸಿಂಹಾವಲೋಕನ ಮಾಡಿಸುವಂತಹ ಪ್ರಾತಿನಿಧಿಕ ಸಂಕಲನ ಗ್ರಂಥಗಳನ್ನು ಸಿದ್ಧ ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳನ್ನು ದೃಷ್ಟಿಯಲ್ಲಿಟ್ಟು ಕೊಂಡು ರಚಿಸಲಾಗುತ್ತಿರುವ ಈ ಗ್ರಂಥಗಳು ಆಯಾ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಕನ್ನಡ ಸಾಹಿತ್ಯದ ಪರಿಚಯವನ್ನು ಬಯಸುವವರಿಗೂ ಉಪಯುಕ್ತವಾಗುತ್ತವೆ. ಇಂಥ ಸಂಕಲನಗಳನ್ನು ಸಿದ್ಧಪಡಿಸುವುದೂ ಸಂಪಾದನ ವಿಭಾಗದ ಒಂದು ಪ್ರಮುಖ ಹೊಣೆ ಯಾಗಿದೆ.

ಈಗ ಪ್ರಕಟವಾಗುತ್ತಿರುವ 'ಸಾನಂದ ಚರಿತೆ' ಅಧ್ಯಯನ ಸಂಸ್ಥೆಯ ಪ್ರಾಚ್ಯ ಕಾವ್ಯ ಮಾಲೆಯ ನಲವತ್ತನೆಯ ಪ್ರಕಟಣೆಯಾಗಿದೆ. ಈ ಕೃತಿಯನ್ನು ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದಲ್ಲಿ ಹಿಂದೆ ಸಹಾಯಕ ಸಂಶೋಧಕರಾಗಿದ್ದ ಶ್ರೀ ಎಸ್. ಬಸಪ್ಪನವರು ಶಾಸ್ತ್ರೀಯವಾಗಿ ಸಂಪಾದಿಸಿಕೊಟ್ಟಿರುತ್ತಾರೆ. ಈಚೆಗೆ ಶ್ರೀ ಬಸಪ್ಪನವರು ಶಿವೈಕ್ಯರಾದುದು ದುಃಖದ ಸಂಗತಿ. ಇದನ್ನು ಅವರು ತೀರಿಕೊಳ್ಳುವುದಕ್ಕೆ ಮುಂಚೆ ಪ್ರಕಟಿಸಲು ಸಾಧ್ಯವಾಗದೆ ಹೋದುದು ನಮಗೆ ತುಂಬ ವಿಷಾದವನ್ನುಂಟುಮಾಡಿದೆ.

ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೬

ಹಾ. ಮಾ. ನಾಯಕ
ಪ್ರಧಾನ ಸಂಪಾದಕ

ವಿಭಾಗ ಸಂಪಾದಕರ ಮಾತು

ಭರತಖಂಡ ಹಲವಾರು ಧರ್ಮಗಳ ತವರೂರು. ಈ ಪುಣ್ಯಭೂಮಿಯಲ್ಲಿ ಒಂದೊಂದು ಕಾಲಕ್ಕೆ ಒಂದೊಂದು ಧರ್ಮ ತಲೆಯೆತ್ತಿ ಮೆರೆದಿರುವುದನ್ನು ಇತಿಹಾಸ ದಿಂದ ಕಂಡುಕೊಳ್ಳಬಹುದಾಗಿದೆ. ವಿಭಿನ್ನ ಧರ್ಮಗಳಿಂದಲೂ ವಿಶಿಷ್ಟ ಸಂಸ್ಕೃತಿ ಯಿಂದಲೂ ಕೂಡಿದ ಈ ದೇಶದಲ್ಲಿ ಆಗಿಂದಾಗ್ಗೆ ಈ ಧರ್ಮಗಳಿಗೆ ಪರಸ್ಪರ ತಿಕ್ಕಾಟವೂ ಸಂಭವಿಸಿದೆ. ತಮ್ಮ ತಮ್ಮ ಧರ್ಮಗಳ ಪ್ರತಿಷ್ಠಾಪನೆಗಾಗಿ ಧರ್ಮಕ್ರಾಂತಿಯನ್ನೂ ರಾಜಕೀಯ ಕ್ರಾಂತಿಯನ್ನೂ ಮಾಡಿರುವುದುಂಟು. ರಾಜರ ಆಸ್ಥಾನದಲ್ಲಿ ವಾದವಿವಾದ ಗಳಿಗಾಗಿ ವಿದ್ವತ್ ಗೋಷ್ಠಿಗಳನ್ನು ಏರ್ಪಡಿಸುತ್ತಿದ್ದುದು ಕಂಡುಬರುತ್ತದೆ. ಸ್ವಧರ್ಮ ಪ್ರತಿಷ್ಠಾಪನೆಗಾಗಿ ರಾಜರ ಆಸ್ಥಾನದಲ್ಲಿ ಪ್ರಕಾಂಡ ಪಂಡಿತರು ತಮ್ಮ ಅಪಾರವಾದ ಪಾಂಡಿತ್ಯವನ್ನು ಪ್ರವರ್ಶಿಸಿದ್ದಾರೆ. ಅಂತಹವುಗಳಲ್ಲಿ ದೋರಸಮುದ್ರದ ಬಲ್ಲಾಳ ರಾಯನ ಆಸ್ಥಾನದಲ್ಲಿ ಆಂಧ್ರದೇಶದ ತ್ರಿಭುವನತಾತನಿಗೂ ಪದ್ಮರಸರಿಗೂ ನಡೆದ ವಾದಪ್ರಕರಣ, ಪ್ರತಾಪರುದ್ರನ ಸಭೆಯಲ್ಲಿ ಏಕದಂಡಿ ದ್ವಿದಂಡಿ ತ್ರಿದಂಡಿ ಎಂಬ ಮೂವರು ವೈಷ್ಣವರಿಗೂ ರಾಘವಾಂಕನಿಗೂ ನಡೆದ ವಾದಪ್ರಕರಣ-ಇವುಗಳನ್ನು ಉದಹರಿಸಬಹುದಾಗಿದೆ. ಈ ಎಲ್ಲ ವಾದ ವಿವಾದಗಳ ಸಾರಾಂಶವಿಷ್ಟೆ: ಪರಮತ ನಿರಾಕರಣೆ, ಸ್ವಮತಸ್ಥಿರೀಕರಣೆ.

ಪ್ರಸ್ತುತ ಸಾನಂದ ಚರಿತೆಯಲ್ಲಿ ಪ್ರತಿಪಾದಿತವಾಗಿರುವ ವಿಷಯ ಈ ತೆರನಾದುದು. ಇಲ್ಲಿ ಸಾನಂದನ ಚರಿತೆ ಗೌಣವಾದುದು. ಪಂಚಾಕ್ಷರೀ ಮಾಹಾತ್ಮ್ಯ ನಿರೂಪಣೆ ಪ್ರಧಾನವಾದುದು. ಈ ಕೃತಿಯಲ್ಲಿ ಶಿವಾದ್ವೈತ ಸಿದ್ಧಾಂತ ಮೂರ್ತಿ ವತ್ತಾಗಿ ಮೂಡಿಬಂದಿದೆ. ಈ ಸಿದ್ಧಾಂತದ ನಿರೂಪಣೆಗೆ ಈತನು ಆಧರಿಸಿದ ವೇದಾಗಮ ಪುರಾಣೇತಿಹಾಸಗಳು ಅಸಂಖ್ಯ.

ಕುಮಾರ ಪದ್ಮರಸನ ಪಿತಾಮಹರಾದಿಯಾಗಿ ಆತನ ವಂಶಜರೆಲ್ಲ ಗುರು ಪರಂಪರೆಗೆ ಸೇರಿದವರು; ಚತುಶ್ಶಾಸ್ತ್ರ ಪಂಡಿತರು; ನಿತ್ಯಶಿವಾನುಭಾವಿಗಳು; ಲಿಂಗಾಂಗ ಸಾಮರಸ್ಯ ಸುಖಿಗಳು; ಕಾಶೀವಿಶ್ವನಾಥನ ನಿಸ್ಸೀಮ ಭಕ್ತರು; ಘನ ವಿದ್ವಾಂಸರು. ಈ ಪರಂಪರೆಯಲ್ಲೇ ಬಂದ ಕುಮಾರ ಪದ್ಮರಸ ತನ್ನ ಹಿರಿಯ ಗುಣಗಳನ್ನೆಲ್ಲ ಗರ್ಭೀಕರಿಸಿ ಕೊಂಡು ವೀರಶೈವ ಸಿದ್ಧಾಂತ ಗ್ರಂಥವಾದ ಸಾನಂದ ಚರಿತೆಯನ್ನು ತಂದೆಯ ಆಜ್ಞಾನುಸಾರವಾಗಿ ರಚಿಸಿದಂತೆ ಹೇಳಿಕೊಂಡಿದ್ದಾನೆ. ಈತನ ತಂದೆಯಾದ ಕೆರೆಯ

ಪೀಠಿಕೆ

I ಕವಿ :

ಸಾನಂದ ಚರಿತೆಯ ಕರ್ತೃ ಕುಮಾರ ಪದ್ಮರಸ. ಈತನಿಗೆ ಪದುಮಿಗ, ಪದುಮಿದೇವ, ಪದ್ಮಿದೇವ ಎಂಬ ಪರ್ಯಾಯನಾಮಗಳು ಇದ್ದಂತೆ ಕಂಡು ಬರುತ್ತದೆ. ಅಲ್ಲದೆ ಈತನಿಗೆ 'ಶರಣಕವಿ' ಎಂಬ ಬಿರುದಿದ್ದಂತೆಯೂ ತಿಳಿದುಬರುತ್ತದೆ.[1]

ಕಂ॥ ಗುರುವಂ ಹರನಂ ಪಂಚಾ
ಕ್ಷರಿಯಂ ರುದ್ರಾಕ್ಷಿಯಂ ವಿಭೂತಿಯನೊಲ್ದಾ
ದರಿಪರ್ ಶರಣಕವಿಯ ಪ
ದ್ಮರಸರ ಸಾನಂದಚರಿತೆಯೋದುಗೆ ಶರಣರ್

ಪ್ರತಿಸಂಧಿಯ ಕೊನೆಯಲ್ಲೂ "ಇದು ನಂದಿ ರಚಿತ ಸಾನಂದ ಚರಿತೆಯೊಳಗಿದು ಪದಪಿನಿಂ ಶರಣಕವಿಯೊರೆದ ಕನ್ನಡದೊಳಿದು" ಎಂಬ ಪದ್ಯ ಕಂಡುಬರುತ್ತದೆ. ಇದರಿಂದಲೂ ಈತನಿಗೆ ಶರಣಕವಿ ಎಂಬ ಪರ್ಯಾಯನಾಮವು ಇದ್ದುದು ಸ್ಪಷ್ಟವಾಗುತ್ತದೆ.

ಕುಮಾರ ಪದ್ಮರಸನ ತಂದೆ ಕೆರೆಯ ಪದ್ಮರಸ. ತಾಯಿ ಮಾದೇವಿ. ಈತನು ಬಾಲ್ಯವಿದ್ಯಾಭ್ಯಾಸವನ್ನು ತನ್ನ ತಂದೆಯ ಬಳಿಯೇ ಮಾಡಿದಂತೆ ಕಂಡುಬರುತ್ತದೆ. ಈತನ ಪೂರ್ವಜರು ರಾಜರುಗಳಾಗಿಯೂ ಕವಿಗಳಾಗಿಯೂ ಯೋಗಿಗಳಾಗಿಯೂ ದಂಡನಾಯಕರುಗಳಾಗಿಯೂ ಪ್ರಸಿದ್ಧರಾಗಿದ್ದಾರೆ. ಈ ಮನೆತನದ ಮೂಲಪುರುಷರಾದ ಮಲ್ಲಿಕಾರ್ಜುನ ಪಂಡಿತ ಅಥವಾ ಮಲ್ಲರಸರು ಕಲ್ಲುಕುರಿಕೆಯವರು. ಇವರ ಮಗ ಸಕಲೇಶ ಮಾದರಸರು. ಇವರು ಸುಪ್ರಸಿದ್ಧ ವಚನಕಾರರು. ಈ ಸಕಲೇಶ ಮಾದರಸರ ಮಗ ಮಾಯಿದೇವ. ಈ ಮಾಯಿದೇವರ ತನುಜ ಕೆರೆಯ ಪದ್ಮರಸ. ಈ ಕೆರೆಯ ಪದ್ಮರಸರ ಸುಪುತ್ರರೇ ಕುಮಾರ ಪದ್ಮರಸರು. ಈ ಪರಂಪರೆಯವರೆಲ್ಲಾ ಶ್ರುತಿ, ಸ್ಮೃತಿ ವಿಶಾರದರು, ಚತುಶ್ಶಾಸ್ತ್ರ ಪಂಡಿತರು, ನಿತ್ಯಶಿವಾನುಭಾವಿಗಳು, ಪ್ರಕಾಂಡ ಪಂಡಿತರು, ಕಾಶೀವಿಶ್ವನಾಥನ ನಿಸ್ಸೀಮ ಭಕ್ತರು.

ಕುಮಾರ ಪದ್ಮರಸನು ತನ್ನ ತಂದೆಯ ಆಜ್ಞಾನುಸಾರವಾಗಿಯೇ ಸಾನಂದ ಚರಿತೆಯನ್ನು ರಚಿಸಿದಂತೆ:

---

1 ಕಥಾಗರ್ಭ ಸಂಧಿ-೧೫ ಸಾನಂದಚರಿತೆ ೧-೧೦, ೭-೨೪೫, ೬-೧೩೩

ಓರಿದುವಾರುಂ ಮುನ್ನ
ವಿರಚಿಸಿದರಿಲ್ಲೆಂದು
ಧರೆಯೊಳೊಳುಗನ್ನಡದಿ ಪಸರಿಸೆಂದು
ಗುರುರೂಪ ವಿಶ್ವಪತಿ
ಕರುಣಿಸಿದ ತೆಱದಿನಾಂ
ವರಪುರಾಣಾರ್ಥಮಂ ಕನ್ನಡಿಸಿದೆಂ (೮-೩)
ಹರಚಮೂವರ ಪರಮ
ವಿರಚಿತ ಶ್ಲೋಕಬಂ
ಧುರ ದೇವಭಾಷೆಯುಂ ಕನ್ನಡಿಸಿದೆಂ
ಗುರು ಕೆಱೆಯಪದ್ಮರಸ
ವರಸೂನು ಪದುಮಿಗಂ
ಧರೆಯೊಳು ಸ್ತ್ರೀಬಾಲ ಸಾಧ್ಯವಾಗೆ (೯-೧೦)

ಈ ಮೇಲಿನ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ. ಇದೇ ಅಭಿಪ್ರಾಯವನ್ನು ಪದ್ಮಣಾಂಕನು ತನ್ನ ಪದ್ಮರಾಜಪುರಾಣದಲ್ಲಿಯೂ ಹೇಳಿದ್ದಾನೆ.

ಬಳಿಕೆ ಸಮಯಸ್ಥಾಪನಾರ್ಥಂ ಶ್ರುತಿ ಸ್ಮೃತಿ ವಿ
ಮಳ ಪುರಾಣಾಗಮೋಪನಿಷತ್ಪ್ರಭೃತಿ ಶಾಸ್ತ್ರ
ಕುಲದ ಸಾರಂದೆಗೆದು ದೃಷ್ಟಕೆ ಬರೆದು ಸರ್ವರಱಿಯೆ ಕರ್ಣಾಟವಾಗಿ
ಅಲಘು ವರ್ಣಕ ರೀತಿಯಿಂ ರಸಂ ಮುಸುಕಿಯು
ಜ್ವಳಿಪಂತೆ ಸಾನಂದಚರಿತಾಖ್ಯ ಶಾಸ್ತ್ರಮನ
ಶುಳಗುರುವರಂ ನಿಜಾತ್ಮಜನಿನೊರೆಯಿಸುತೆ ಶಿವಸುಖದೊಳಿಂತೊಪ್ಪ
ತಿರ್ದಂ (೧೨-೫೬)

II ಕಾಲ :

ಕುಮಾರ ಪದ್ಮರಸ ತನ್ನ ಕಾವ್ಯರಚನಾಕಾಲವನ್ನು ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಈತನ ತಂದೆಯಾದ ಕೆರೆಯ ಪದ್ಮರಸನ ಕಾಲನಿರ್ಣಯ ಮಾಡುವಾಗ ಹರಿಹರ, ರಾಘವಾಂಕರ ಕಾಲನಿರ್ಣಯವನ್ನೂ ಮಾಡುವುದು ಸಂಪ್ರದಾಯವಾಗಿ ಬಂದಿದೆ. ಏಕೆಂದರೆ ಇವರು ಮೂವರೂ ಹಿರಿಯ-ಕಿರಿಯ ಸಮಕಾಲೀನರಾಗಿದ್ದಂತೆ ಕಾವ್ಯ ಪುರಾಣಗಳಲ್ಲಿ ಕಂಡುಬರುತ್ತದೆ. ಹರಿಹರ, ರಾಘವಾಂಕ, ಕೆರೆಯ ಪದ್ಮರಸ-ಇವರ ಕಾಲದ ವಿಚಾರವಾಗಿ ವಿದ್ವಾಂಸರಲ್ಲಿ ಈಗಾಗಲೇ ಸಾಕಷ್ಟು ಜಿಜ್ಞಾಸೆ ನಡೆದಿದೆ. ಬಹು ಜನ ವಿದ್ವಾಂಸರ ಅಭಿಪ್ರಾಯದಂತೆ ಈ ಮೂವರೂ ಹದಿಮೂರನೆಯ ಶತಮಾನದಲ್ಲಿದ್ದವರು. ಅದರಂತೆ ಕುಮಾರ ಪದ್ಮರಸನೂ ಕೂಡ ಹದಿಮೂರನೆಯ ಶತಮಾನದ ಕೊನೆಯ ಭಾಗದಲ್ಲಿದ್ದನೆಂದು ಊಹಿಸುವುದು ಅಸಂಭಾವ್ಯವಾಗಲಾರದು.

III ಕೃತಿ :

'ಶಿವಾದ್ವೈತಸಾಕಾರಸಿದ್ಧಾಂತ ಸಾನಂದಚರಿತ' ಎಂಬುದು ಈ ಕೃತಿಯ ಅನ್ವರ್ಥ ನಾಮ. ಸಂಸ್ಕೃತ ಸಾನಂದ ಚರಿತೆಯನ್ನು ರಚಿಸಿದವನು ಕೆರೆಯಪದ್ಮರಸ. ಈತನ ಮತ್ತೊಂದು ಕನ್ನಡ ಕೃತಿ 'ದೀಕ್ಷಾ ಬೋಧೆ'. ಈತನಿಗೆ ಸಕಲ ಶಾಬ್ದಿಕ ಸಾರ್ವಭೌಮ, ಉದ್ಧತವಾದಿನಿಕರವೇಲ್ಪಾಭುಜಂಗ, ತಾರ್ಕಿಕ ಚಕ್ರವರ್ತಿ, ಶಿವಾದ್ವೈತ ಸಾಕಾರ ಸಿದ್ಧಾಂತ ಪ್ರತಿಷ್ಠಾಪನಾಚಾರ್ಯ, ಶರಣಕವಿ, ಭವಿದೂರ ಮುಂತಾದ ಬಿರುದುಗಳಿದ್ದಂತೆ ಕಂಡುಬರುತ್ತದೆ. ಈ ಸಂಸ್ಕೃತ ಸಾನಂದ ಚರಿತೆಯನ್ನು ಆಧರಿಸಿ ಈತನ ಮಗನಾದ ಕುಮಾರಪದ್ಮರಸನು ಕನ್ನಡದಲ್ಲಿ ಸಾನಂದ ಚರಿತೆಯನ್ನು ಬರೆದಿದ್ದಾನೆ. ಆದರೆ ಈ ಸಂಸ್ಕೃತ ಸಾನಂದಚರಿತೆ ಉಪಲಬ್ಧವಿಲ್ಲ. ದೋರಸಮುದ್ರದ ರಾಜಧಾನಿಯಲ್ಲಿ ನರಸಿಂಹ ಬಲ್ಲಾಳನ ಆಸ್ಥಾನದಲ್ಲಿ ಆಂಧ್ರದೇಶದಿಂದ ವಾದಕ್ಕೆ ಬಂದ ತ್ರಿಭುವನ ತಾತನೆಂಬ ವೈಷ್ಣವನೊರ್ವನನ್ನು ಈ ಸಾನಂದ ಚರಿತವೆಂಬ ಸಂಸ್ಕೃತ ಪ್ರಕರಣ ಗ್ರಂಥ ರೂಪಿಸಿಕೊಂಡು ಸೋಲಿಸಿ ಮೆರೆದರು ಎಂದು ಮುಂತಾಗಿ ದೋರಾಂಬುಧಿಯ ರಾಮಣ್ಣಾದಿ ವಿಬುಧರ ಹೇಳಿಕೆಯಿಂದ ವಿದಿತವಾಗುತ್ತದೆ. ಈ ಸಂಸ್ಕೃತ ಸಾನಂದ ಚರಿತೆಯನ್ನು ಬಣ್ಣಿಸಿರುವವರೆಲ್ಲರೂ ಕೆರೆಯ ಪದ್ಮರಸಾರ್ಯರೆ ಅದರ ಕರ್ತೃವೆಂಬುದನ್ನು ಏಕಕಂಠದಿಂದ ಹೇಳಿದ್ದಾರೆ. ಆದರೆ ಆ ಕೃತಿ ಉಪಲಬ್ಧವಿಲ್ಲದಿರುವುದು ದುರ್ದೈವವೇ ಸರಿ. ನೀಲಕಂಠ ನಾಗನಾಥಾಚಾರ್ಯನು ತನ್ನ 'ವೀರಮಾಹೇಶ್ವರಾಚಾರ ಸಾರ ಸಂಗ್ರಹ'ದ ಪೀಠಿಕೆಯಲ್ಲಿ ಕೆಲವು ಪ್ರಾಚೀನರನ್ನು ನುತಿಸುತ್ತಾ 'ದೇಶಭಾಷೆಯಿಂದ ಶಿವ ಭಕ್ತರ ಕೃತಿಗಳನ್ನು ರಚಿಸಿ ಮೆರೆದಂತಹ ಪಂಪಾಹರೀಶ್ವರನನ್ನು ನುತಿಸುವೆನು' ಎಂದು ಹೇಳಿರುವಂತೆ ಹೇಳದೆ 'ಸಾನಂದ ಚರಿತಂ ನಾಮ ಗ್ರಂಥಂ ಚಕ್ರೇತಿಯತ್ನತಃ। ಯಸ್ತಸ್ಮೈ ಪದ್ಮರಾಜಾಯ ನಮೋ ದುರ್ವಾದದಾಹಿನೇ' (ಅಧ್ಯಾಯ ೧ ಶ್ಲೋಕ ೧೬) ಎಂಬಲ್ಲಿ ಸಂಸ್ಕೃತದಲ್ಲಿಯೇ ಪದ್ಮರಾಜನು ಸಾನಂದ ಚರಿತೆಯನ್ನು ಬಹುಪ್ರಯತ್ನದಿಂದ ಬರೆದಿರುವನೆಂದೂ ಪದ್ಮರಸನು ದುರ್ವಾದಿಗಳನ್ನು ದಹಿಸತಕ್ಕವನು ಎಂದೂ ಸ್ತುತಿಸಿರುವನು. ಇದರಿಂದಲೂ ಮೂಲಸಂಸ್ಕೃತ ಸಾನಂದ ಚರಿತವೇ ಇರಬೇಕೆಂದು ತಿಳಿದುಬರುವುದು. ಈ ಸಾನಂದ ಚರಿತವು ಕೇವಲ ಪುರಾಣದ ಕಥೆಯಾಗಿರದೆ ಪುರಾಣಾರ್ಥವನ್ನು ಹಿಡಿದು ಆ ಜಾಡಿನಲ್ಲಿ ಸಾಕಾರಶಿವಾದ್ವೈತಸಿದ್ಧಾಂತಕ್ಕೆ ಪೂರಕವಾಗಿ ಇತರ ಮತಾಂತರಗಳಿಗೆ ಮಾರಕವಾಗಿ ಸಾಧಾರ ಪೂರ್ವಕವಾಗಿ ವಿರಚಿಸಿದ ಮಹಾಪ್ರಕರಣ ಪ್ರಬಂಧ ಅಥವಾ ಶಾಸ್ತ್ರಕಾವ್ಯವೆಂಬುದು ಗೋಚರವಾಗುತ್ತದೆ. ಈ ಕೆರೆಯಪದ್ಮರಸನು ತನ್ನ ಮಗನಾದ ಕುಮಾರ ಪದ್ಮರಸನಿಗೆ 'ಸ್ತ್ರೀಬಾಲಸಾಧ್ಯಮಾಗೆ' ಈ ಪುರಾಣಾರ್ಥವನ್ನು ಕನ್ನಡಿಸುವಂತೆ ಆಣತಿಮಾಡಿದನು. ಈ ಕೃತಿ ಎಷ್ಟೇ ಸರಳವಾಗಿದ್ದರೂ, ಸುಭಗವಾಗಿದ್ದರೂ ವಿಷಯ ಕಠಿಣವಾದ ಶಾಸ್ತ್ರವಿಷಯವಾದ ಕಾರಣ ಪ್ರೌಢಧಾರ್ಮಿಕ ಪ್ರಕರಣ ಪ್ರಬಂಧವೆಂದೇ ಅರಿಯಬೇಕಾಗಿದೆ. ತಂದೆಯಂತೆಯೇ ಈ

ಶಾಸ್ತ್ರಪ್ರಬಂಧವನ್ನು ರಚಿಸುವಲ್ಲಿ ಕುಮಾರ ಪದ್ಮರಸನು ಒಳುಗನ್ನಡ ಭಾಷೆಯಲ್ಲಿಯೇ ಸುಲಲಿತ ಛಂದಸ್ಸಿನಲ್ಲಿಯೇ ಕೃತಿ ರಚಿಸಿದ್ದಾನೆ. ಈತನು ತನ್ನ ತಂದೆಯಂತೆಯೇ ಬಹುಶ್ರುತ; ಉಭಯ ಭಾಷಾಪಂಡಿತ.

ಸಾನಂದಚರಿತೆ, ಪಾಲ್ಕುರಿಕೆಸೋಮನಾಥಭಾಷ್ಯ ಇವೆರಡೂ ಪರಸ್ಪರ ಸಂವಾದಿಗಳಾಗಿವೆ. ಪ್ರಾಯಶಃ ಇಬ್ಬರ ಧ್ಯೇಯವೂ ಒಂದೇ ಆಗಿರುವುದರಿಂದ ವಿಷಯಗಳಲ್ಲೂ ಸಾಮ್ಯತೆ ಇದ್ದು ಸಾಕ್ಷ್ಯಾಧಾರಗಳನ್ನು ಮಂಡಿಸುವುದರಲ್ಲಿಯೂ ಒಂದೇ ರೀತಿಯಾಗಿ ಕಂಡುಬರುತ್ತದೆ. ಸಾನಂದಚರಿತೆ ಸಾಕಾರಶಿವಾದ್ವೈತ ಸಿದ್ಧಾಂತವೆನಿಸಿದೆ. ಸೋಮನಾಥಭಾಷ್ಯವು ವೀರಮಾಹೇಶ್ವರಾಚಾರ ಸಾರೋದ್ಧಾರ ಎನಿಸಿದೆ. ಒಟ್ಟಿನಲ್ಲಿ ಸೋಮನಾಥಭಾಷ್ಯ ಮತ್ತು ಸಾನಂದಚರಿತ ಪ್ರಕರಣಗ್ರಂಥಗಳು ಶಿವಾದ್ವೈತ ಸಿದ್ಧಾಂತಕ್ಕೆ ಹೊಸತಿರುವುಕೊಟ್ಟ ಭಾಷ್ಯಸ್ಥಾನಾಪನ್ನ ಗ್ರಂಥಗಳು. ಪರಮತ ನಿರಾಕರಣ ಪೂರ್ವಕವಾಗಿ ಸ್ವಮತ ಸ್ಥಿರೀಕರಣವೇ ಭಾಷ್ಯಗಳ ಗಮ್ಯಗುರಿ. ಅಂತೆಯೇ ಈ ಎರಡೂ ಪ್ರಕರಣ ಗ್ರಂಥಗಳು ವೀರಶೈವಕ್ಕೆ ವಿಶಿಷ್ಟ ಕೊಡುಗೆಗಳು. ಪಾಲ್ಕುರಿಕೆ ಸೋಮನಾಥ ಮತ್ತು ಕೆರೆಯ ಪದ್ಮರಸರ ಮಹಾಪ್ರಬಂಧಗಳನ್ನು ಆಧರಿಸಿ ತರುವಾಯ ಅಮೃತೇಶ್ವರ ಭಾಷ್ಯ, ಲಿಂಗಧಾರಣ ಚಂದ್ರಿಕೆ, ಪದ್ಮರಾಜಪುರಾಣ, ಆರಾಧ್ಯಚಾರಿತ್ರ, ವೀರಶೈವಾಮೃತಮಹಾಪುರಾಣ, ಪಾಲ್ಕುರಿಕೆಸೋಮೇಶ್ವರಪುರಾಣ, ವೀರಶೈವಾನಂದ ಚಂದ್ರಿಕೆ, ಶಿವತತ್ತ್ವರತ್ನಾಕರ ಇತ್ಯಾದಿ ಗ್ರಂಥಗಳು ರಚಿತವಾಗಿವೆ.

ಪ್ರಕೃತ ಸಾನಂದಚರಿತೆಯಲ್ಲಿ ಸಾನಂದನ ಚರಿತೆ ನಿರೂಪಿತವಾಗಿದ್ದರೂ ಇದರಲ್ಲಿ ಶಿವಾದ್ವೈತ ಸಿದ್ಧಾಂತಕ್ಕೆ ಸಂಬಂಧಿಸಿದಂತೆ ನಲವತ್ತಾರು ಮಹತ್ವದ ಪ್ರಕರಣಗಳಿದ್ದು ಶಿವನ, ಶಿವಧರ್ಮದ, ಶಿವಮಂತ್ರದ, ಶಿವಭಕ್ತರ ಘನತೆಯನ್ನು ಮೆರೆಯಿಸುತ್ತ 'ತಸ್ಯ ವಾಚಕಃ ಪ್ರಣವಃ' 'ತಜ್ಜಪಸ್ತದರ್ಥಸಾಧನಂ' 'ಪ್ರಣವಲತಾ ಫಲವೀ ಪಂಚಾಕ್ಷರೀ' ಎಂಬ ಯೋಗಸೂತ್ರಗಳ ಮತ್ತು ಹರೀಶ್ವರನ ಉಕ್ತಿಗಳಂತೆ ಶಿವವಾಚಕವಾದ ಪ್ರಣವಾಭಿನ್ನವಾದ ಶಿವಮಹಾಪಂಚಾಕ್ಷರೀ ಮಂತ್ರದ ಘನತೆಯನ್ನೂ, ಆ ಮಂತ್ರದ ತಾರಕಶಕ್ತಿಯನ್ನೂ ಸ್ಫುಟಗೊಳಿಸಲೋಸುಗವೇ ಪ್ರಕರಣಾನುಸಾರವಾಗಿ ಶ್ರೀನಂದೀಶ್ವರನು ತನ್ನ ಶಿಷ್ಯನಾದ ಸನತ್ಕುಮಾರನಿಗೆ ಬೋಧಿಸಿದಂತೆ ಹೇಳಿದೆ. ಈ ಶಿವಮಂತ್ರ ಸಿದ್ಧರು ಅನೇಕರಿದ್ದಾರೆ. ಅವರಲ್ಲಿ ಮಾರ್ಕಂಡೇಯ, ಶತಾನಂದ, ಸಾನಂದರು, ಪುರಾತನರು ಹಾಗೂ ಪ್ರಮುಖರು.

ಸಾನಂದ ಚರಿತೆಯಲ್ಲಿ ಪಂಚಾಕ್ಷರೀಮಹಿಮೆಯನ್ನು ವರ್ಣಿಸಲಾಗಿದೆ. 'ಚರಿತೆ ಸಾನಂದೇಶಚರಿತೆ ಜಗದಾನಂದಚರಿತೆ ಪಂಚಾಕ್ಷರೀವರಮಹಿಮೆಯು' (೧-೨೬) ಎಂಬುದರಿಂದ ಈ ಪಂಚಾಕ್ಷರೀ ಮಹಿಮೆಯ ವೈಭವಪ್ರದರ್ಶನವನ್ನು ಈ ಗ್ರಂಥದಲ್ಲಿ ಕಾಣಬಹುದಾಗಿದೆ. ಕಥಾಗರ್ಭ ಸಂಧಿಯಲ್ಲಿ ಸಂಗ್ರಹವಾಗಿ ಈ ಕೃತಿಯನ್ನು ವಿವರಿಸಲಾಗಿರುತ್ತದೆ.

IV ಸಾನಂದ ಚರಿತೆ:

ಈ ಗ್ರಂಥಕ್ಕೆ 'ಶಿವಾದ್ವೈತಸಾಕಾರ ಸಿದ್ಧಾಂತ' ಎಂಬ ಅನ್ವರ್ಥನಾಮವೂ ಇರುವುದರಿಂದ ಇಲ್ಲಿ ಕೆಲವು ಅಂಶಗಳನ್ನು ಪ್ರಸ್ತಾಪಿಸಬೇಕಾಗಿದೆ. ಕೇವಲಾದ್ವೈತಿಗಳು ಕೇವಲ ಜ್ಞಾನಮಾರ್ಗಾವಲಂಬಿಗಳು. ಅವರು ಸಾಕಾರವನ್ನು ಒಪ್ಪುವುದಿಲ್ಲ. ವೀರಶೈವರು ಕ್ರಿಯಾಜ್ಞಾನಸಮ ಸಮುಚ್ಚಯವಾದಿಗಳು. ಇವರು ಸಾಕಾರ ನಿರಾಕಾರಗಳೆರಡನ್ನೂ ಒಪ್ಪುತ್ತಾರೆ. 'ರೂಪತತ್ತ್ವವೆಂದು ಜ್ಯೋತಿರ್ಲಿಂಗ ನಾಮವೆಂದಱಿವುದು', 'ಘೃತಕಾಠಿನ್ಯವನ್ಮೂರ್ತಿಃ ಸಚ್ಚಿದಾನಂದಲಕ್ಷಣಾ', 'ಅರೂಪೇ ಭಾವನಾ ನಾಸ್ತಿ' ಇತ್ಯಾದಿ ಎರಡನೆಯ ಸಂಧಿಯಲ್ಲಿನ ಪ್ರಕರಣದಿಂದ ವೇದ್ಯವಾಗುತ್ತದೆ. ಇದೇ ಸಂಧಿಯಲ್ಲಿ ಬರುವ ಬ್ರಹ್ಮದೊಡಕನ್ನು ಬಿಚ್ಚಿ ವಿವರಿಸುವಾಗ "ಬ್ರಹ್ಮವೆಂದು ಬೇಱೆ ಬಯಲ ನಿರಾಕಾರವಲ್ಲ ಸಾಕಾರ ಸಿದ್ಧಾಂತನಪ್ಪ ಒಡೆಯ ರುದ್ರನ ನಾಮದೊಳಗೊಂದು ನಾಮ ಬ್ರಹ್ಮವೆಂದಱಿವುದು" (೨-೧೭೦ ವಚನ), "ಪರಬ್ರಹ್ಮವೆಂದು ಬೇಱಿಟ್ಟು ನುಡಿವ ಪರಬ್ರಹ್ಮ ಶಿವಾದಿನಾಮದೊಳಗೊಂದು ನಾಮವೆಂಬ ಪ್ರತ್ಯಯಮಂ ನಾನಾಶಾಸ್ತ್ರಪ್ರಮಾಣ ಗ್ರಂಥಂಗಳಿಂ ತೋಱಿದೆನಾಗಿ ಯಿನ್ನು ಬ್ರಹ್ಮವ ನಿರಾಕಾರವೆಂದು ಬಯಲ್ಗೆಡೆದು ನರಕಕ್ಕಿಳಿಯಲಾಗದು. ಮುನ್ನೊರ್ವ ಸನತ್ಕುಮಾರನು ಪರಬ್ರಹ್ಮವೆಂಬುದು ಬಯಲೆಂದನಾಗಿ ದಿವ್ಯಸಹಸ್ರವರುಷ ಒಟ್ಟೆಯಾಗಿರ್ದ. ಇದನಱಿದು ಇನ್ನು ಈ ಪರಿಯಲಖಿಳೋಪನಿಷತ್ ಶ್ರುತಿ ಸ್ಮೃತೀತಿಹಾಸ ಪುರಾಣಾಗಮಾದಿ ವಾಕ್ಯಂಗಳ್ ಪಲವುಂಟು... ಇವನಱಿದು ಲೋಕದೊಳಗೆ ಬ್ರಹ್ಮದೊಡಕೆಂಬ ನಾಣ್ಣುಡಿಗೆ ಸಾಕಾರ ಸಿದ್ಧಾಂತವಂ ಮಾಡಿ ಶಿವಾದ್ವೈತಮಂ ಪ್ರತಿಷ್ಠಿಸಿ ಪರಮಾರ್ಥದ ತೊಡಕಂ ಬಿಡಿಸಿ ಸುಸೂತ್ರವಂ ಮಾಡಿ ತತ್ತ್ವವಿದೆಂದು ತೋಱುವ ಜ್ಞಾನಾಂಜನದೀಪ್ತಿಯೆಂದರಿವುದಿದಂ" (೨೨-೭೩) ಎಂಬಲ್ಲಿ ನಿರಾಕಾರ ಸಾಕಾರ ಸಿದ್ಧಾಂತವನ್ನು ಮಂಡಿಸಿ ಬ್ರಹ್ಮದೊಡಕನ್ನು ಬಿಚ್ಚಿರುವುದು ಸ್ಪಷ್ಟವಾಗಿದೆ.

"ಈ ಕೃತಿ ಎಲ್ಲಾಕೃತಿಯ ಹಾಗೆ ತರು ಗಿರಿ ಖಗ ಮೃಗಾದಿ ಸ್ತ್ರೀವ್ಯಾವರ್ಣನೆಯ ಪೊಗಳಿ ಕರ್ಣಕ್ಕೆ ಸೊಗಸ ಪುಟ್ಟಿಸುವುದಲ್ಲ. ಪರಮಾರ್ಥವನಲ್ಲದೆ ಪೊಗಳುವುದಿಲ್ಲ. ಗುರುಲಿಂಗದ ಘನ ಮಾಹೇಶ್ವರಾಧಿಕ್ಯವನಲ್ಲದೆ ಪೊಗಳುವುದಿಲ್ಲ. ಅದಕ್ಕೆ ಶ್ರುತಿ ಸ್ಮೃತಿ ಪುರಾಣಾಗಮ ವಾಕ್ಯಂಗಳರ್ಥವನೂ ಯೋಜಿಸಿಕೊಂಡು ಆನೆಯ ಮಾನದೊಳಗಡಗಿಸುವಹಾಗೆ ಒಂದೊಂದೇ ಷಟ್ಪದಿಯೊಳಗೆ ಪೇಳುತ್ತಂ ಬರಬೇಕು. ಈ ಕೃತಿಯ ಸೇರಿಸುವ ಶರಣಕವಿಯ ಆಯಾಸವನೂ ಏಕೋನಿಷ್ಠರಪ್ಪ ಸಜ್ಜನ ಸಾತ್ತ್ವಿಕ ಸದೈವ ಸಾಹಿತ್ಯ ಮಾಹೇಶ್ವರರು ಚಿತ್ತೈಸುವುದು" (ಮೂರನೆಯ ಸಂಧಿ, ಆದಿಯ ವಚನ) ಎಂಬುದರಿಂದ ಕೃತಿಯ ಸ್ವರೂಪ ವೇದ್ಯವಾಗುತ್ತದೆ.

ಕವಿ ಶಿವಪುರಾಣ, ಸ್ಕಾಂದಪುರಾಣ, ಬ್ರಹ್ಮಾಂಡಪುರಾಣ ಕೂರ್ಮಪುರಾಣ, ಮಾನವಪುರಾಣ, ಸೌರಪುರಾಣ, ಆದಿತ್ಯಪುರಾಣ, ಶಾಂಭಪುರಾಣ—ಇವೇ ಮುಂತಾದ ಪುರಾಣಗಳಿಂದಲೂ, ಶಿವಗೀತೆ, ಭಗವದ್ಗೀತೆ, ಕಾಳಿಕಾಖಾಂಡ, ಮಹಾಭಾರತ, ಋಗ್ವೇದ, ಯಜುರ್ವೇದ, ಶಿವಸಂಕಲ್ಪ, ಶ್ವೇತಾಶ್ವತರೋಪನಿಷತ್, ಸನತ್ಕುಮಾರ ಸಂಹಿತೆ, ಮಾನವೀಯ ಸಂಹಿತೆ ಮುಂತಾದ ಶಾಸ್ತ್ರಗ್ರಂಥಗಳಿಂದಲೂ ತನ್ನ ಗ್ರಂಥಕ್ಕೆ ಸಾಕ್ಷಿಗಳನ್ನು ಒದಗಿಸಿದ್ದಾನೆ. ಈ ಕವಿಯ ಉಭಯ ಭಾಷಾ ಪಾಂಡಿತ್ಯಕ್ಕೆ:

ಅಱಿವಡಲ್ಪಾಶ್ರಯಮ
ವಱಿಯಲ್ಪಫಲದಂಗ
ಳಱಿ ಬಱಿಯ ನಿಸ್ಸಾರಧರ್ಮವನಿತುಂ
ಪರಿಕಿಸೆ ಮಹಾಶ್ರಯಂ
ಪರಮ ಕಲ್ಯಾಣದಮಿ
ದೊರೆಯೆ ಶಿವಧರ್ಮವೊಂದೇಯೆಂದುದಂ (೩-೬)

ಅಲ್ಪಾಶ್ರಯಾನಲ್ಪ ಫಲಾಂ ಸ್ತ್ವಸಾರಾನನ್ಯಾನ್ ಧರ್ಮಾನ್ ಪ್ರಾಹುರ್ವಿಶ್ವೇ ದ್ವಿಜೇಂದ್ರಾಃ। ಮಹಾಶ್ರಯಂ ಬಹುಕಲ್ಯಾಣರೂಪಂ ವದಂತಿ ಸಂತಃ ಶಿವಧರ್ಮ ಮೇಕಮ್ ॥9॥ (೩-೯)

ಎಂತಖಿಳ ಪ್ರಾಣಿಗಳ
ನಂತವಜ್ಜೆಗಳಮುಮ
ದಂತಿವಜ್ಜೆಯೊಳಡಂಗುವ ಮಾಳ್ಕೆಯಿಂ
ಕಂತುಜಿತ ಧರ್ಮದೊಳ
ನಂತಭೇದದ ಧರ್ಮ
ವಂತವೆಯ್ದಿಹವೆಂದ ಸೌರಾದಿಯಂ

ಯಥಾ ದ್ವಿಜಾ ಹಸ್ತಿಪದೇ ಪದಾನಿ ಸಂಲೀಯಂತೇ ಸರ್ವಸತ್ತ್ವೋದ್ಭವಾನಿ
ಏವಂ ಧರ್ಮಾಶ್ಶೈವಧರ್ಮೇ ತು ಸರ್ವೇ ಸಂಲೀಯಂತೇ ನಾತ್ರ ಚಿತ್ರಂ
ಮುನೀಂದ್ರಾಃ
(೩-೧೦)

ಇತ್ಯಾದಿಗಳು ಸ್ಪಷ್ಟ ನಿದರ್ಶನಗಳಾಗಿವೆ. ಒಟ್ಟಿನಲ್ಲಿ ಸಾನಂದ ಚರಿತೆ—

ಇದು ಪುರಾಣದ ಸಾರ
ವಿದು ಶ್ರುತಿಸ್ಮೃತಿಯುಳುಮೆ
ಯಿದು ಶಿವಾಗಮದೊಂದು ಗೂಢಾರ್ಥವು

ಇದು ತತ್ತ್ವದೀಪವಿಂ
ತಿದು ಶಿವಾದ್ವೈತವಿಂ
ತಿದು ಸತ್ಪಥಪ್ರತಿಷ್ಠಾ ಪದ್ಧತಿ ೧-೨೫

ಚರಿತೆ ಸಾನಂದೇಶ
ಚರಿತೆ ಜಗದಾನಂದ
ಚರಿತೆ ಪಂಚಾಕ್ಷರೀ ವರಮಹಿಮೆಯು
ಚರಿತೆ ಶಿವಭಕ್ತಿಗಿದು
ಚರಿತೆ ಗುರುನಿಷ್ಠೆಗಿದು
ಚರಿತೆ ಸತ್ಪಥಕೆ ತಾನೆಂತೆಂತೆನೆ ೨೬

ಎಂಬಂತೆ ಇದು ವಿವಿಧ ದೃಷ್ಟಿಕೋನಗಳನ್ನೊಳಗೊಂಡು ಬ್ರಹ್ಮದೊಡಕೇ ಮುಂತಾದ ಕಠಿನ ಶಾಸ್ತ್ರ, ಸಿದ್ಧಾಂತ ವಿಷಯಗಳಿಂದ ಕೂಡಿ ಭಾಷ್ಯಸ್ಥಾನಾಪನ್ನ ಪ್ರಕರಣಗ್ರಂಥ ವಾಗಿ ಪರಿಣಮಿಸಿದೆ. ಶಾಸ್ತ್ರಾನುಭವವಿಲ್ಲದವರಿಗೆ ಇದನ್ನು ಓದಿ ಅರ್ಥೈಸಿಕೊಳ್ಳುವುದು ಕಷ್ಟಸಾಧ್ಯವಾಗಿದೆ. ಕವಿ 'ಇಕ್ಕಿದೆಂ ಶ್ರುತಿ ನಿಚಯ ಮುಡಿಗೆಯನಿಕ್ಕಿದೆಂ ಶಾಸ್ತ್ರಾದಿ ಮುಡಿಗೆಯನಿಕ್ಕಿದೆಂ ಶೈವಾಗಮಾದಿಯ ವಾಕ್ಯಮುಡಿಗೆಯಿಂದಂ' (೯-೧೨) ಎಂಬಂತೆ ಮುಡಿಗೆಯಿಕ್ಕಿದ್ದಾನೆ. ಅಲ್ಲದೆ 'ನೆರೆದ ನಿಗಮಾಳಿಯೊಳು ಕಥೆಗಳನುಱೆ ಸಸಾಕ್ಷಿಕವಾಗೆ ಪೊಸತೆನಲೊರೆದೆ ಸಾಸಿರದೈದನೂಱಱಿಂದಱಿಯೆ ಕಿಱಿದಱೊಳೆ' ಎಂಬಂತೆ ಸಾವಿರದೈನೂರು ಪದ್ಯಗಳಲ್ಲಿ ಸಾಸಿವೆಯಲ್ಲಿ ಸಪ್ತಸಾಗರವ ತುಂಬಿದಂತೆ ಬಹು ಪರಿಶ್ರಮದಿಂದ, ವಿವೇಚನೆಯಿಂದ, ವಿವೇಕದಿಂದ, ವಿನಯದಿಂದ ರಚಿಸಿರುವ ಈ ಶಾಸ್ತ್ರ ಕೃತಿ ಸಹೃದಯರಾದ ಶಾಸ್ತ್ರಜ್ಞರಿಗೆ ಧರ್ಮಮರ್ಮಜ್ಞರಿಗೆ ಪರಿಶೀಲನಾರ್ಹವಾಗಿದೆ.

ನಂದೀಶ್ವರ ಪಂಚಾಕ್ಷರೀ ಸಿದ್ಧ. ಇವನ ಶಿಷ್ಯರು ಸನಕ, ಸನಂದ, ಸನಾತನ, ಸನತ್ಸುಜಾತ, ಸನತ್ಕುಮಾರರು. ಇವರಲ್ಲಿ ಸನತ್ಕುಮಾರನು ಬಯಲ ಬ್ರಹ್ಮವಾದಿ ಯಾಗಿ ಶಿವನು ಪ್ರತ್ಯಕ್ಷವಾದಾಗಲೂ ಪ್ರತ್ಯಕ್ಷನಾದ ಶಿವನ ರೂಪನ್ನು ಪ್ರಾದೇಶಿಕ ಮಾತ್ರವೆಂದು ನೋಡಿಯೂ ನೋಡದೆ ಒಂಟೆಯಂತೆ ಮೋರೆ ತಿರುಗಿಸಿ ಮೇಲ್ಮುಖ ನಾಗಿ ಧ್ಯಾನಮಗ್ನನಾದ ಕಾರಣ ನಂದಿಕೇಶನು ಒಂಟೆಯಾಗೆಂದು ಶಪಿಸಿದನು. ಕೊನೆಗೆ ಸನತ್ಕುಮಾರನು ಗುರು ನಂದೀಶ್ವರನಿಗೇ ಮೊರೆಬಿದ್ದು ಗುರುಕರುಣ ಪಡೆದು ಶಿವಪಂಚಾಕ್ಷರಿಯ ಅನುಗ್ರಹವಾಂತು ಶಿವಪಂಚಾಕ್ಷರೀ ಮಹಿಮಾ ಸಮರ್ಥಕ ಕಥೆಯೊಂದನ್ನು ಅರುಹಬೇಕೆಂದು ಬೇಡಿಕೊಳ್ಳಲು ಸ್ಕಾಂದಪುರಾಣದ ಕಥೆಗಳಲ್ಲಿ ಶಿರೋ ಮಣಿಯಾಗಿರ್ಪ ಪಂಚಾಕ್ಷರೀಸಿದ್ಧನಾದ ಸಾನಂದನ ಕಥೆಯನ್ನು ಬೋಧಿಸಿದನು. ಈ ಸಾನಂದನ ಕಥೆಯೇ ಈ ಪ್ರಕರಣ ಗ್ರಂಥವಾದ ಶಾಸ್ತ್ರಕಾವ್ಯದ ಕಥಾವಸ್ತು. ಈ ಕಥೆಯನ್ನು ಅವನ ಬಾಲಲೀಲೆ, ಶಿವಪೂಜಾಸಕ್ತಿ, ಶಿವಕಥಾಶ್ರವಣಾಸಕ್ತಿ, ಮಾರ್ಕಂಡೇಯ

ಕಥಾಶ್ರವಣಸಂದರ್ಭದಲ್ಲಿ ವರ್ಣಿಸಿದ ಶಿವಧರ್ಮೋತ್ತರದ ನರಕವರ್ಣನೆ, ನರಕಿಗಳ ಯಾತನೆ ಇವುಗಳನ್ನು ಕೇಳಿ ಮಹಾಕರುಣೆ ಉಕ್ಕಿ ಬಂದು ನಾರಕಿಗಳನ್ನು ಶ್ರೀ ಮಹಾ ಪಂಚಾಕ್ಷರೀ ಮಂತ್ರದಿಂದ ಉದ್ಧರಿಸಿ ಶಿವಲೋಕಕ್ಕೈದಿದ ಪರಿಯನ್ನು ವಿವರಿಸಿದ್ದಾನೆ. ಈ ಶಾಸ್ತ್ರಕಾವ್ಯದಲ್ಲಿ ನಲವತ್ತಾರು ಪ್ರಕರಣಗಳಿವೆ. ಈ ಪ್ರಕರಣಗಳು ಶಿವಧರ್ಮಕ್ಕೆ ಪೂರಕವಾಗುವಂತೆ ಈ ಕಥೆಯನ್ನು ಕಥೋಪನಿಷತ್ತು (೧-೧೧) ಎನಿಸುವಂತೆ ಒಂಭತ್ತು ಸಂಧಿಗಳಲ್ಲಿ ಎಂಟನೂರ ಎಂಭೈತ್ತೈದು ಸಾಕ್ಷಿಗ್ರಂಥಗಳೊಂದಿಗೆ ವಿವಿಧ ಛಂದಸ್ಸುಗಳಲ್ಲಿ ಮನಂಬುಗುವಂತೆ ಕುಮಾರ ಪದ್ಮರಸ ರಚಿಸಿದ್ದಾನೆ.

ಸಾನಂದ ಚರಿತೆಯನ್ನು ಓದುವಲ್ಲಿ ಒಂದು ವಿಶಿಷ್ಟಕ್ರಮ ಇದ್ದಂತೆ ಕಂಡು ಬರುತ್ತದೆ. ಇದರಲ್ಲಿ ಹೇಳಿರುವ ವಿವಿಧ ರಾಗ, ತಾಳಗಳು ಇದಕ್ಕೆ ನಿದರ್ಶನವಾಗಿವೆ. ಈ ಕೃತಿಯಲ್ಲಿನ ಆಕರಗ್ರಂಥಗಳ ಪರಿಶೀಲನೆಯು ಹಲವಾರು ರೀತಿಯಲ್ಲಿ ಈ ಸಿದ್ಧಾಂತ ಪರಿಶೀಲನೆಗೆ ಉಪಯುಕ್ತವೆನಿಸುತ್ತದೆ.

ಪಾಲ್ಕುರಿಕೆ ಸೋಮನಾಥನ ಗಣಸಹಸ್ರನಾಮವು ಶಿವಶರಣ ಶರಣೆಯರ ಚರಿತ್ರೆಗೆ ಹೇಗೆ ಒಂದು ಮೈಲಿಗಲ್ಲಾಗಿದೆಯೋ ಅದೇ ರೀತಿಯಲ್ಲಿ ಸಾನಂದ ಚರಿತೆಯ ಕೊನೆಯ ಸಂಧಿಯಲ್ಲಿ ಮಹೇಶನ ಆಸ್ಥಾನದಲ್ಲಿದ್ದಂತೆ ವರ್ಣಿತವಾಗಿರುವ ಶಿವಭಕ್ತರ, ಶರಣಶರಣೆಯರ, ಪ್ರಮಥರ ಮತ್ತು ಕೆರೆಯ ಪದ್ಮರಸರ ನಾಮಾವಳಿಗಳೂ ಸಹ ಮತ್ತೊಂದು ಚರಿತ್ರೆಯ ಮೈಲಿಗಲ್ಲೆನಿಸಿ ಚರಿತ್ರಕಾರರಿಗೆ ತುಂಬ ಸಹಾಯಕವಾಗಿವೆ. ಈ ಪದ್ಧತಿಯನ್ನೇ ಅನುಸರಿಸಿ ತರುವಾಯ ಬಂದ ಶಿವತತ್ತ್ವಚಿಂತಾಮಣಿ, ವೀರಶೈವಾಮೃತ ಮಹಾಪುರಾಣ, ಚೆನ್ನಬಸವ ಪುರಾಣ, ಗುರುರಾಜ ಚಾರಿತ್ರ ಈ ಕೃತಿಗಳಲ್ಲಿ ನೂತನ ಶರಣರ ನಾಮಾವಳಿಗಳೂ ಸೇರ್ಪಡೆಯಾಗಿರುವುದರಿಂದ ಚರಿತ್ರೆಗೆ ಮಿಗಿಲಾದ ಸಹಾಯವಾದಂತಾಗಿದೆ.

ಸಾನಂದ ಚರಿತೆಯನ್ನು ವಿವಿಧ ಛಂದಸ್ಸಿನಲ್ಲಿ ರಚಿಸಲಾಗಿದೆ. ೧, ೨, ೩, ಮತ್ತು ೫ನೆಯ ಸಂಧಿಗಳು ಕುಸುಮ ಷಟ್ಪದಿಯಲ್ಲಿಯೂ ೭, ೮ ಮತ್ತು ೯ನೆಯ ಸಂಧಿಗಳು ಭಾಮಿನಿ ಷಟ್ಪದಿಯಲ್ಲಿಯೂ, ನಾಲ್ಕನೆಯ ಸಂಧಿ ಲಲಿತರಗಳೆಯಲ್ಲಿಯೂ, ಆರನೆಯ ಸಂಧಿ ಉತ್ಸಾಹರಗಳೆಯಲ್ಲಿಯೂ ರಚಿತವಾಗಿವೆ. ೪ ಮತ್ತು ೬ನೆಯ ಸಂಧಿಗಳ ಮೊದಲು ಮತ್ತು ಕೊನೆಯಲ್ಲಿ ಒಂದೊಂದು ಕಂದ ಪದ್ಯ ಇದೆ.

ಸಾನಂದ ಚರಿತೆಯನ್ನು ಮೂರು ಪ್ರತಿಗಳ ಆಧಾರದಿಂದ ಸಂಪಾದಿಸಲಾಗಿದೆ. ಇವುಗಳಲ್ಲಿ ಎರಡು ಓಲೆಯಪ್ರತಿಗಳು, ಒಂದು ಕಾಗದದ ಪ್ರತಿ. ಇವುಗಳನ್ನು ಕ್ರಮವಾಗಿ ಕ, ಖ, ಗ, ಎಂದು ಹೆಸರಿಸಲಾಗಿದೆ.

'ಕ' ಪ್ರತಿ :- ಇದು ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಕೆ. ೩೬ ನಂಬರಿನ ಓಲೆಯಪ್ರತಿ. ಇದರಲ್ಲಿ ೧೩೩ ಪತ್ರಗಳಿವೆ. ಈ ಪ್ರತಿಯು ಉದ್ದ ೧೭'', ಅಗಲ-೨''. ೧,೮೩, ೧೩೨ ಈ ಪತ್ರಗಳ ಅಂಚು ಸ್ವಲ್ಪ ಮುರಿದಿದೆ.

ಕೊನೆಯ ಪತ್ರವಾದ ೧೩೩ ಪತ್ರದ ಆದಿಯಲ್ಲಿ ಎರಡು ಸಾಲುಗಳಿವೆ. ಇಲ್ಲಿಗೆ ಈ ಕೃತಿ ಮುಕ್ತಾಯವಾಗುತ್ತದೆ. ಈ ಪ್ರತಿಯ ಅಕ್ಷರಗಳು ಸ್ಪಷ್ಟವಾಗಿಯೂ ಸುಂದರವಾಗಿಯೂ ಇವೆ. ಶಕಟರೇಫವನ್ನು ಪ್ರತಿಯಲ್ಲಿ ಬಳಸಿದೆ. ಒಂದೆರಡೆಡೆ ಇದನ್ನು ತಪ್ಪಾಗಿಯೂ ಬಳಸಿದೆ. ಇದು ಉತ್ತಮವಾದ ಪ್ರತಿ. ಇದರಿಂದ ಅಚ್ಚಿನ ಕರಡು ಪ್ರತಿಯನ್ನು ಸಿದ್ಧಪಡಿಸಿದೆ.

'ಖ' ಪ್ರತಿ:—ಈ ಪ್ರತಿ ಸಮಗ್ರವಾಗಿದೆ. ಪತ್ರಸಂಖ್ಯೆ ೮೭ ರಿಂದ ೧೮೨. ಇದು ೧೩.೮'' ಮತ್ತು ೧.೮'' ಉದ್ದ ಅಗಲಗಳು ಉಳ್ಳದ್ದಾಗಿದೆ. ಪ್ರತಿಯ ಬಲ ಭಾಗದ ಅಂಚಿನಲ್ಲಿ ಕೆಲವು ಪತ್ರಗಳು ತ್ರುಟಿತವಾಗಿವೆ. ಈ ಪ್ರತಿಯಲ್ಲಿ ಶಕಟರೇಫವನ್ನು ಬಳಸಲಾಗಿದೆ. ಪ್ರತಿ ಸಾಧಾರಣವಾಗಿದೆ.

'ಗ' ಪ್ರತಿ:—ಇದು ಕನ್ನಡ ಅಧ್ಯಯನ ಸಂಸ್ಥೆಯ ಕೆ. ಬಿ. ೧೪೬ನೆಯ ನಂಬರಿನ ಕಾಗದದ ಪ್ರತಿ. ಇದರಲ್ಲಿ ೨೬೭ ಪುಟಗಳಿವೆ. ಇದು ೭.೩'' ಮತ್ತು ೫.೮'' ಉದ್ದಳತೆಗಳುಳ್ಳದ್ದಾಗಿದೆ. ಪ್ರತಿ ಸಮಗ್ರವಾಗಿದೆ. ಶಕಟರೇಫವನ್ನು ಬಳಸಿದೆ. ಇದರ ಪಾಠಾಂತರಗಳು ಸಾಧಾರಣವಾಗಿವೆ.

ಮೇಲಿನ ಮೂರುಪ್ರತಿಗಳಲ್ಲಿ 'ಕ' ಪ್ರತ್ಯೇಕವಾಗಿ ನಿಲ್ಲುತ್ತದೆ. 'ಖ' 'ಗ' ಪ್ರತಿಗಳು ಒಂದು ಗುಂಪಿಗೆ ಸೇರುತ್ತವೆ. ಇವೆರಡಕ್ಕೂ ತುಂಬ ಸಾಮ್ಯವಿದೆ. ಇವು ಒಂದರಿಂದ ಒಂದು ಹುಟ್ಟಿದವು ಎಂದು ಹೇಳಲು ಬರುವಂತಿದೆ. ಸಂಸ್ಕೃತ ಶ್ಲೋಕಗಳ ಸಂಖ್ಯೆಯನ್ನು ಗುರುತಿಸುವಾಗ 'ಖ' 'ಗ' ಪ್ರತಿಗಳು ಒಂದೇ ತೆರನಾಗಿವೆ. 'ಕ' ಪ್ರತಿಯಲ್ಲಿ ಕೆಲವೆಡೆ ಬೇರೆ ರೀತಿಯಾಗಿ ಗುರುತಿಸಲಾಗಿದೆ. ಪದ್ಯ ಮುಗಿದ ನಂತರ ಕೊನೆಯಲ್ಲಿ ಎಂದರೆ, ಇತ್ಯಾದಿ ಎಂದು ಹೇಳುವಾಗ 'ಕ' ಪ್ರತಿಕಾರ ಕನ್ನಡ ಪದ್ಯಕ್ಕೆ ಸಂಬಂಧಿಸಿದ ಉದಾಹರಣ ಸಂಸ್ಕೃತ ಶ್ಲೋಕಗಳನ್ನೂ ಬೇರೆ ಬೇರೆ ಪುರಾಣಗಳಿಂದ ಹಲವು ಶ್ಲೋಕಗಳನ್ನೂ ಕೊಟ್ಟು ಮೊದಮೊದಲು ಕೊಡುವ ಪುರಾಣ ಶ್ಲೋಕಗಳ ಸಂಖ್ಯೆಯನ್ನು ಹೇಳದೆ ಕೊನೆಯಲ್ಲಿ ಕೊಡುವ ಪುರಾಣಶ್ಲೋಕದ ಸಂಖ್ಯೆಯನ್ನು ಮಾತ್ರ ಸೂಚಿಸುತ್ತಾನೆ. ಆದರೆ 'ಖ' 'ಗ' ಪ್ರತಿಕಾರರು ಮೊದಲಿನಿಂದ ಕೊನೆಯವರೆಗೆ ಕೊಟ್ಟ ಪುರಾಣಗಳ ಒಟ್ಟು ಶ್ಲೋಕಗಳ ಸಂಖ್ಯೆಯನ್ನು ಕೊಟ್ಟಿರುತ್ತಾರೆ. ಎಂದರೆ ಇಲ್ಲಿ ಶ್ಲೋಕಗಳ ಸಂಖ್ಯೆ ಹೆಚ್ಚುವುದು ಸಹಜವಾಗಿದೆ. ಒಟ್ಟಿನಲ್ಲಿ ಮೂವರು ಪ್ರತಿಕಾರರೂ ಯಾವ ಶ್ಲೋಕವನ್ನೂ ಬಿಟ್ಟಿಲ್ಲ. ಆದುದರಿಂದಲೇ ಆಯಾಯ ಸಂಧಿಯಲ್ಲಿ ಬಂದಿರುವ ಸಂಸ್ಕೃತ ಶ್ಲೋಕಗಳ ಕ್ರಮಸಂಖ್ಯೆಯನ್ನು ಕೊಟ್ಟಿದೆ.

ಕನ್ನಡ ಅಧ್ಯಯನ ಸಂಸ್ಥೆಯಿಂದ ನಾನು ನಿವೃತ್ತನಾದಮೇಲೆ ಅಪ್ರಕಟಿತವಾದ ಈ ಸಾನಂದಚರಿತೆಯ ಸಂಪಾದನಾಕಾರ್ಯವನ್ನು ನನಗೆ ವಹಿಸಿ ಇದನ್ನು ಪ್ರಕಟಿಸಿದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕರಿಗೆ ನಾನು ಕೃತಜ್ಞನಾಗಿದ್ದೇನೆ.

ಈ ಕೃತಿಯಲ್ಲಿ ಬಂದಿರುವ ಸಂಸ್ಕೃತಶ್ಲೋಕಗಳನ್ನು ಪರಿಶೀಲಿಸಿಕೊಟ್ಟು ಕೃತಿಯ ವಸ್ತುವಿಚಾರ, ಪೀಠಿಕೆ ಇವನ್ನು ಸಿದ್ಧಪಡಿಸುವಲ್ಲಿ ಉಪಯುಕ್ತ ಸಲಹೆಗಳನ್ನು ನೀಡಿ ಈ ಗ್ರಂಥಸಂಪಾದನೆಯಲ್ಲಿ ನನಗೆ ನೆರವಾದ ಪ್ರಾಚ್ಯವಿದ್ಯಾ ಸಂಶೋಧನಾಲಯದ ವಿದ್ವಾನ್ ಎಮ್. ಎಸ್. ಬಸವರಾಜಯ್ಯನವರನ್ನು ವಿಶೇಷವಾಗಿ ಸ್ಮರಿಸುತ್ತೇನೆ. ಅಚ್ಚಿಗೆ ಸಿದ್ಧಪಡಿಸಿದ್ದ ಈ ಗ್ರಂಥದ ಹಸ್ತಪ್ರತಿಯನ್ನು ಸಂಪೂರ್ಣವಾಗಿ ಓದಿ ಉತ್ತಮ ಸಲಹೆಗಳನ್ನು ನೀಡಿದ ಕನ್ನಡ ಅಧ್ಯಯನ ಸಂಸ್ಥೆಯ ಸಂಪಾದನ ವಿಭಾಗದ ಉಪನಿರ್ದೇಶಕರಾದ ಶ್ರೀ ಎನ್. ಬಸವಾರಾಧ್ಯ ಅವರಿಗೂ ಕರಡಚ್ಚನ್ನು ಪರಿಶೀಲಿಸುವುದೇ ಮುಂತಾದ ಕಾರ್ಯಗಳಲ್ಲಿ ನೆರವಾದ ಸಂಪಾದನಾ ವಿಭಾಗದ ವಿದ್ವಾಂಸರಿಗೂ ಕೃತಜ್ಞತಾಪೂರ್ವಕ ವಂದನೆಗಳು. ಈ ಗ್ರಂಥಸಂಪಾದನೆಗೆ ಮಾತೃಕೆಗಳನ್ನು ಎರವಲಾಗಿ ಕೊಟ್ಟು ಸಹಾಯ ಮಾಡಿದ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ. ಹಾ. ಮಾ. ನಾಯಕ ಅವರಿಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಡಾ. ಜಿ. ಎಸ್. ಶಿವರುದ್ರಪ್ಪನವರಿಗೂ ನನ್ನ ಕೃತಜ್ಞತೆಗಳು.

ಮೈಸೂರು.

ಎಸ್. ಬಸಪ್ಪ
ಸಂಪಾದಕ

ಸ್ವಾನಂದ ಚರಿತೆ

ಕುಮಾರ ಪದ್ಮರಸ ವಿರಚಿತ

ಸಾನಂದ ಚರಿತೆ

ಕಥಾಗರ್ಭಸಂಧಿ

ವಚನ॥ ಸಕಲವಿದ್ವಾಂಸರ ಹೇಳಿಕೆ—

ಉ॥ ದೋರಸಮುದ್ರವೆಂಬ ಪೆಸರಿಂ [1]ಕರಮೊ[1]ಪ್ಪುವ ರಾಜಧಾನಿಯೊಳ್
[2]ಧಿ[2]ೀರನೃಸಿಂಹ ಭೂವರ[3]ನಹೋ ಮಹಿಯಂ ಪರಿಪಾಲಿಸುತ್ತಿರ
ಲ್ಕಾ ರಸೆಯಾಣ್ಮನೋಲಗ[3]ಕೆ ಬಂದ[4]ನಗುರ್ವಿಸುತಾಂಧ್ರದೇಶದಿಂ
ಶೌರಿಯ ಭೃತ್ಯನೋಪ್ರೊ ಭುವನತ್ರಯತಾತನೆನಿಪ್ಪನೊರ್ವ[4]ವಂ ೧

ಮ॥ ಶಿವನಿಲ್ಲಾ ಶಿವಭಕ್ತಿಯಿಲ್ಲ ಶಿವಸಿದ್ಧಾಂತಂ [5]ದಲಿಲ್ಲಾ ಮತಂ
ಸುವಿಚಾರ ಸ್ಥಿತಿಗಿಲ್ಲ ನಾಡೆ[5] ವನಜಾಕ್ಷಂ ದೈವ[6]ಮಾ[6] ವೈಷ್ಣವಂ
ಸುವಿಶಾಲಂ ನಿಜಭಕ್ತಿಗೆಂದೆನುತೆ ಪತ್ರಾಲಂಬನಂಗೆ[7]ಯ್ಯೆ ತ
ದ್ಭವಿಯಂ ಪದ್ಮರಸಾರ್ಯರೋಡಿಸಿದರೀ[7] ಸಾನಂದಚಾರಿತ್ರದಿಂ ೨

ಉ॥ [8]ಪಿಂದೆ ಸಮಸ್ತನೀಲಪಟಸಾಂಖ್ಯರ[8] ಬೌದ್ಧರ [9]ಜೈನಭೇದದೊಳ್
ಸಂ[9]ದರ [10]ಭಾಟ್ಟ[10]ತಾರ್ಕಿಕರ ಕೂಡತಿವಾದಿಸಿ [11]ಸೊರ್ಕಿ ಸೂಕ್ತಿಯು
ಳ್ಳೊಂದದಬದ್ಧವಾದಿಯೆನಿಪುದ್ಧತ[11]ವೈಷ್ಣವನಂ ವಿಭಾಡಿಸು
ತ್ತಿಂದುಧ[12]ರಪ್ರತಿಷ್ಠೆಯನೆ ಪದ್ಮರಸರ್ ನೆಗಳ್ದರ್ ಧರಿತ್ರಿ[12]ಯೊಳ್ ೩

---

1 ದೆಸದೊ (ಕ) 2 ವೀ (ಗ) 3 ನಿರುತ್ತಿರೆ ದೇಶವ ಪಾಲಿಸುತ್ತಮಿರ್ಪ ರಮಣೀಯ ರಾಜನ ಸವಿಾಪ (ಕ) 4 ನುಮುಂದ್ರ ದೇಶದಿಂನಾರಣಭೃತ್ಯತ್ರೈ ಭುವನತಾತನೆನಿಪ್ಪ ನದೊರ್ವವೈಷ್ಣ (ಕ) 5 ದಿಟಂ ಮುನ್ನಮಿಲ್ಲ ವಿಚಾರಂ ಪುಸಿ ತಥ್ಯಮಲ್ಲ (ಕ) 6 ನಾ (ಖಗ) 7 ಯ್ಯಲಾ ಭವಿಯೊಳ್ ದೇಸಿ ಗೆಲಿದಂ ಪದ್ಮರಸನೀ (ಕ) 8 ಚಂದ ವಿವೇಕದಿಂದಲತಿ ವೈಷ್ಣವ (ಕ) 9 ನಾರ್ಹತಾಂತರಾಳಂ (ಕ) 10 ಭ್ರಷ್ಟ (ಕ) 11 ವೇದಶಾಸ್ತ್ರದಿಂದಂದು ವಿರೋಧಿ ವಾದಿಯೆನಿಸುತ್ತಿಹ (ಕ) 12 ರೈಕಭಕ್ತಿರಸಪದ್ಮರಸಾರ್ಯನು ಕಾಂಬ್ದುನುರ್ವಿ (ಕ).

ವ ॥ ಸಕಲಜನಸೇವ್ಯ ದೋರಾಂಬುಧಿಯ ರಾಮಣ್ಣಗಳ ಹೇಳಿಕೆ—

* ಕಂ॥ ಪ್ರಭು[1]ತೆಯ ಪೆರ್ಮೆಗಮಾಮಾ[1]
ತ್ರಿಭುವನತಾ[2]ತಾಖ್ಯೆಯಾಂತ[2] ವೈಷ್ಣವ[3]ಸುದ್ಯ
ದ್ವಿ[3]ಭುಪದ್ಮ[4]ಣಾರ್ಯರೊಳ್ ಸೋ
ಲ್ತ[4]ಭಯವ[5]ನೆರೆದಂಘ್ರಿಗೆಱಗಿದಂ ನೃಪಸಭೆಯೊಳ್[5] ೪

ವ ॥ ಹಂಪೆಯ ರಾಘವದೇವರ ವಾಕ್ಯಂ—

ಕಂ॥ [6]ಮಿಹಿರಂಗೆ ತಿಮಿರವಿದಿರೇ
ಸಹಜಕ್ಕೆ ಕಮಾಳವಿದಿರೆ ಪದ್ಮರಸಾರ್ಯಂ
ಗಹಹಾ ತ್ರಿಭುವನತಾತಂ
ಬಹುವಿಧದಿಂ ಬಗೆಯು[7]ಲಿದಿರೆ[7] ತಾನೇ[6] ಕೆಟ್ಟಂ ೫

ವ ॥ ಹುಲಿಗೆಱೆಯ ಮಾಯಿದೇವಪುರಾಣಭಟ್ಟರ ಹೇಳಿಕೆ—

ಕಂ॥ ತನುವೆಂಟುಂ ಶಿವನವು ತ
ತ್ತನುವಿನೊಳಮರ್ದಿರ್ದು ಬೇಱೆ ದೈವಂ ಸಮಯಂ
ತನ[8]ಗೆಂಬ ತಲೆಗಳನೆ ತಱಿ
ದೀ[8]ನಗಂ [9]ಚೆಂ[9]ಡಾಡಲಾಯ್ತು ಮನವಶ್ರಾಂತಂ ೬

ವ ॥ ಗುರುಭಕ್ತಕಾಮಣ್ಣಗಳ ಶ್ಲೋಕಂಗಳು—

ಶ್ಲೋಕ ॥ ಸಂಸಾರರೋಗದಷ್ಟಾನಾಂ ಶಿವಾದ್ವೈತಂ ಮಹೌಷಧಮ್
ಶಿವಸಾಕಾರ ಸಿದ್ಧಾಂತಂ ಸಾನಂದಚರಿತಂ ನಮಃ ॥ ೭
ಶ್ರೀ ಶಿವಾದ್ವೈತಸಾಕಾರಸಿದ್ಧಾಂತಂ ಸಮುದೀರಿತಮ್
ಸಾನಂದಚರಿತಂ ಶಾಸ್ತ್ರಂ ಪದ್ಮರಾಜಮಹಾತ್ಮನಾ ॥ ೮

---

[1] ತನದ ಹೆಮ್ಮೆಗಾಹಾ (ಕ) [2] ತನುವೆನಿಪ್ಪ (ಕ) [3] ನಂತಾ ವಿ (ಕ) [4] ರಸಾಯರ್ ರೊಳಗಿದ (ಕ) [5] ಬೇಡುತ್ತುಮಿರ್ದ ಬಿಳ್ದಿರ್ದೆಳದೆ (ಕ) [6] ಅಹುದಹುದು ಸೂರ್ಯನಿದಿರೊಳ್ ಬಹುತಮವಿದಿರಾಗಬಹುದೆ ತ್ರಿಭುವನ ತಾತಂ ಬಹುವಿಧದೆ ಪದ್ಮನಿದಿರೊಳಗಹಹಕ್ಕಟ ನುಗ್ಗು ನುಸಿಯುದಾಗಿಯೆ (ಕ) [7]ಱುಯುಡೆ(ಗ) [8] ಗೆನಗೆಂಬರ ಶಿರವುಂ ಎ (ಕ) [9] ಸೆಂ (ಕಗ).

* ಹಸ್ತಪ್ರತಿಗಳಲ್ಲಿ 'ಕಂದ'ಕ್ಕೆ ಬದಲಾಗಿ 'ಪದ' ಎಂದು ಕಾಣ್ಬುದುದ್ದಕ್ಕೂ ಇದೆ.

ವ॥ ಇನ್ನು ವಿಶ್ವಣ್ಣಂಗಳ ಹೇಳಿಕೆ—

ಶ್ಲೋಕ ॥ ಸಾನಂದಚರಿತಂ ಶೈವಾದ್ವೈತಂ ಧೂತಮತಾಂತರಮ್
ಶಿವಸಾಕಾರಸಿದ್ಧಾಂತಂ ಪದ್ಮರಾಜೋ ವ್ಯಚೀಕರತ್॥ ೯

ಹರಸಾಕಾರಸಿದ್ಧಾಂತಂ ಸಾನಂದಚರಿತಂ ಸತಾಮ್
ಕಥಯನ್ನಾಗಿದೇವಾರ್ಯಃ ಶಿವಾಯ ಜಯತಾದಿಹಮ್॥ ೧೦

ಶಾ॥ ಶ್ರೀಮದ್ದೇಶಿಕ ಪದ್ಮರಾಜಚರಿತಂ ಸಾಕಾರಸಿದ್ಧಾಂತಕಮ್
ಶೈವಾದ್ವೈತಮಶೇಷದುರ್ಮತಕುಲಧ್ವಾಂತಪ್ರಭಾವಲ್ಲಭಮ್
ಸಾನಂದಸ್ಯ ಚರಿತ್ರಮತ್ರ ಜಗತಿಪ್ರಖ್ಯಾಪಯಂತಂ ಮುದಾ
ನಾಗಾರ್ಯಂ ಸಮವತ್ವಶೇಷಜಗದಾರಾಧ್ಯಂ ಭವಾನೀಧವಃ॥ ೧೧

ವ॥ ಕರ್ಣಾಭರಣರ ಹೇಳಿಕೆ—

ಚಂ॥ ಪರಸಮಯಾಂಧಕಾರ ಘನಚಂಡಕರಂ ಹ[1]ರಿಯೆಂ[1]ದು ಸಾಱ[3] ಧಿ
ಕ್ಕರಿಸುವ ವಾದಿಯಂ ಸಕಲವೇದಪುರಾಣಪುರಾತನೋಕ್ತಿಯಿಂ
ದೊರಸು[2]ವೊಡು[2]ರ್ವರಾತಳದೊಳೊರ್ವನೆ ಶೈವತಟಾಕಪದ್ಮ ಪ
ದ್ಮರಸನನಂತಶಾಸ್ತ್ರಸರಸಂ ಬೆರಸಂ ಪರದೈವಜೀವರಂ ೧೨

ಕಂ॥ [3]ಲತೆಯುಂ ಖಗಮುಂ ಮೃ[3]ಗಮುಂ
ಸತಿಯುರುಮಂ ಪೊಗಳ್ದು ಕವಿತೆಯು ನೀಗದೆ ಪಾ
ರ್ವತಿಯರಸನನೇ ಪೊಗಳ್ದಂ
ಕ್ಷಿತಿಯೊಳ್ ಪದ್ಮರಸಶರಣಕವಿ ಭವಿದೂರಂ ೧೩

ವ॥ ದೇವರಸರ ಹೇಳಿಕೆ—

ಕಂ॥ ಏಕೆ ಬಿಡು ಮತ್ತೆ ಗಳಪದಿ
ರೇಕೋರುದ್ರಂ ದಲೆಂಬ ಶ್ರುತಿವಿಡಿದೆಲ್ಲಾ
ಕಾಕುಮತಂಗಳನಲೆದು ನಿ
ರಾಕರಿಸಿದ ಸತ್ಯಶರಣಕವಿಗಿದಿರುಂಟೇ ೧೪

ವ॥ ಹಂಪೆಯ ರಾಮಣ್ಣಗಳ ಹೇಳಿಕೆ—

ಕಂ॥ ಗುರುವಂ ಹರನಂ ಪಂಚಾ
ಕ್ಷರಿಯಂ ರುದ್ರಾಕ್ಷಿಯಂ ವಿಭೂತಿಯುನೊಲ್ದಾ
ದರಿಪರ್ ಶರಣಕವಿಯ ಪ
ದ್ಮರಸರ ಸಾನಂದಚರಿತೆಯೋದುಗೆ ಶರಣರ್ ೧೫

---

[1] ರಸೆಂ (ಕ) [2] ವನು (ಕ) [3] ರತಿಯಂ ದುರ್ಭ (ಗ)

*

ಮ॥ಸ್ರ॥ ಪರವಾದಿಧ್ವಾಂತಸೂರ್ಯಂ ಕೆಱೆಯ ಪದುಮರಾಜಂ ಸ್ವಗುರ್ವಾಜ್ಞೆಯಿಂದೀ
ಶ್ವರಭಕ್ತರ್ ಮೆಚ್ಚೆಯಾಹಾ ವಿರಚಿಸಿದ ಶಿವಾದ್ವೈತಸಾಕಾರಸಿದ್ಧಾಂ
ತರಸಂ ಸಾನಂದಚಾರಿತ್ರಮನೆ ಪಸರಿಸುತ್ತಿರ್ಪುದೀ ಕ್ಷೋಣಿಗೆಂದುಂ
ಗುರುಭಕ್ತಂ ಕಾರಣಾತ್ಮಂ ವರಗುಣಿ ಜಗದಾರಾಧ್ಯನಾ ನಾಗಿದೇವಂ ೧೬

ಉ॥ ಸಂದ ಪುರಾಣ[1]ದಾ[1]ಗಮದ ವೇದದ ಶೈವಕಥಾವಿತಾನದೊಳ್
ಕುಂದಿನಿತಿಲ್ಲ ಸೇರುವೆ ಚಮತ್ಕೃತಿಯಾದುದು ಮಾ ಮಝು ಲೇ
ಸೆಂದು ಸಮಸ್ತ ಸತ್ಕವಿಜನಂ ಪೊಗಳುತ್ತಿರೆ ಪೇಳ್ದನೆಯ್ದೆ ಸಾ
ನಂದಚರಿತ್ರಮಂ ಕೆಱೆಯ ಪದ್ಮರಸಂ ಬಹುಶಾಸ್ತ್ರಕೋವಿದಂ ೧೭

ಕಂ॥ ಛಂದದ ಪೌರಾಣಾಗಮ
ವೃಂದದ ಹೃದಯಮದು ಶೈವಪಥವೆಂದೆನೆ ಸಾ
ನಂದಚರಿತ್ರಮನೊರೆದಂ
ಸಂದಿಸಿ ಪದ್ಮರಸಶರಣಕವಿ ಭವಿದೂರಂ ೧೮

ಚಂ॥ ಹರನ ಸಮಗ್ರಭಕ್ತಿ ನೆಲೆಗೊಂಡ ಪುರಾತನ ಕೇಶಿರಾಜ ಬಾ
ಚರಸರ ಚೊಕ್ಕನಾಯ್ಕರ ದಧೀಚಿಯ ಶಂಕರದಾಸಿಮಯ್ಯನೆಂ
ಬರವರತೇಜದಂತೆ ಮಲೆವನ್ಯಮತಾಂಧರನೊಕ್ಕಲಿಕ್ಕುವಂ
ಶರಣಕವೀಶ್ವರಂ ಕೆಱೆಯ ಪದ್ಮರಸಂ ಪ್ರತಿವಾದಿಭಂಜನಂ ೧೯

ಕಂ॥ ತರು ಗಿರಿ ಲತೆ ನಾರಿಯರಂ
ಮುರಹರನಂ ಪೊಗಳ್ವ ಕಥೆಯ[2]ನಾಲಿಪ[2]ರಲ್ಲದೆ
ಪುರಹರನ ಕಥೆಯನೊಲ್ಲರ್
ಹರ ಹರ ಕರಮರಿದು ಶರಣಕವಿ ಭವಿದೂರಂ ೨೦

ವ॥ ಶಿವದಾಸರ ಹೇಳಿಕೆ—

ಕಂ॥ ಮೃಡಭಕ್ತಿಪಥದ ಸಾರಂ
ಮೃಡನೊಡನೆಣೆಗಾಣ್ಬನೊಡಲ ಸುಡುವತಿಧೀರಂ
ಜಡರಜ್ಞಾನನಿವಾರಂ
ಕಡುಗಲಿ ಪದ್ಮರಸಶರಣಕವಿ ಭವಿದೂರಂ ೨೧

---

1 ಶಾಸ್ತ್ರ (ಗ) 2 ಕೇಳುವ (ಕಗ) * ೧೬ನೆಯ ಪದ್ಯಕ್ಕಿಂತ ಮೊದಲು ಕರ್ಣಾಟಕ ಕವಿ ಚರಿತೆ ಭಾಗ-೧, ಪುಟ ೨೫೧ರಲ್ಲಿ ಜಗದಾರಾಧ್ಯ ನಾಗಿದೇವ ಎಂದು ಅಧಿಕವಾಗಿದೆ.

ವ॥ ದಾವರಸರ ಹೇಳಿಕೆ—
ಕಂ॥ ಏಕೈಕ ವೀರನೊರ್ವನೆ
ಏಕೋರುದ್ರನ ಲಲಾಟನೇತ್ರ[1]ದೊಳೊಗೆದಂ
ದೇ[1]ಕೆ ಶಿವನೆಂಬ ದ[2]ಕ್ಷಂ
ಗಾ ಕುಱಿದಲೆಯಿತ್ತನವ[2]ನ ಪಡಿ ಪದ್ಮರಸಂ ೨೧

ವ॥ ಶರಣಕವಿಯ ಪ್ರಯೋಗಂ—
ಕಂ॥ ಒಳ್ಳೆಗಳುಂ ಗರಳದ ಕರಿ
ಗೊಳ್ಳೆಗಳುಂ ಕೈಪೆಸೊರೆಯ ಬಳ್ಳಿಗಳುಂ ಚೀ
ಟೊಳ್ಳೆಗಳುಂ ದ್ವೈವಾಖ್ಯಕೆ
ಕಳ್ಳರ್ ಗುರುರೂಪವಿಶ್ವನಾಥಂಗೆಣೆಯೇ ೨೨

ವ॥ ಶ್ರೀ ಶಿವಾದ್ವೈತಸಾಕಾರಸಿದ್ಧಾಂತ ಸಾನಂದಚರಿತ್ರಕಥಾಗರ್ಭ ವೃತ್ತಾಂತ ವೆಂತೆಂದೊಡೆ—

ಶ್ರೀಮತ್ಸರ್ವಬ್ರಹ್ಮಾಂಡ ಸಾರ್ವಭೌಮಂಗೆ ಸ್ಕಂದ ನಂದಿ ಭೃಂಗಿ ವೀರಭದ್ರಾದಿ ಪ್ರಮಥಗಣನಾಥಯೂಥಪರಿವೃತಂಗೆ ಸಾಂಬಂಗೆ ಮದ್ಗುರುರೂಪವಿಶ್ವನಾಥಂಗೆ ಸಮಯವಱಿದೊಂದು ಬಾರಿ ಸರ್ವಜ್ಞನುಚಿತಜ್ಞಂ ದ್ವಿತೀಯ ಶಂಕರನಪ್ಪ ನಂದಿಕೇಶ್ವರಂ ದೇವ ದೇವ ಸನಕಾದಿ ಯೋಗಿಗಳೊಳಗೊರ್ವಂ ಸನತ್ಕುಮಾರನೆಂಬವನನೇಕ ಕಲ್ಪಂಗಳಂತರಿಸಿ ಪೋಗಲ್ ಧ್ಯಾನಾರೂಢನಾಗಿರ್ದಪನವಂಗೆ ದೇವರ್ ಕಾರುಣ್ಯಚಿತ್ತರಾಗಿ ನಿಮ್ಮ ಶ್ರೀಮೂರ್ತಿಯಂ ತೋಱಿ ಕೃತಾರ್ಥನಂ ಮಾಡಿ ಕರುಣಿಸಲ್ವೇಳ್ಕುಮೆಂದು ಬಿನ್ನಪಂಗೆಯ್ಯಲದರ್ಕೆ ಮಱುಮಾತುಗುಡದೆ ಮುಗುಳ್ನಗೆಯಂ ನಗುತ್ತಮಿರಲಾಪೊಳ್ತು ಮಾತನುಳಿದು ಮತ್ತಮಾ ಸನತ್ಕುಮಾರನ ಮೇಲಣ ಕಾರುಣ್ಯದಿಂದೊಂದೆರಡು ಬಾರಿಯಾಪರಿಯಲೆ ಬಿನ್ನಪಂ ಮಾಡೆ ಶಿವನೆಂದಂ—

ಕೇಳೈ ನಂದೀಶಾ! ನೀ ನಮಗೆಂದುದನುದಾಸೀನಂ ಮಾಡಿದವರಲ್ತು ನೀಂ ಪೇಳ್ದಾ ಸನತ್ಕುಮಾರಂ ಬ್ರಹ್ಮಾsಹಮೆಂಬಾ ಭ್ರಮೆಯಿಂದಹಂಕರಿಸಿ ನಿರಾಕಾರಭ್ರಾಂತಿಯಿಂ ಶೂನ್ಯವಾಗಿ ಕಂಡು ತಚ್ಚಿತ್ತನಾಗಿರ್ದಪನದುಕಾರಣದಿಂ ಸುಮ್ಮನಿರ್ದಪೆನು[3]ತ್ತಂ ಲೋಕೇಶಂ[3] ಸರ್ವಜಗದ್ಗುರು ಸರ್ವಜ್ಞಂ ಶಿವನಾ ನಂದೀಶ್ವರನ ಚಿತ್ತದಲ್ಲಿರ್ದಾಗ್ರಹವಂ ಚಿತ್ತೈಸಿ ಭಕ್ತಾಧೀನಂ ಪ್ರತ್ಯಕ್ಷ[4]ಮಾ[4]ಗಲ್ ಕಂಡು ಗ್ರಂಥ-'ಅದ್ವೈತಂ ತ್ರಿಷು ಲೋಕೇಷು ನಾದ್ವೈತಂ ಗುರುಣಾ ಸಹ' ಎಂಬ ತಮ್ಮ ಯೋಗಗ್ರಂಥಾರಂಭದ ಗುರುವಱಿಯದ ಮೂಢಂ ಬಯಲುಗನಪ್ಪ ಸನತ್ಕುಮಾರಂ ಶೂನ್ಯಹೃದಯಾಂಧಂ, ಕಣ್ಮುಚ್ಚಿ

---

1 ದೆ ಪುಟ್ಟಿನ್ನೇ (ಕ) 2 ಕ್ಷನ ನೀಳರಿಸಿಯೆ ಶಿರವನರಿದ (ಕ) 3 ತ್ತುಂ (ಗ) 4 ನಾ (ಗ).

ಗೋಣಂ ನಿಮಿರ್ಚಿ ಬಲ್ಗರಂ ಪೊಡೆದಂತೆ ಬೆಬ್ಬನೆ ಬೆಱತಿರೆ ಮೂದಲಿಸುವಂತೆ ನಗುತ್ತುಂ ಶಿವಂ ಮೊಗಮಂ ನೋಡೆ ನಾಣ್ಚಿ ತಲೆಗುತ್ತಿ ಶಿವ ಶಿವಾ ಮಹಾದೇವ ಈ ಕಷ್ಟ ನಿಷ್ಠುರ ನಪ್ಪ ದುಷ್ಟ[1]ನೊಟ್ಟೆಯಂ[1]ತಿರ್ದಪನೆಂದು ಆ ಸಂದೀಶ್ವರಂ ನೆನೆವಲ್ಲಿಂ ಮುನ್ನವಾ ಸನತ್ಕುಮಾರಂ ಪೂರ್ವ[2]ಜನ್ಮವಳಿ[2]ದೊಟ್ಟೆಯಾಗಿ ತನ್ನ ಹಾಳಾದ ಪೇರೊಡ[3]ಲ್ಗೆ[3] ನಾಡಕಾಡ ಸೊಪ್ಪೆಲ್ಲವಂ ನಿಶ್ಶೇಷವಾಗಡಸುತ್ತಂತಱುವತ್ತುದಿವ್ಯಸಹಸ್ರಾಬ್ದಂಬರಮಾ ತೆಱದಿಂ ತೊಟ್ಟನೆ ತೊಳಲ್ದು ಬ[4]ಟ್ಟ[4]ಸರಿಬಂದು ಬೇಸತ್ತಿರೆ ಮುನ್ನಂ ತನಗೆ ತೋಱಿದ ಶಿವ[5]ನ ಶ್ರೀ[5]ಪದವಂ ಕಂಡಂದಿನ ಪುಣ್ಯಗೌರವದಿಂ ಪರಮವೈರಾಗ್ಯಮೊದವಿ ಬೆರ್ಚಿ ಬಿಸುಸುಯ್ದು ಸನತ್ಕುಮಾರಂ ವಿಸ್ಮಿತನಾಗಿಯಕ್ಕಟಕ್ಕಟಾ ಸೋಽಹಂ ಸೋಽಹಮೆಂದು ಬೆಂದ ಮೋಹದಿಂದಿಂದುವರಂ ಬಕ್ಕಟಬಯಲೊಡನೆ ಪೋರ್ದುಯೆನಗುಳ್ಳಾಯುಮಂ ಜ್ಞಾನಮಂ ಬಱಿದೆ ಬಱಿಕೆಯ್ದು ಹಾಳಾಗಿ ಬಕ್ಕಟ ಬಯ[6]ಲ್ಗೆ[6] ಬೀಳ್ದು ಕೆಟ್ಟೆನೆನ್ನ ಮೇಲಣ ಕಾರುಣ್ಯದಿಂದಂದು ತೋಱಿದ ಶಿವನ ಶ್ರೀಮೂರ್ತಿಯಂ ಪ್ರಾದೇಶಿಕಮೆಂದು ಕಂಡು ಗರ್ವಿಸಿಯಾ ಶಿವನ ಗಣೇಶ್ವರರೊಳಗೊರ್ವ ನಂದೀಶನ ಉದಾಸೀನದಿಂದಖಂಡಾದ್ವಯ ಪರಿಪೂರ್ಣವಪ್ಪ ಪರಬೊಮ್ಮವಾನೆಂದುಕೊಂಡಿರ್ದಾನೆ ಬ್ರಹ್ಮವಾಗೊಟ್ಟೆಯಾದೆಂ ಚಿಃ ಸುಡೆನ್ನೀ ಬೆಂದ ಬಯಲ ಬಿಮ್ಮಿನಹಂಕಾರಜ್ಞಾನವನೆಂದು ಕೊಕ್ಕರಿಸಿ ಲೇಸಾಗಿ ಹೇಸಿ ಇನ್ನಿದನುಪಯೋಗವೆಂದಾ ಯೋಗಮಂ ಬಿಸುಟ್ಟು ನಾಣ್ಚಿ ಇನ್ನಾ ಶಿವನಲ್ಲಿಗಾನೆಯ್ದಲೇಸಱಿವನೆಂದೆಲ್ಲಿ ಕೆಟ್ಟುದನಲ್ಲಿಯಱಸಿ ಕಾಣ[7]ಲ್ವೇಳ್ಕುಮೆಂ[7]ದಾ ಸದ್ಗುರುವಪ್ಪ ಸಂದೀಶನ ಶ್ರೀಚರಣಾರವಿಂದಧ್ಯಾನಾರೂಢನಾಗಿ ಅನೇಕ ಕಲ್ಪಂಬರಂ ತಪಂಬಟ್ಟೊಟ್ಟೆತನಮಂ ಭವಿತನಮಂ ನೀಗಿಯಾ ಸಂದೀಶ್ವರನಿಂ ಗುರುಕಾರುಣ್ಯಮಂ ಪಡೆ[8]ದು[8] ಶಿವಭಕ್ತಿಪಥನಿರತನಾಗಿ ವಿನಯದಿಂದೆಲ್ಲಮಂ ತಿಳಿದು ಸರ್ವಜ್ಞನೆನಿಸಿ ಶ್ರೀ ಪಂಚಾಕ್ಷರಿಯ ಘನವನನೇಕ[9]ವೇಳೆ[9] ಕೇಳ್ದು ತೃಪ್ತಿಯಿಲ್ಲದೆ ಶ್ರೀ ಗುರುವೆಯ್ನೆನಗೀ ಮಂತ್ರಸಾಮರ್ಥ್ಯ ವಿಷಯವಾಗಿರ್ಪುದೊಂದು ಕಥೆಯಂ ಕರುಣಿಸಿದಲ್ಲದೆನ್ನ ಮನದಾರ್ತಂ ತೀರದೆನಲದರ್ಕಾ ನಂದೀಶಂ ಹೃಷ್ಟನಾಗಿ ಮುನ್ನನಾದಿಯಲ್ಲಿ ತನಗೆ ಶಿವಂ ಪೇಳ್ದ ರಹಸ್ಯವಪ್ಪ ಸ್ಕಂದಪುರಾಣದ ಕಥೆಗಳಿಗೆ ಶಿರೋಮಣಿಯಾಗಿರ್ದ ಸಾನಂದ ಚರಿತ್ರದ ಕಥೆ ತಾನೆ ಇವನ ಚಿತ್ತದಾರ್ತತೆಯಂ ಪರಿಹರಿಸುವುದೆಂದಱಿದು ನಂದೀಶಂ ಪೇಳ್ದನದೆಂತೆನೆ—

ಕೇಳಾ, ಮಗನೆ ಸನತ್ಕುಮಾರ! ಆದಿಯಲ್ಲಿ ಪೂರ್ಣವಿತ್ತನೆಂಬ ಋಷಿಗೆ ಶಿವ ಕಾರುಣ್ಯದಿಂ ಪಂಚಾಕ್ಷರಂಗಳೆ ಪಂಚಭೌತಿಕ ಶರೀರವಾದುದೆಂಬಂತೆ ಸಾನಂದನು ದಯಿಸಿ ಸದ್ಗುರು ಪ್ರಾಪ್ತನಾಗಿಯಾ ನಾಮಂ ತನಗನ್ವರ್ಥಮಾಗೆ ಶಿವನಿಂ ಸಮರೂಪ

---

[1] ನುಷ್ಟದಂ (ಖ) [2] ಜ್ಞಾನವಳಿಯ (ಖ) [3] ಲಿಂಗೆ (ಕ) [4] ಳ್ಕೆ (ಗ) [5] ನಂಘ್ರಿ (ಖ) [6] ಲಿಂಗೆ (ಕ) [7] ಲ್ಪೇಕೆಂ (ಕ) [8] ದುಂ (ಖ) [9] ಬಾರಿ (ಕ).

ಸಮನಿತ್ಯತ್ವದೊಳಗಾದಖಿಳ ವರಂಬೆರಸು ಗಣೇಶತ್ವಮಂ ಪಡೆದು ತನಗೆ ನಿಯಮಂ ಗಳುದಯಕಾಲದಲ್ಲಿ ಶಿವಲಿಂಗಾರ್ಚನೆಯುಂ ಮಾಡಿ ಶಿವಶಾಸ್ತ್ರಾಗಮಾಳೋಚನೆಯುಂ ಮಾಳ್ಪಂ ಪಗಲಿನವಸರದೊಳ್ ನಿಯಮವಾಗಿ ಜಂಗಮಾರೋಗಣೆ ಮುಖ್ಯವಾದಾ ರಾಧನೆಯುಂ ಮಾಳ್ಪನಲ್ಲಿಂದಂ ಮೇಲೇನಾನುಂ ಪಗಲುಳಿದೊಡೆಯದನಂತೆ ಕಳೆಯಲಾ ಱದೆ ಶಿವನ ಕ್ರೀಡಾವಿನೋದ ಕಥೆಗಳಂ ಕೇಳ್ವನಿರುಳಿನವರಸದೊಳ್ ಪರಿಮಿತದೊಳಾಡಿ ಹಾಡಿ ಬೆಳಗಂ ಮಾಳ್ಪನಿಂತಿಂತು ತ್ರಿಕಾಲ ನಿಯಮವಂ ನಡಯಿಸುತ್ತಿರಲೊಂದು ದಿನಂ ಶೈವೋಕ್ತವೆಂಬ ದಿವ್ಯಾಗಮದೊಳಗಣ ಶಿವಧರ್ಮ ಶಿವಧರ್ಮೋತ್ತರವಂ ಕೇಳುತಿರಲ ಲ್ಲಿರ್ದ ನರಕಾಖ್ಯಾನಂ ಬರಲದಂ ಕೇಳ್ದು ಮನದೊಳ್ ನೊಂದು ಶಿವ ಶಿವೆಂದು ವಿಸ್ಮಯಂಬಟ್ಟು ಕಿವಿಯ ಮುಚ್ಚಿಕೊಂಡಾ ಪ್ರಾಣಿಗಳ ಮೇಲಣ ದಯೆಯಿಂ ಪರಾರ್ಥ ನಿಧಿಯಾ ನರಕಿಗಳ ನೋವಂ ಮಾಣಿಸುವೆನೆಂದಾಕ್ಷಣಂ ಸಮಸ್ತ ಗಣೇಶರ್ವೆರಸಿ ಪುಷ್ಪ ಕವನೇಱಿಯಲ್ಲಿಗೆ ಬಿಜಯಂಗೆಯ್ಯೆಯಾ ಧರ್ಮನುತ್ಸವದಿಂದಿದಿರ್ಗೊಂಡರ್ಚಿಸಿ ತನ್ನಲ್ಲಿ ಗವರ್ ಬಿಜಯಂಗೆಯ್ದ ಪ್ರಸ್ತುತವನಾಲಿಸಿಯುವರ್ ಬೆಸಸಲಱಿದವನೆಂದಂ ದೇವ ದೇವ ಮುನ್ನೊರ್ಮೆ ತನಗೆ ಮಾರ್ಕಂಡೇಯಾವಜ್ಞೆಯಿಂದಾದಪಮಾನವಿಂತೆಂದೆಲ್ಲವಂ ಬಿತ್ತರಿಸಿ ಬಿನ್ನಪಂಗೆಯ್ದು ದೇವ ಅದುಕಾರಣದಿಂ ನೀವು ಬೆಸಸಿತಂ ತೋಱಲ್‌ಬಹುದು ಬಾರ ದೆಂದೆನಲಮ್ಮಂ ದೇವ ನೀವು ಕರುಣಿಸಿತೆನಗಲಂಘ್ಯಂ ಮಹಾಪ್ರಸಾದವೆಂದಾ ಸಾನಂದ ದೇವರಂ ಬಿಜಯಂಗೆಯ್ಸಿಕೊಂಡುಪೋಗಿಯತಳವಿತಳಾದಿ ಭುವನದಿಂ ಕೆಳಗೆ ದೀಪ ಮಾಲೆಯ ನೆಲೆಯಂ ತೋರ್ಪವೊಂದೊಂದಕ್ಕೆ ಪ್ರತ್ಯೇಕ ಪ್ರತ್ಯೇಕ ಪಂಚಪ್ರಧಾನರೊಂದು ಕೋಟಿ ನಾಯಕ ನರಕಂ ಗಣಿಸಲರಿದೆನಿಪ ಪರಿವಾರ ನರಕವನುಳ್ಳ ಘೋರಾನುಘೋರಾದಿ ನರಕ ಚಕ್ರವರ್ತಿಗಳಿರ್ಪ ನರಕದ ನೆಲೆವಿಡಿದಿಪ್ಪತ್ತೆಂಟು ಬಿಡುದಾಣಂಗಳಿಂ ಕೆಳಗೆ ತಟ್ಟ ತಳ ದಟ್ಟಡಿಯಲೆಕ್ಕಲನಂತಿರ್ಪ ನರಕವನೊಂದನುಳಿದೆಲ್ಲಾ ನರಕಂಗಳುಮನಾ ಯಾತನೆ ಗಳುಮಂ ಪಾಪಂಗಳನುಂಡು ನವೆದು ತೀರುವವಸಾನಂಗಳುಮಂ ಬಿನ್ನಪಂ ಮಾಡುತ್ತಂ ಸಮಸ್ತನರಕಂಗಳಂ ತೋಱಿಸಿಯದೊಂದನೇಕುಳುಪಿದೆಯೆನೆ ಧರ್ಮನೆಂದಂ ದೇವ ದೇವ ಚಿತ್ತೈಸುವುದನಾದಿಯಾಗಿಯಾ ನರಕದೊಳ್ ಪೊಕ್ಕರೆಂದುಂ ಪೊಱಮಡುವರಲ್ಲಂ ನಿತ್ಯನರಕಿಗಳಾಗಿರ್ಪರದುಕಾರಣದಿಂ ಬಿನ್ನೈಸಲಂಜಿಯುಳುಪಿದೆನೆನಲಾದಡದೊಂದರ್ಕೆ ಬಂದ ವಿಶೇಷವೇನೆಂದಾಗ್ರಹಂಮಾಡಲ್ ದೇವ ಬಿನ್ನಪವಿದೊಂದಾಗ್ರಹವನುಳಿಯಿ ಮೆಂದು ಮೆಯ್ಯಿಕ್ಕೆ ಏಳೇಳು ಕೌತುಕವದೇನೆಂದೊಡಂ ಪೇಳಲ್ವೇಳ್ಕುಮೆನಲವಂ ಚಿತ್ತ ದೊಳ್ ನೊಂದಿವರಾಗ್ರಹಂ ತನ್ನಧಿಕಾರಕ್ಕೆ ಕೇಡಿಂಗೆ ಕಾರಣವೆಂದು ಮನದೊಳ್ ನೆನೆವು ತ್ತೆಂದಂ–ದೇವ [1]ರುದ್ರಸನ್ನಿಭ ಕೇಳಾ ಈ ಪಾಪಿಗಳೆಸಗಿದ ಪಾಪವಿದೆಂದು ಪೆಸರ್ಗೊ ಳಲಾಗಳೆಯಿವರ್ಗೆ[1] ಬಿಡುಗಡೆಯಪ್ಪುದೆನೆ ಲೇಸಾಯಿತಿದೆನಗೆ ನೆರವೆನ್ನಾಣೆಯದಾವುದು

---

[1] ಹೇಳಬೇಕೆ (ಕ)

ಪೇೞಲ್ವೇೞ್ಕುಮೆನೆ ಧರ್ಮನೆಂದನೀ ಪಾತಕಿಗಳನಂತಕೋಟಿ ಜನ್ಮದೊಳಗೊಂದು ಬಾರಿ ಮಱೆದಾದೊಡಂ ತಮ್ಮ ಬಾಯಿಗೊಂಡು 'ನಮಶ್ಶಿವಾಯ' ಎಂದಱಿಯರನ್ಯರು 'ನಮಶ್ಶಿವಾಯ' ಎಂದು ಮನದೊಳಗಾಗಿಯುಂ ಕಿವಿಯಿಂ ಕೇಳಿ ಅಱಿಯದ ದ್ರೋಹರಿವಂದಿರ ವೃತ್ತಾಂತವಿದೆಂದಾಡಿದಾ ಮಾತ ನರಕಿಗಳ ಕಿವಿಗೆಯ್ದಲಾ ಶಿವಮಂತ್ರಪ್ರಭಾವದಿಂದಾ ಸಾನಂದ ದೇವರ ಕಾರುಣ್ಯ ಕಟಾಕ್ಷನೀರೀಕ್ಷಣ ಮಹತ್ವದಿಂ ನರಕದಿಂ ಪೊಱಮಟ್ಟ ಪ್ರಾಣಿಗಳೆಲ್ಲಂ ದಶಭುಜ ಪಂಚವಕ್ತ್ರರಾಗಿ ಗಣೇಶ್ವರರ ರೂಪಂ ತಳೆದವರೆಲ್ಲಂ ಬಂದು ಸಾನಂದದೇವರ್ಗೆ ಮೈಯಿಕ್ಕಿಯಾ ಸಾನಂದಂ ರೋಮಾಂಚಕಂಚುಕಿತಗಾತ್ರನಾಗಿ ಮೈಮಱೆದು 'ಹರ ಹರ ನಮಶ್ಶಿವಾಯ' ಎಂದು ಮತ್ತೆ ಮತ್ತೆನಲಾ ನರಕಮಂಡಲದ ವೀಥಿವೀಥಿಯೊಳ್ ಸುೞಿಸುೞಿದಶೇಷನರಕದೊಳ್ ನವೆವರಂ ನಿಶ್ಶೇಷವಾಗಿ ತನ್ನೋಪಾದಿಯ ಗಣೇಶ್ವರರಂ ಮಾಡಿ ರುದ್ರಕನ್ನೆಯರೊಡನೆ ವಿಮಾನದೊಳ್ ಸಾಂಬಲೋಕಕ್ಕೆ ಕಳುಪಿ ಸಾನಂದಂ ಎಲೈ ಧರ್ಮ ನಿನಗೆಲ್ಲಾ ಲೇಸುಗಳಾಗಲಿಯಾವಿನ್ನು ಪೋಪೆವೆನೆ ದೇವ ದೇವ ಎನಗಿನ್ನಾವುದು ಬುದ್ಧಿ ಆವುದು ನಿಯೋಗವೆಂದು ಧರ್ಮಂ ಬಿನ್ನೈಸಲದರ್ಕೇನುವೆನ್ನದೆ ಮುಗುಳ್ನಗೆಯುಂ ನಗುತ್ತಾ ಮಾರ್ಗದೊಳೆ ಪೋಗಿ ಶಿವನೋಲಗದೊಳಿರ್ದನಿರಲಿತ್ತಲ್ ಯಮನೀ ವೃತ್ತಾಂತವೆಲ್ಲವನೊಡೆಯಂಗಱುಪದಿರ್ದೊಡೆ ಮುಂದೆ ರಾಜದ್ರೋಹಂ ಬಪ್ಪುದೆಂದೆಲ್ಲ ಸಿಪ್ಪಡಿ ದಂಡ ಮುದ್ರೆಯೊಳಗಾದವಂ ಕೊಂಡು ತ್ವರಿತದಿಂ ಪೋಗಿ ಮಂದರದರಮನೆಯ ಬಾಗಿಲೊಳಿರ್ದೊಳಗಣ್ಗಱುಪಿ ಪಿತರ ಕರಯಿಸಿಕೊಂಡು ಶಿವನೋಲಗದ ಮುಂದೆಲ್ಲವನಿಳುಪಿ ಮೈಯಿಕ್ಕಿಯಲ್ಲಿಯಾದ ವೃತ್ತಾಂತವೆಲ್ಲವಂ ಬಿನ್ನವಿಸಿಯಧಿಕಾರವನೊಪ್ಪಿಸಿದೆಂ ದೇವ ಈ ಪರಿಯಲನೇಕ [1]ವೇಳೆ[1] ನಿಮ್ಮವರಿಂದೆನಗೆ [2]ಪಿಂ[2]ದೆಯಾದ[3]ಪ[3]ಮಾನವಂ ದೇವರಱಿವಿರೆಂದು ನೆವದಿಂ ಸಾನಂದನಂ ದೂಱಿದ ಧರ್ಮನ ಬಿನ್ನಪಕ್ಕೆ ನಗುತಂ ಶಿವನೆಂದಂ—

ಕೇಳೆ[4]ಲಾ[4] ಧರ್ಮ ಅನಾದಿಯಾಗಿ ನಿನ್ನ ನರಕ[5]ಲೋಕಕ್ಕೆ[5]ರಡು ಪಗೆಯೆನ್ನ ಭಕ್ತ[6]ರುಂ[6] ಶ್ರೀಪಂಚಾಕ್ಷರಿಯುಮೆಂದಱಿಪಿ ನಿನಗೆಯಾನೆ ನಿಯಾಮಿಸಿ ನಿಯೋಗಮಂ ಕೊಟ್ಟೆವೆಂದವನಂ ತಿಳುಪಿ ಮರಳಿ ಜೋಳೈಸಿ ಬುದ್ಧಿಗಲಿಸಿ ಸಂತವಿಟ್ಟು ಇಲ್ಲಿಂ ಮೇಲೆ ಕೇಳೈ ಧರ್ಮ ! ಕಲ್ಪನೆ ತೀರಿದ ದೇವದಾನವ ಮಾನವಾದಿಯುಂ ತಂದಿನ್ನೊಂದು ಚಿಂತೆಯಿಲ್ಲದೆ ಅಧಿಕಾರವಂ ನಡಯಿಸುವುದೆಂದವನಂ ಬೀಳ್ಕೊಟ್ಟು ಪೋಗೆಂದು ಕಳುಪಿ ಶ್ರೀಗುರುರೂಪವಿಶ್ವನಾಥಂ ಶ್ರೀಸಾನಂದದೇವರಂ ತಳ್ಕೈಸಿ ತೊಡೆಯ ಮೇಲಿರಿಸಿ ಲಾಲಿಸಿ ಪಾಲಿಸಿ ನೆರದಖಿಳ ಗಣೇಶ್ವರರ ಮುಂದೆ ಕೊಂಡಾಡಿ ಮುಂಡಾಡಿ ಮೆಱೆದನೆಂದು ಶ್ರೀ[7]ಸದ್ಗುರುವಪ್ಪ ಶ್ರೀನಂದಿಕೇಶ್ವರಂ ತನ್ನ ಶಿಷ್ಯನಪ್ಪಾ ಸನತ್ಕುಮಾರಂಗೆ ಶ್ರೀ ಪಂಚಾಕ್ಷರಿಯ ಘನಮುಂ ಮಾಹೇಶ್ವರಾಧಿಕ್ಯಮುಂ ಪೇೞ್ದ ಶ್ರೀಸಾನಂದಚರಿತ್ರದ ಕಥಾಗರ್ಭವಾಕ್ಯಾರ್ಥ ಸೂಚನಂ ಸಮಾಪ್ತಂ.[7]

---

1 ಬಾರಿ (ಕ) 2 ಹಿಂ (ಕ) 3 ವ (ಖಗ) 4 ಲೊ (ಗ) 5 ಕ್ಕೆ (ಖ) 6 ನುಂ (ಗ)
7 ಶಿವಾದ್ವೈತ ಸಾಕಾರಸಿದ್ಧಾಂತ ಸಾನಂದ ಚರಿತೆಯ ಮೊದಲ ಸಂಧಿ (ಗ)

ಮೊದಲನೆಯ ಸಂಧಿ

ಕುಸುಮ ಷಟ್ಪದಿ :

ರಾಗ— ರಾಮ[1] ಕ್ರಿಯಾ[1]

ಪಲ್ಲವ ॥ ಪರಮ ಪಂಚಾಕ್ಷರೀ
ವರಸಿದ್ಧ ಸಾನಂದ
ಚರಿತೆಯಂ ನಂದೀಶರೊರೆದರೊಲ್ದು

ವಚನ ॥ ಅಂದು ನಿಜಸುತಂಗೆ—

ಪದ ॥ ಶ್ರೀನಗಜೆಯಧಿಪ ಪಂ
ಚಾನನ ಷಡಕ್ಷರೀ
ದಾನಿ ಮದ್ಗುರುರೂಪವಿಶ್ವನಾಥಂ
ಸಾನಂದಚರಿತೆ ಜಗ
ದಾನಂದಚರಿತವಿದ
ನಾನೊಲ್ದು ಕೀರ್ತಿಪುದನೀವುದೆಂದು ೧

ಸಾನಂದನಂ ಪೊಗಳ
ಲಾ ನಾಕಿಗಳುಮಱಿಯ
ರಾನನಂ ಸಾಸಿರದನಂತನಱಿಯಂ
ದಾನವರಿಪು ಬ್ರಹ್ಮ
ರೇನಾನುಮಱಿಯರ್ ಭ
ವಾನಿಯಣುಗಂ ನಂದಿನಾಥನಱಿವಂ ೨

ಪಿರಿದುವಾರುಂ ಮುನ್ನ
ವಿರಚಿಸಿದರಿಲ್ಲೆಂದು
ಧರೆಯೊಳೊಳುಗನ್ನಡದಿ ಪಸರಿಸೆಂದು
ಗುರುರೂಪವಿಶ್ವಪತಿ
ಕರುಣಿಸಿದ ತೆಱದಿನಾಂ
ವರಪುರಾಣಾರ್ಥ[2]ಮಂ[2] ಕನ್ನಡಿಸಿದೆಂ ೩

---

[1] ಕ್ರಿ (ಕಖ) [2] ನಂ (ಕ)

ಉಮೆಯಾಣ್ಮಗಾದಿಕವಿ
ಗಮರವಾ ವಾ[1]ಣೀಶ[1]
ಪ್ರಮುಖರ ಪ್ರತಿಭೆಯೆನಲುಂ ನಾಣ್ಚದೆ
ಸಮೆದ ಕೃತಿಯುಂ ಭಕ್ತಿ
ರಮಣಿಯನುಕೂಲದಿಂ
ಸ್ವಮತಿ ಪರಿಣಾಮಾವಧಿಯೆಂದಿರೆ ೪

ಗುರುರೂಪವಿಶ್ವಪತಿ
ಧರೆಯೊಳೊಗೆದಿರ್ದಾದಿ
ಗುರುಮಲ್ಲಿಕಾರ್ಜುನಪ್ರಭುವೆನಿಸಿದಂ
ವರಮಹಿಮನನುಪಮಾ
ಚರಣನಖಿಳಾಗಮಾ
ಭರಣನಾ ಕಲ್ಲಕುಱಿಕೆಯೊಳೊಪ್ಪುವಂ ೫

ಸುಕರಗುಣನಿಳಯಂಗೆ
ಯಕಳಂಕನೊಗೆದನಾ
ಸಕಳೇಶಮಾದಿರಾ[2]ಜಾರ್ಯ[2]ನೊರ್ವಂ
ಸಕಲಾಗಮಾಚಾರ್ಯ
ಮುಕುರ ಮಾಯ್ದೇವನಾ
ಯಕನೊರ್ವ ಶರಣಪಥಸಂಪನ್ನನಿಂ ೬

ಸಂಗೊಳಿಸಿದಂ ಮಹಾ
ಲಿಂಗ ನಿಷ್ಠಾಪ್ರಾಣಿ
ಜಂಗಮದ ನೇಹವೇ ರೂಪುಗೊಂಡಾ
ತುಂಗಗುಣನಭಿನವ ಶಿ
ವಂ ಗಣೇಶ್ವರನೆಮ್ಮ
ಮಂಗಳಮಯಂ ಕೆಱೆಯಪದ್ಮರಸ[3]ನುಂ[3] ೭

ಶರಣಪಥಸಾರವಂ
ಪರಿಕಿಸುವ ಭರದಿಂದೆ
ಕರುಣಿ ಮತ್ರ್ಯೀಮದಿಂದವತರಿಸಿದಂ

---

1 ಗ್ಗೋರ (ಖ) ಗ್ವರ (ಗ) 2 ಜಯ್ಯ (ಗ) 3 ರುಂ (ಖ) ನೂ (ಗ)

ಹರ ಹರ ಮಹಾದೇವ
ಗುರುರೂಪವಿಶ್ವಪತಿ
ಧರೆಯೊಳಚ್ಚರಿಯೆನಿಸಿ ನಿಜನಾಮದಿಂ ೮

ಆ ಮಹಾವಿಭುವಿನ ಮ
ಹಾ ಮಹಿಮ ಗುರುವಿನ
ಪ್ರೇಮಕಿಂಕರನೆನಿಸಿ ಕರುಣವಡೆದು
ಸೋಮ ಸೋಮಾಭರಣ
ಕಾಮಹರನಭಿರಾಮ
ಭೀಮನಣುಗನ ಕಥಾಸೂಕ್ತವಿದನು ೯

ಹರಚಮೂವರ ಪರಮ
ವಿರಚಿತ ಶ್ಲೋಕಬಂ
ಧುರ ದೇವಭಾಷೆಯಂ ಕನ್ನಡಿಸಿದೆಂ
ಗುರು ಕೆಱೆಯಪದ್ಮರಸ
ವರಸೂನು ಪದುಮಿಗಂ
ಧರೆಯೊಳು ಸ್ತ್ರೀಬಾಲಸಾಧ್ಯವಾಗೆ ೧೦

ಅಂದು ಶ್ರುತಿಗಳವಟ್ಟು
ಸಂದವು ಷಡಂಗಮವು
[1]ಮಿಂ[1]ದೀ ಕಥೋಪನಿಷದಕ್ಕೆಯುಮದರ್ು
ಭೇದದಿಂದಳವಟ್ಟು
ಸಂದ ಷಟ್ಪದಿಗ[2]ಳಿ[2]ವ
ಅಂದವಂ ತಿಳಿವುದೆಮ್ಮಯ ಶರಣರು ೧೧

ಹರಿಯಜದ್ವಿಜರನಱಿ
ದಱಿದು ನಿಂದಿಪ ಗೀತ
ದೊರೆಯೆಂದು [3]ಮೆಚ್ಚುವುದಕ್ಕಾ[3]ಗಮಜ್ಞಾನವುಂಟೆ
ಹರನವರ್ಗೆಂಬ ಪಾ
ರ್ವರ ದುರ್ಜನರ ದೂಷ
ಕರ ಕೊರಲಡಂಗಲುರ್ವರೆಯೊಳಿಂತು ೧೨

---

1 ಯಿಂ (ಗ) 2 ಳ (ಗ) 3 ಪೊರೆವುದಕ್ಕಾ (ಖ)

ಹರನ ವರಗೀತದೊರೆ
ಗೊರೆ ವೇದಶಾಸ್ತ್ರಾದಿ
ಪ್ಪೊರೆಗೊರೆಗಳಾ ಗೀತವೆನೆ ಬುಧಾಳಿ
ಪರಿಪಾಟಿ ಸಾಟಿ ಸರಿ
ದೊರೆಯೆಂದು ಮೆಚ್ಚಿಯಾ
ದ್ಯರ ಗೀತಸಂಚಿತಾರ್ಥಂ ಕೃತಿಯಿದು ೧೩

[1]ಪ್ರು[1]ಸಿಯಿಂದಲೊಗೆದ ಜಗ
ವ್ಪೊಸೆಗು ಹುಸಿ ರಸ ವೃತ್ತಿ
ವಸರಕೆನಲದನೊಲ್ಲದೊಗುವರೆಂದು
ಎಸೆವ ವಿಶ್ವಾಧಿಕನ
ಶಿಶುಗಳಿಂದಱಿದುವಾಂ
ಪೊಸತೆನಿಪ್ಪಚ್ಚ ಶಿವಕಥನವ್ಪೊರೆದೆಂ ೧೪

ಆರಯ್ದು ಬುಧರಿದಂ
ಬಾರಿಪುದು ನಾಡಾಡಿ
ನಾರಕಿ ಕುಕವಿಮಾರ್ಗವಲ್ತುವಲ್ತು
ಆಱಂಗವಾಱಧ್ವ
ವಾಱಕ್ಷರ ಬ್ರಹ್ಮ
ವಾಱಱರ್ಥವೆ ಷಟ್ಪದಿಗಳಾದಿವಂ ೧೫

ಶ್ರುತಿಪುರಾಣಾಗಮ
ಸ್ಮೃತಿ ಕುಸುಮ ಪರಿಮಳದ
ಧೃತಿಯುಂಡು ಪಾಡಿ ರಾಗಿಸಿ ಸುಖದೊಳು
ಜಿತರತಿಪ ಪದಪದ್ಮ
ದತಿಶಯಾವಾಸದೊಳ
ಗಿತರವಱಿಯದೆಯಿ[2]ರ್ಪ[2] ಷಟ್ಪದಿಗಳು ೧೬

ತರುಣನೆನ್ನಂ ನೋಡಿ
ಹಿರಿಯುರುಸುರದೆ ಸುಮ್ಮ
ನಿರಲಾಗದನಸೂಯರಮಲಗುಣರು

---

[1] ಹು (ಕ) [2] ಪ್ಪ (ಕ)

ಗಿರಿಜಾವರಾದ್ವೈತ
ವರಕೃತಿಯಿದಂ ನೋಡಿ
ಧರಣಿಗೞುಪುವುದು ಮೆಱೆವುದು ನಿಮ್ಮವಂ ೧೭

ನಂದೀಶರೆಮ್ಮ ಸಾ
ನಂದೇಶರಾದಿಯಾ
ದಂದಿನ ಪುರಾತನರು ವೇದ್ಯರೊಲಿದು
ಸಂದ ನಿಮ್ಮವರಣುಗ
ನೆಂದೆನಗೆ ಕರುಣದಿಂ
ದಂದವಡಿಸಿಯೆ ತಿ[1]ದ್ದಿ[1] ಪ್ರೋದಿಸುವುದು ೧೮

ಸಂದೇಹಿಯುಂ ಭವಿಯೊ
ಳೊಂದಿ ಚರಿಪನನವರ್ಗೆ
ಳಂದದಾಚರಣವೊರೆವನನುರಿಗನಂ
ಮಂದಮತಿಯುಮನರಿದು
ದಂದುಗಂ ಬಡಿಸುವುದಿ
ದಿಂದುಶೇಖರ ವರಾದ್ವೈತವಱಿಯಾ ೧೯

ಜಂಡೆಯರು ಮುಂಡೆಯರು
ಭಂಡೆಯರು ದಿಂಡೆಯರು
ಮಿಂಡುಗಳಿಗಾಗಲೇಂ [2]ಸಾವಾ[2]ಸಿಯು
ಭಂಡವಸರವೆ ಜೋಗಿ
ತಂಡವೊದಕೆಯೆ ಕಂಡ
ಕಂಡವರ್ಗುಱಿಸಿರಲು ಹುದುಗದೆಯಿದೆ ೨೦

ಏಕನಿಷ್ಠರ್ಗೆ ಲೋ
ಕೈಕವೀರರ್ಗಾ ಪಿ
ನಾಕಿಯಲ್ಲದೆ ಪೆಱರನಱಿಯದರ್ಗೆ
ಲೌಕಿಕವಿದೂರರ್ಗೆ
ಶ್ರೀಕಂಠನಣುಗರ್ಗೆ
ಲೌಕಿಕಮಿದಪ್ಪುದಪ್ಪುದು ತಪ್ಪದೆ ೨೧

---

1 ಬಿ೯ (ಗ) 2 ಸಂನ್ಯಾ (ಕ)

ಪರಮಮತ್ಕೃತಿ ತರಣಿ
ಕಿರಣೋದಯದೊಳು ಮುಂ
ನೆರೆದ ಭವತಿಮಿರವಳಿವುದು ಚಿತ್ರವೆ
ಶರಣಮುಖಸರಸಿರುಹ
ವರ[1]ಳ್ವುದೆನಲೊ[1]ಪ್ಪದೆ
ಶರಣಕವಿನಾಮ ಸಾಮ್ಯವನೀಕ್ಷಿಸೆ ೨೨

ಹರಿಯ ಪೊತ್ತಿಗರಿರದಿ
ದಿರದಿರೇಳ್ಕರ್ಮಿ ನೀಂ
ಪರಿಭವಂಬಡದೆ ಬಕ್ಕಟ ಬಯಲ್ಗಳಂ
ಪರಿಕಪದ್ವೈತಿಗಳ
ನೆರವಿವಗರಣಿಗ ಸರಿ
ಶರಣಕವಿ ಕೃತಿಯಿದಿರೊಳಾಂಪನಾವಂ ೨೩

ಪರವಾದಿತರುಪರಶು
ಪರಸಮಯಗಿರಿಗಶನಿ
ಪರದೈವವಿಪಿನಪಟುದಾವನಿದಿದೆ
ಗುರುಲಿಂಗ ಜಂಗಮದೆ
ಪರವಿಲ್ಲವಿಲ್ಲೆಂದು
ಧರಣಿಯೊಳು ಡಂಗುರಂಬೊಯ್ವುದಿದಿದೆ ೨೪

ಇದು ಪುರಾಣದ ಸಾರ
ವಿದು ಶ್ರುತಿಸ್ಮೃತಿಯುಳುಮೆ
ಯಿದು ಶಿವಾಗಮದೊಂದು ಗೂಢಾರ್ಥವ
ಇದು ತತ್ತ್ವದೀಪವಿಂ
ತಿದು ಶಿವಾದ್ವೈತವಿಂ
ತಿದು ಸತ್ಪಥಪ್ರತಿಷ್ಠಾ ಪದ್ಧತಿ ೨೫

ಚರಿತೆ ಸಾನಂದೇಶ
ಚರಿತೆ ಜಗದಾನಂದ
ಚರಿತೆ ಪಂಚಾಕ್ಷರೀ ವರಮಹಿಮೆಯು

---

1 ಲ್ವುದೆನೊ (ಖಗ)

ಚರಿತೆ ಶಿವಭಕ್ತಿಗಿದು
ಚರಿತೆ ಗುರುನಿಷ್ಠೆಗಿದು
ಚರಿತೆ ಸತ್ಪಥಕೆ ತಾನೆಂತೆಂತೆನೆ ೨೬

ಸಮಬಲಗಣಾಧಿಪರ್
ಕ್ರಮವಱಿದು ಸೇವಿಸ
ಲ್ಕಮಮ ನಂಶನೋಲಗವೆಸೆದುದು
ನಮಿಸೆ ಹರಿಯಜ ಸುರಪ
ರಮರಚಯ ಮುನಿಸಮಿತಿ
ಸಮುಚಿತಾಸನದೊಳಿರೆ ಸಮಯುವಱಿದು ೨೭

ಕೊಡೆ ಮೊಳಗಲು ವಾದ್ಯ
ವಾಡೆ ರಂಭಾಲಲನೆ
ಪಾಡೆ ತುಂಬುರ ಚಂಡಿ ಕೀರ್ತಿಸುತಿರೆ
ನೋಡಲೆರಡನೆಯ ಶಶಿ
ಚೂಡನಂತೆಸೆದಿರಲು
ಮಾಡಿದಂ ಬಿನ್ನಪವನುಚಿತವಱಿದು ೨೮

ಗುರುವೆಯೆನ್ನಯ ಕಲ್ಪ
ತರುವೆ ಕರುಣಾಕರನೆ
ಶರಣಜನ ಶರಧಿವರ್ಧನ ಶಶಾಂಕ
ಪರಮಪಂಚಾಕ್ಷರೀ
ವರಮಹಿಮೆವೊರೆ[2]ದು[2] ಮಿಗೆ
ಧರೆಗೆ ಕೌತುಕದ ಕಥೆವೇಳ್ವುದೆನಲು ೨೯

ಹರುಷ ಮಿಗೆ ಶೈಲಾದಿ
ಕರುಣರಸವೊಸರಿ ಮೇ
ಲ್ವರಿವಂತೆ ನೋಡಿ ಶಿಷ್ಯಂಗೆ ಕೃಪೆಯಿಂ
[3]ಪಿ[3]ರಿದು ಮುನ್ನಿದನಿಂದು
ವರೆ ಕೇ[4]ಳ್ದ[4]ರಿಲ್ಲಯ್ಯ
ಗುರುಭಕ್ತ ಕೇಳೇಕಚಿತ್ತದಿಂದಂ ೩೦

[1] ಠ) ಖ) [2] ಡ (ಖ) [3] ಹಿ (ಕ) [4] ಳ (ಅ)

ಇಂದುಜೂಟನ ಕಂದ
ನಿಂದೊಗೆದ ಶ್ರೀಮಹಾ
ಸ್ಕಂದದಾಖ್ಯಾನಂಗಳಿಗೆ ತಲೆಯಿದೆ
ಯೆಂದು ಕೃಪೆಯಿಂ ಪೇಳ್ದ
ನಂದೊಲಿದು ಶೈಲಾದಿ
ನಂದಾ ಸನತ್ಕುಮಾರಂಗೆ ತಾನೆ ೩೧

ಹರಚರಣ ಸರಸಿರು[1]ಹ[1]
ಕಿರದೆಱಗಿ [2]ಸತ್ಕಥೆಯು
ಪರ[2]ಮಹಿಮೆಯುಂ ನೆನೆದು ನೆನೆದುವುಕ್ಕಿ
ತರತರದ ಬಾಷ್ಪಜಲ
ಪುರವಣಿಸಿ ಸುರಿವುತಿರೆ
ಕರಗಿ ನಿರ್ಭರದ ಗದ್ಗದಿಕೆ ಮಿಕ್ಕು ೩೨

ಹರನ ಪರತರವೆನಿಪ
ವರನಾಮದುನ್ನತಿಯು
ಉರುಮಹಿಮೆಯುಂ ಪೇಳ್ವ ಪದದೊಳಲ್ಲಿ
ಹರಿಯಜರ್ ಸುರಪಾದಿ
ನೆರೆದ ಮುನಿಸಮಿತಿಗಾ
ತುರಿಪ ಪರಮೋತ್ಸವಂಗಳವೆಸೆದ[3]ವು ೩೩

ಸರಿಯಲ್ತುವಲ್ತು ಕೇಳ್
ತರದೇಳುಕೋಟಿಯು
ಕ್ಕರದೊಲಿಗೆ ಕಂಥೆಮಂತ್ರಂಗಳೆಂದುಂ
ಗಿರಿರಾಜಕನ್ಯಕಾ
ವರನಾಣೆಯೆಮ್ಮೃಶಂ
ಕರ ಶರಣರಾಣೆ ಹುಸಿಯಲ್ಲೆಂತೆನೆ ೩೪

ನರಸಮೂಹದೊಳಿರ್ದ
ಶರಣರುನ್ನತಿಯೆಂತು
ಸುರರ ನಡುವೆಂತು ಹರಗಣನಾಥರು

---

[1] ಹಯುಗಳ (ಕ) [2] ಕೃತಿಯುರು (ಕ) [3] ದು (ಕ)

ಹರಿಯಜರೊಳೆಮ್ಮ ಶಂ
ಕರನೆಂತದೇಳ್ಗೋಟಿ
ನೆರೆದ ಮನುಮಾಲೆಯೊಳು ಪಂಚಾಕ್ಷರಿ ೩೫‡

ಸತಿಯರೊಳಗುಮೆ ಸರಿ
ತ್ರತಿಗಳೊಳು ಗಂಗೆ ಪ
ರ್ವತ ನಿಚಯದೊಳು ಮೇರು ಘನವದೆಂತು
ಅತಿಶಯದ ದಯೆಗಳೊಳು
ಜಿತಪುರನ ದಯೆಯೆಂತು
ಕ[1]ತೆ[1]ಗಳೊಳು ಶಿವಕಥನ ಮಹಿಮೆಯೆಂತು ೩೬

ಪುರಹರನ ಮಂತ್ರದೊಳು
ವರಮೂಲಮಂತ್ರವೆಂ
ತುರುಘನಂ ವದನದೊಳಘೋರವದನಂ
ತರತರದ ನಾಮದೊಳು
ಪರತರಂ ಶಿವನಾಮ
ವರರೆ ಪುಂಡ್ರದೊಳು ತಿರ್ಯಕ್‌ತ್ರಿಪುಂಡ್ರಂ ೩೭

ಪರಿಪರಿಯ ಭಕ್ತಿ[2]ಗಂ[2]
ಗುರುಭಕ್ತಿ ಪಿರಿದೆಂತು
ಗುರುಮೂರ್ತಿ ಶಿವನ ಸಾಕಾರದೊಳಗೆ
ಕರುಣಂಗಳೊಳಗೆ ಸ
ದ್ಗುರುಕರುಣವೆಂತಂತೆ
ನೆರೆದ ಮಂತ್ರದೊಳೆಮ್ಮ ಪಂಚಾಕ್ಷರಿ ೩೮

ಒರಸಿ ಕಾಮಾದಿಗಳ
ನೆರೆದ[3]ಘೌಘ[3]ವನಿಕ್ಕಿ
ಯರಿದು ವ್ಯಾಮೋಹಲತೆಗಳ ಬೇರುಮಂ
[4]ಹು[4]ರಿವುದಾಮಿಷವನತಿ
ಕರಿವುದಾಸೆಗಳನಿ
ಟ್ಟುರುಹುವುದು ಮಾಯಾವಿಡಂಬತತಿಯಂ ೩೯

---

[1] ಥೆ (ಕಖ) [2] ಗಾ (ಕ) [3] ಪಾಪ (ಗ) [4] ಹ (ಕ) ವು (ಗ)

‡ (ಗ)ಪ್ರತಿಯಲ್ಲಿ ಈ ಪದ್ಯ ಬಿಟ್ಟುಹೋಗಿದೆ.

ಕೆಡೆಮೆಟ್ಟಿ ಕರ್ಮಮುಮ
ನೊಡೆಮೆಟ್ಟಿ ಬೊಮ್ಮಮುಮ
ನೆಡೆಗ[1]ಲಿ[1]ಸಿ ದಾಂಟಿ ಸಂಸೃತಿಜಲಧಿಯಂ
[2]ಪೊ[2]ಡೆವುದಿಡಿದಡಸಿ ಕಡು
ಹುಡಿಗುಟ್ಟಿ ಕಡಿದುಡಿದು
ವುಡುಗಿ ಸುಡುವುದು ದುರಿತ ಗಿರಿತರುಗಳಂ ೪೦

ಕೆಟ್ಟಸಂಸೃತಿಯೆಂಬ
ನಿಟ್ಟೊಡಲ ಧಂತಿ ಕ
ಟ್ಟೊಟ್ಟೈಸಲಾರ್ಗಮರಿದೆನಿಪುದಿದನು
ನಿಟ್ಟಿಸುವುದಟ್ಟುವುದು
ಕಟ್ಟುವುದು ಸಜಿಸಜಿನೆ
ಮೆಟ್ಟಿ ಸೀಳುವುದು ಪಂಚಾಸ್ಯಮಂತ್ರಂ ೪೧

ಯಮನನಳಿಕಿಪ ಜಂಬು
ಯಮಮೃಗದ ಬೆಳ್ಳಾರ
ವಮಮ ಯಮ ಹರಿಣೆಗಿಕ್ಕಿದ ಬೆಚ್ಚಿದು
ಯಮನ[3]ನಂಜಿ[3]ಸುವ ಅಂಬು
ಯಮನ ಗುಮ್ಮಂ ತಾನೆ
ಯಮನಾಧಿಪತ್ಯ ಘನಮಾರುತನಿದು ೪೨

ನರಕತರು ಪರಶುವಿದು
ನರಕವನದಾವನಿದು
ನರಕೇಭದಳನ ವರಪಂಚಾನನಂ
ನರಕಗಿರಿವಜ್ರವಿದು
ನರಕಾಂಧ ದಿನಪನಿದು
ನರಕಬಲವಜ್ಜಲಧಿವಡಬಾನಲಂ ೪೩

ವೇದಾಗಮಸ್ಮೃತಿಗ
ಳಾದಿಯಾದಿಂಗಡಲೊ
ಳಾದಿಯಲಚಲಭಕ್ತಿಕಡೆಗೋಲೊಳು

[1] ಲ (ಗ) [2] ಹೊ (ಖ) [3] ನಡುಂಗಿ (ಖ) ನದಿರಿ (ಗ)

[1]ಸೋದಿ[1]ಸಿ ಕಡೆದು ಪಡೆದ
ನಾದಿ ಪಂಚಾಕ್ಷರಿಯು
ನೋದಿದಂಗೀವನೀಶಂ ತನ್ನನೆ ೪೪

ಕೆಡುಗು ಹುಳಿಯೆನಲಕಟ
ಜಡವೆನಿಪ ಪಾಲ್ಗಡಲೊ
ಳೊಡೆವೆಳೆದ ಮ[2]ದ್ಯ[2]ದೊಡ ಹುಟ್ಟಿದಮರ್ದಂ
ಕುಡಿದು ಸತ್ತುಂ ಹುಟ್ಟು
ತಡಿಗಡಿಗೆ ನಾಣ್ಬುದೀ
ಯೆಡಚರಂ ನಗುವುದೈ ಪಂಚಾಕ್ಷರಿ ೪೫

ಭವವನಂತದೊಳೊಂದು
ನೆವದಿಂದೆ ನರನಾಗಿ
ಸವಯದೀ ಬೆಂದ ನಾಲಗೆಯಿರಲ್ಕೆ
ಶಿವಮಂತ್ರವಿದಿರೊಳಿರೆ
ತವಕದಿಂ ನೆನೆಯದೇ
ಕವಿದು ನರಕಕ್ಕಿಳಿವುದತಿಕೌತುಕಂ ೪೬

ಹಿಂದೆ ಕೇ[3]ಳ್ದೊ[3]ಮ್ಮೆ ಸಾ
ನಂದನೀ ಮಂತ್ರದಿಂ
ಸಂದಣಿಯ ನಿರಯದುರಿಯೊಳಗಳುರ್ವ
ಗೊಂದಣಿಯ ಪಾಪಿಗಳ
ನಿಂದುಜೂಟನ ಪುರ
ಕ್ಕೊಂದಿಸಿದನೆನಲಾ ಸನತ್ಕುಮಾರಂ ೪೭

ಗಣನೆಯಿಲ್ಲದನೋವಿ
ನುಣಿಸಿಗಗಿದಗಿ[4]ದು[4] ಕುಣಿ
ಕುಣಿದು ಬೇವಾ ಪಾತಕರನೊರ್ಮೆಯೆ
ಅಣಕದಿಂ ಗಣಪನೀ
ಯ[5]ಣು[5]ವನುಚ್ಚರಿಸಿಯಾ
ತ್ರಿಣಯನ ಪುರಕ್ಕೊಯ್ದನೆಂತೆಂದೆನೆ ೪೮

---

[1]ಸಾಧಿ (ಖ) [2] ಧ್ಯ (ಗ) [3] ಳೊ (ಕ) [4] ದ (ಕ) [5] ಣುಗ (ಗ)

ಧರಣಿಯೊಳು ಮುನ್ನ ಭೂ
ಸುರ ಪೂರ್ಣವಿತ್ತನೆಂ
ದೊರೆವಡೆದವಂಗೆ ಪುರಹರನ ಭಕ್ತಿ
ಕರುವಿಡಿದುದೆಂಬಂತೆ
ಶರಣಜನಮುಖಕಮಲ
ತರಣಿಯೆನಲೊಗೆದ ಸಾನಂದನಂದು ೪೯

ಸಿರಿಯಂತೆ ಸುಖದಂತೆ
ಪರದಂತೆ ಗತಿಯಂತೆ
ವರಮುಕ್ತಿಯಂತಮಳಶ್ರುತಿಗಳಂತೆ
ಹರನ ಸದ್ವರದಂತೆ
ಗುರುದಯೆಗಳಂತೆಮ್ಮ
ಶರಣರುನ್ನತಕೀರ್ತಿಯಂತೆಸೆದನು ೫೦

ಶರಣಪದದಂತೆ ಪುರ
ಹರಸಭಾಸ್ಥಳದಂತೆ
ಗುರುರೂಪವಿಶ್ವಪತಿಪುರದಂದದಿಂ
ಗುರುಭಕ್ತಿಯಂತೆ ಸ
ದ್ಗುರುಕರುಣದಂತೆ ಶ್ರೀ
ಪರಮಶಿವಧರ್ಮದಂತಿರ್ದನಣ್ಣಾ ೫೧

ಒಡವೆಳೆಯೆ ಶಾಂತಿದಮೆ
ವೊಡವೆಳೆಯೆ ನೀತಿದಯೆ
ವೊಡವೆಳೆಯೆ ಕಾರುಣ್ಯತತಿಗಳವ[1]ನ[1]
ಒಡವೆಳೆಯೆ ವೈರಾಗ್ಯ
ವೊಡವೆಳೆಯೆ ಭಕ್ತಿ ತ
ನ್ನೊಡವೆಳೆಯೆ ಮುಕ್ತಿ ಬೆಳೆಯಲ್ಕೆ [2]ಬ[2]ಳೆದಂ ೫೨

ನುಡಿಗ[3]ಳಂ[3] ಶಿವಮಂತ್ರ
ದೊಡನೆ ಕಲಿತಂ ಮೆಲ್ಲ
ನಡಿಯಿಡಲು ಕಲಿತನಾದ್ಯರಪಥದೊಳು

---

1 ನಂ (ಕ) 2 ಬೆ (ಕಖ) 3 ಳನು (ಕ).

ಮೃಡನ ಪ್ರಸಾದದೊಡ
ನೊಡನುಣಲ್ಕಲಿತ ಬೀ
ಳುಡೆಯೊಳುಡಕಲಿತು [1]ಬ[1]ಳೆದಂ ಮಹಿಮನು ೫೩

ಆನಂದನಖಿಳಜಗ
ದಾನಂದಮಯನಾಗ
ಲೀ ನಾಮವಾಯ್ತು ಕೇ[2]ಳೆಂದು[2] ತೊಡಗಿ
ಸಾನಂದದೇವನೆಂ
ದೇ ನಾಗಕುಂಡಲನ
ಸೂನುಗನ್ವರ್ಥ ಸಂತತಿಗಳಿಂ[3]ದಂ[3] ೫೪

ಶರಣಸಂತತಿಗೆ ತ
ತ್ಕರುಣವಲರ್ವಿನ [4]ಮಿ[4]ತ್ತು
ವರವಿಭೂತಿಯನುದುಘಸಂಪತ್ತಿಯಿಂ
ಗುರುಕರುಣಮಂ ಪಡೆದು
ಪರಮಾರ್ಥಸಿದ್ಧಿ ನಿಜ
ಕರದೊಳಿರ್ದುದೆ ಉಳಿದವೇವು[5]ವೆಂ[5]ದು ೫೫

ತನಗೆ ಜನ್ಮವ್ರತಂ
ತನುಮನೋವಚನದೊಳ
ಗನುದಿನಂ ಗಿರಿಜಾವರನನರ್ಚಿಪಂ
ಧನವನವನಿಯನಖಿಳ
ವನಿತನಿತುವಸ್ತುಗಳ
ನನುನಯದೆ ಬಿಟ್ಟುಳಿದು ವೈರಾಗ್ಯದಿಂ ೫೬

ತಾಯನಾ ತಂದೆಯಂ
ದಾಯಾ[6]ದ್ಯ[6] ಬಂಧುಗಳ
ಮಾಯೆಯೆಂದೆಲ್ಲರುಮನುಳಿದು ತನಗೆ
ತಾ[7]ಯಿ[7] ತಂದೆಯು ಭಕ್ತಿ
ಯಾಯು ಗುರುಕರುಣವಾ
ದಾಯಂ ನಮಶ್ಶಿವಾಯೆಂಬುದಾಯ್ತು ೫೭

---

[1] ಬೆ (ಕಖ) [2] ಳಂಮ (ಖ) [3] ದಾ (ಗ) [4] ವಿ (ಕ) [5] ದೆಂ (ಗ) [6] ದ (ಖಗ)
[7] ಯು (ಖ) ಯ (ಗ)

[1]ಪ[1]ಸಿವಾಮಿಷಂ ಮಿಥ್ಯೆ
ತೃಷೆ ನಿದ್ರೆಯಾಲಸ್ಯ
ವ್ಯಸನವರಿಷಡ್ವರ್ಗವಿಂದ್ರಿಯತತಿ
ನುಸುಳು ತಾಪತ್ರಯಂ
ಕಿಸು[2]ದೋ[2]ರ್ಪ ಮತ್ಸರಂ
ದೆಸೆ ಹತ್ತಱೊಳು ಸುಳಿಯಲಮ್ಮವವಸಂ ೫೮

ಕಾಮಹರನಣುಗನಾ
ರಾಮದೊಳು ಸುಳಿಯುವಂ
ಶಾ ಮರುನ್ಮಧು ವಿಧುಗಳೆಂಬವಂಜಿ
ತಾಮಸವಸತ್ಯರುಜೆ
ಕಾಮವಳಿಪನ್ಯಾಯ
ವಾ ಮುನಿಪನಿ[3]ರ್ಪೇ[3]ಳು ನೆರೆಯೊಳಿಲ್ಲಂ ೫೯

ಪರಿಪರಿಯ ಪುಷ್ಪದಿಂ
ವರನದಿಗಳಗ್ಫಣೆಯಿ
ನುರುಪರಿಮಳಾನುಲೇಪಾದಿಯಿಂದಂ
ಕರಮೆಸೆವ ಧೂಪದಿಂ
ಪರಮದಿವ್ಯಾನ್ನದಿಂ
ಪರಿಮಿತದ ಗೀತವಾದ್ಯಸ್ತುತಿಗಳಿಂ ೬೦

ಅನುದಿನಂಗಳೊಳಿಂತು
ಮನವುಕ್ಕಿ ಲಿಂಗಕ್ಕೆ
ಘನಮಹಿಮನಾ[4]ರಾಧನೆ[4]ಯನೆಸಗು[5]ತ್ತಂ[5]
ವಿನುತಮತಿ ಬಗೆಗೆ ಬಂ
ದನಿತುಪರಿಯೊಳು ಪೊಗಳು
ತನವರತಮಿಾಶನಂ ನೆನೆವುತಿರ್ಪಂ ೬೧

ಗುರುವೆ ಮದ್ಗುರುರೂಪ
ಗುರುವೆ ಕಾರುಣ್ಯೈಕ
ಶರಧಿ ಕರುಣಾಕರನೆ ಪರಮಗುರುವೆ

1 ಹ (ಗ) 2 ತೋ (ಖ) 3 ರ್ದೇ (ಕ) 4 ರೋಗಣೆ (ಗ) 5 ತುಂ (ಘ)

ಗುರುವೆಯೆನ್ನಯ ಕಲ್ಪ
ತರುವೆ ಸಿರಿಗುರುವೆ ಸ
ದ್ಗುರುವೆ ಗುರುವೆ ಗುರುವೆಯೆನುತ್ತಿರ್ಪನು ೬೨

ಜಿತಪಂಚಬಾಣ ಪಶು
ಪತಿ ಪುರಹರಪ್ರಲಂ
ಬಿತ ನಾಗಕುಂಡಲೋನ್ನತಪಿನಾಕಿ
ಹೃತದೋಷ ಚಂದ್ರಭೃ
ದ್ಧೃತಗರಳ ಹರವಿಶ್ವ
ಪತಿ ಮಹಾಲಿಂಗ ಜಂಗಮ ಸಮೀಪ ೬೩

ಹರ ಮಹಾದೇವ ಶಂ
ಕರ ರುದ್ರ ಶಾಂತ ಪುರ
ಹರ ಶಂಭು ಭರ್ಗ ಗಿರಿಜಾರ್ಧದೇಹ
ನರಸಿಂಹಹರ ಮಹಾ
ಶರಭ ಸರ್ವಜ್ಞ ಮೃಡ
ಹರಿಣಾಂಕಜೂಟ ಶಿವಯೆನುತೆ ಜೋ[1]ಲ್ವಂ[1] ೬೪

ಅಳವಿಯೊಳು ಶಿವಯೆಂಬ
ಕಳಕಳಸ್ವನವಾಗೆ
ಕಳವಳಿಸಿ ತನುಭಾವವಳಿದು ಕಳಿವಂ
[2]ದಳದ[2]ಳನೆ ಪುಳಕದಗೆ
ನಳನಳಿ[3]ಸಿ[3] ಕಣ್ಗಳೊಳು
ಗಳಗಳನೆ ಬಾಷ್ಪಂಗಳಿಳಿದೊಗುತಿರೆ ೬೫

ತೊಡುವೆಡೆಯೊಳಿಡುವೆಡೆಯೊ
ಳುಡುವೆಡೆಯೊಳುಂಬೆಡೆಯೊ
ಳಡರ್ವ ನಿದ್ರೆಯೊಳಿಡಿದ ಸ್ವಪ್ನದೊಳಗೆ
ಪಡುವೆಡೆಯೊಳಿ[4]ರ್ಪ[4]ಡೆಯೊ
ಳಡಿಯನಿಡುವೆಡೆಯೊಳುಳಿ
ದೆಡೆಯೊಳಂ ಮೃಡನನೋರಂತೆ [5]ನೆ[5]ನೆವಂ ೬೬

---

1 ಲ್ಲಂ (ಖ) 2 ಧಳಧ (ಖಗ) 3 ಸೆ (ಗ) 4 ಪ್ಪೆ (ಗ) 5 ನ (ಕ)

ಸೂಡುವೆಡೆಯೊಳ್ ಮೃಡನ
[1]ಪಾ[1]ಡುವೆಡೆಯೊಳ್ ಮೃಡನ
ನಾಡುವೆಡೆಯೊಳ್ ಮೃಡನನೀಕ್ಷಿಪೆಡೆಯೊಳ್
ಮಾಡುವೆಡೆಯೊಳ್ ಮೃಡನ
ಬೇಡುವೆಡೆಯೊಳ್ ಮೃಡನ
ಕೂಡುವೆಡೆಯೊಳ್ ಮೃಡನನೋವಿ[2]ಯೋ[2]ವಿ ೬೭

ಶಿವನೊಳಗೆಯಖಿಳವಂ
ಶಿವನನೆಲ್ಲೆಡೆಯೊಳಂ
ಶಿವನೊಳಗೆ ತಾಂ ತನ್ನೊಳೆಯ್ದೆ ಶಿವನಂ
ಶಿವಭಕ್ತಿಯಿಂತಿಂತು
ಶಿವಮಯದ ಕಣ್ದೊಳಲೆ
ಯವನೊಳಾಯ್ತಾಹ ಶಿವಕಾರುಣ್ಯದಿಂ ೬೮

[3]ದೃಢ[3]ಭಾವವೇ ತಕ್ಕ
ವೆಡೆಗುಡದೆ ಬಲಿತವನ
ನಡೆನುಡಿಯ ಬಗೆದ ಸರಿನೂಲಿನಂತೆ
ಮೃಡನೊಳು ತೊಡಂಕಿ ಬಿಡ
ದಡದರ್ದೆನಲಾಹ ಸಡಿ
ಘಡ ಶರಣನಿರವನಾವಂ ಬಣ್ಣಿಪಂ ೬೯

ಹರಹರ ನಿರಂತರಂ
ಗುರುಪದಧ್ಯಾನ ತ
ತ್ಪರನಿರತನಿರವು ಕಂಗೊಳಿಸಿ ತನ್ನ
ಗುರುಭಾವವೀ ತೆಱದಿ
ವರಮೂರ್ತಿಗೊಂಡುದೋ
ಶರಣನಿರ್ದಿರವೆನಿಸುತಿರಲು ಕಂಡು ೭೦

ಸಂದಣಿಪ ಕರುಣದಿಂ
ದಿಂದುಶೇಖರನಮಲ
ಕುಂದೇಂದುನಿಭನರ್ಧನಾರೀ[4]ಶ್ವರಂ[4]

---

[1] ಡಾ (ಗ) [2] ನೋ (ಕ) [3] ಮೃಡ (ಕ) [4] ಶನಾ (ಕ)

ಮುಂದೆ ತೊಳಗುವ ಲಿಂಗ
ದಿಂದೊಗೆದು ರಂಜಿಸಿದ
ನಂದು ಶ್ರೀಗುರುರೂಪ ವಿಶ್ವನಾಥಂ ೭೧

ತುಷ್ಟನಾದೆನು [1]ಏ[1]ಕ
ನಿಷ್ಠೆಗೆಲೆ ಮಗನೆ ನಿ
ನ್ನಿಷ್ಟವೇನದನೊರೆವುದೆನೆ ಶಿವಂಗೆ
ಹೃಷ್ಟನಾನಂದರಸ
ದಷ್ಟವತಿಭಕ್ತಿಸುಖ
ಪುಷ್ಟನಿರದೆಱಗಿ ಪೊಗಳ[2]ಲ್ತೊ[2]ಡಗಿದಂ ೭೨

ಶರಣಖಿಳಕಲ್ಯಾಣ
ವರಜಟಾಧರ ಶರಣು
ಪರಮಕಲ್ಯಾಣತರ ರಮಣೀಯನೆ
ಶರಣು ಕಲ್ಯಾಣದನೆ
ಕರುಣಾಕರನೆ ಶರಣು
ದುರಿತಾರಿ ಕಾಲಾರಿ ಶರಣು ಶರಣು ೭೩

ಹರ ನಿನ್ನೊಳಗೆ ಜಗಂ
[3]ಪರಮ[3] ನೀನವಱ[3]ೊಳಗೆ
ಪರವೆ ಕೌತುಕ ಚಿತ್ರಕರ್ತ ಸಿದ್ಧ
ನೆರ[4]ದ[4]ಖಿಳವಿಶ್ವಕ್ಕೆ
ಯರ[5]ಸು[5] ವಿಶ್ವೋತ್ತಮನೆ
ಪರಶಿವನೆ ಭವ ಮಹಾದೇವ ಮಹಿಮ ೭೪

ಎಸೆವಷ್ಟಮೂರ್ತಿಗಳ
ನೆಸಗುವಧಿಪತಿಯೆಯಾ
ಗಸ[6]ದೊಱ[3]ಪೆಱ೩ಯನಾಂತ ಗಗನ[6]ಕೇಶ
[7]ಶಶಿ[7]ದಿನಪ ಶಿಖಿಗಳಿಂ
ದಸಮನಯನನೆ ಮಹಾ
ಪೊಸತೆನಿಪ ಮೂರ್ತಿಯದ್ಭುತಕಾಯನೆ ೭೫

---

[1] ಯೆ (ಖಗ) [2] ಲು ತೊ (ಖಗ) [3] ವರದ (ಗ) [4] ವ (ಗ) [5] ಸ (ಗ) [6] ಸಂಚ್ಛಂದ್ರ ಭೃದ್ವ್ಯೋಮ (ಕ) [7] ಸಸಿ (ಕ)

ನೀನೆ ಸೃಜಿಸುವೆ ಭವನೆ
ನೀನೆ ರಕ್ಷಿಸುವೆ ಮೃಡ
ನೀನೆಯಖಿಳವನುರುಹಿ ಕಳವೆ ಹರನೆ
ನೀನೆಯಜಹರಿಸುರರು
ದಾನವರನಂತಂತೆ
ದಾನಿ ರಜ ಸತ್ತ್ವತಮಗುಣದಿನಭವ ೭೬

ಆರಿಗಿನಿತುಪಮಿಸ
ಲ್ಬಾರದತಿದುಸ್ತರಾ
ಪಾರಸಂಸಾರ ವಾರಿಧಿಯನಿದನು
ಮಾರಾರಿ ನಿನ್ನೊಂದು
ಕಾರುಣ್ಯ ನಾವೆಯಿಂ
ಸಾರಿಸುವೆ ತಡಿಗೆ ಶಂಕರನೆ ಹರನೆ ೭೭

ವರ ನಿಜಾವಯವಂಗ
ಳರರೆವೊಂದೊಂದೊಂದೆ
ಕರುಣದಿಂ ರಕ್ಷಿಪವು ಜಗವನಿತು[1]ವಂ[1]
ಹರ ನಿನ್ನ ಶ್ರೀಜಟಾ
ವರ ಭಸಿತದೊಳು ಗಂಗೆ
ನೆರದಿಂಗಿಪೋದಳೆನೆ ಪೊಗಳ್ವನಾವಂ ೭೮

ತ್ರಿಣಯನೆ ಮಹಾದೇವ
ಅಣುವಿಂಗೆ ಸೂಕ್ಷ್ಮತರ
[2]ವ[2]ಣು ಮಹತ್ತಿಗೆ ಮಹೀ[3]ಯಾ[3]ನನುಪಮ
ಗುಣನಿಚಯಕಧಿಪ ನಿ
ರ್ಗುಣ [4]ಶ[4]ರ್ವ ಸರ್ವಜ್ಞ
ಪ್ರಣುತ ಸರ್ವ[5]ಗ[5] ನಿನ್ನ ಪೊಗಳ್ವನಾವಂ ೭೯

ಭೂತಪತಿಯೂಥ ಸಂ
ಗೀತದದ್ಭುತ ನಾಟ್ಯ
ಪಾತಾಳ ರಾಜ್ಯಫಣಿಭೂಷಿತಾಂಗ

---

[1] ಮಂ (ಕ) [2] ದ (ಕ) [3] ಮಾ (ಕ) ಯ್ಯಾ (ಖ) [4] ಸ (ಗ) [5] ಜ್ಞ (ಗ)

ತಾತ ವಿತ್ತೇಶಸಖ
ಶೀತಾಂಶುಧರ ಶಾಂತ
ಮಾತೆ ರಕ್ಷಿಸುವಡೆನಗೀವುದಿದನು ೮೦

ಆರೊ ನಿನ್ನ ವನವಂ
ಗಾರೊ ತೊತ್ತೆನಿಪಾತ
ನಾರವಂಗಿರದೆ ಡಿಂಗರಿಗನವನೆ
ಆರೊ ಭೃತ್ಯಾಂಕಿತನ
ದಾರೊ ಕಿಂಕರನೆನಿಪ
ನಾರವಂಗೆನ್ನ ನಾಳ್ಮಾಳ್ಪುದೀಶ ೮೧

ಭೃತ್ಯವಲ್ಲಭ ನಿನ್ನ
ಭೃತ್ಯಂಗೆ ಭೃತ್ಯ ತ
ದ್ಭೃತ್ಯಂಗೆ ಭೃತ್ಯನೆನಿಪವನವಂಗೆ
ಭೃತ್ಯನೆನಿಸುವುದು ಪುರು
ಷೋತ್ತಮಾದಿಗಲಭ್ಯ
ಭೃತ್ಯಪದವಿಯ ವರವನೀವುದೆನು[1]ತುಂ[1] ೮೨

ಕಡುಚೆಲ್ವುವಿಡಿದಿಡಿದ
ಮೃಡನ ರೂಪಂ ನೋಡಿ
ಬಿಡದಡರ್ದು ನೇಹವಿರ್ಮಡಿಸಿ ತೊರೆದು
ಎಡೆವಿಡದೆ ತೊರೆದು ಕ
ಣ್ಣಡಿಗಡಿಗೆ ಬಾಷ್ಪವಂ
ಘುಡುಘುಡಿಸಿಯೊಡನೊಡನೆ ಸುರಿವುತಿರಲು ೮೩

ಹರನನೀಕ್ಷಿಸವೇ[2]ಡಿ[2]
ಕರೆದು ತನ್ನಂ ತಾನೆ
ಹರಹರ ಶಿವಾನಂದವುಕ್ಕಿ ಮುಗ್ಧಂ
ಪರಮನರ್ಧಾಂಗಿಗಾ
ದರದಿಂದ ತೋರ್ಪನೊರೆ
ದೊರೆದು ಸೇನಾನಿವೃಷಭರಿಗೆ ಮತ್ತೆ ೮೪

---

1 ತಂ (ಖ) 2 ಡೆ (ಖ)

ಸುಧೆಯಿದಾದುದೆಲೆ ಸುಧಾ
ನಿಧಿಯಿದಾದುದೆಲೆ ಮಹಾ
ಷಧಿಯಿದಾದುದಧಿಕತರ ಮಧುವೀದುದೆ
ವಿಧಿಯಿದಾದು[1]ದೆ[1]ನ್ನ ಸುಖ
ನಿಧಿಯಿದಾದುದೆನ್ನಳ್ಕ
ಅಧಿದೈವವಿದುವೀದುದೇಯೆನು[2]ತ್ತುಂ[2] ೮೫

ಹರುಷವಿದೆ ಸರಸವಿದೆ
ಸರಿಸವಿದೆ ಪರುಷವಿದೆ
ಕರುಣವಿದೆ ಹರಣವಿದೆ ವರವೀದುದೆ
ಸಿರಿಯಿದಾದುದೆನ್ನ ಸಿಂ
ಗರವೀದುದೆನ್ನ ಮದ
ಕರಿಯಿದಾದುದೆನ್ನ ಹೊರೆವಮರ್ದೀದುದೆ ೮೬

ಹರನೀದನೀದನೆಂ
ದುರವಣಿಸಿಯುಬ್ಬರಿಸಿ
ಹರಿಹರಿದು ದೆಸೆದೆಸೆಗೆ ಮೆಯ್ಯಱಿಯದೆ
ಕರಗಿಯಡಿಯೊಳ್ ಕೆ[3]ಡೆ[3]ದು
ಪೊರಳ್ದು ಶಿವಧೋ ಮಹಾ
ಗುರುವೆಯೆನುತಿರಲೆತ್ತಿ ಕರಯುಗಳದಿಂ ೮೭

ಮಗ ಸ್ವಾಮಿ ಕಾರ್ತಿಕಂ
ಗೊಗೆಯದಾ ನಗಜಾತೆ
ಗಗಣಿತವೆನಿಪ್ಪ ನೇಹದಿನಪ್ಪಿದಂ
ನೆಗೆಯಲುಘೆಯುಘೆ ಶಬ್ದ
ವೊಗೆಯೆ ದುಂದುಭಿ ಶಿವಂ
ಮಗುಳೆ ಮೂರ್ಧ್ನಿ ಘ್ರಾಣವೆಸಗಿ ನುಡಿದಂ ೮೮

ಸಾನಂದ ನಿತ್ಯನಾ
ಗೈ ನಿರಾಮಯನಾಗು
ನೀನಖಿಳದುಃಖವರ್ಜಿತನಾಗಿರ್ಪೈ

---

[1] ವೆ (ಖ) [2] ತ್ತುಂ (ಕ) [3] ಡ (ಖ)

ಈ ಸಂದಿಸ್ವಾಮಿಗೆ ಸ
ಮಾನ ಗಣಪದವಿಯಂ
ನಾನಿತ್ತೆನೆನುತೆ ಮೃಡನಂದು ಕೃಪೆಯಿಂ ೮೯

ಪಲವೇಕೆ ನಾನೆಲ್ಲಿ
ನೆಲಸಿರ್ಪೆ ನೀನಲ್ಲಿ
ತೊಲಗದಾಂ ನೀನೆಲ್ಲಿಯಲ್ಲಿಯಿರ್ಪೆಂ
ಸಲೆ ನಮ್ಮೊಳವಿಭೇದ
ದೊಲವು ಸಂದುದು ಸಂದು
ದೆಲವೊ ಸಾನಂದ ನಿನಗಿತ್ತೆನಿದುವಂ ೯೦

ಸಮ[1]ಶ[1]ಕ್ತಿ ಸಮಬಲಂ
ಸಮವಿಭುತ್ವಂ ತನ್ನ
ಸಮಗುಣಮು ಸಮರೂಪುಗಳುಮನಿತ್ತು
ಅಮರರುಘೆಯೆನಲಿಕಾ
ಕ್ರಮ[2]ದೆ[2] ಶಿವಲಿಂಗದೊಳು
ಸಮಸಂದನೀಶನತ್ತಲುವಿತ್ತಲು ೯೧

ಗುರುಭಕ್ತ ಕೇಳು ಶಂ
ಕರ ಕರುಣದಿಂದಿನಿತು
ವರನಿಚಯಮುಂ ಪಡೆದು ಗಣನಾಯಕಂ
ಗುರುಲಿಂಗಪೂಜೆಯೇ
ಪರಮಸಾಧನವೆಂದು
ವಿರಚಿಸಿದನಂತರದ ನಿಯಮವನಿತಂ ೯೨

ಉದಯದೊಳು ಗುರುಲಿಂಗ
ಸದಮಳದ ಪೂಜೆಗಳ
ನೊದವಿಸಿ ಶಿವಾಗಮಾಖ್ಯಾನಂಗಳಂ
ಪದೆದು ಕೇ[3]ಳ್ದೀ ತ್ರೆ[3]ಜಿದಿ
ಪದುಳದಿಂ ಪಗಲಾಗೆ
ಮದನರಿಪುವರ್ಚನೆಯ ಸಮನಂತರಂ ೯೩

---

1 ಸ (ಖ) 2 ದಿ (ಕಖ) 3 ಳೀತ (ಗ)

ಶರಣರಂ ಕಂಡು ಶಂ
ಕರನೆಂದು ನಡನಡುಗಿ
[1]ಪ[1]ರಿದು ಮೈಯಿಕ್ಕಿ ತಚ್ಚರಣಯುಗಮಂ
ಶಿರದೊಳು ಕಪೋಲದೊಳು
ಕರದೊಳುದರದೊಳು ಗುರು
ತರ ಭಾಳದೊಳು ಕಣ್ಗಳೊಳಗಿರಿಸುವಂ ೯೪

ಮಾರಾರಿಯುವರಿಗೊಲಿ
ದಾರೋಗಿಸಲ್ಕೀವ
ನಾರಾಧಿಸುವನಮಳವಸ್ತುಗಳುಮಂ
[2]ಸೀ[2]ರೆಯಂ ರತ್ನಭಂ
ಡಾರವನು ಲೇಪನಾ
ಗಾರವಂ ಸಿಂಗರವನಿತ್ತು ಕಣಿಯಂ ೯೫

ಇಂತುದಯಕಾಲದೊಳ
ಗಿಂತು ಮಧ್ಯಾಹ್ನದೊಳ
ಗಿಂತು ಶಿವಲಿಂಗ ಜಂಗಮ ಪೂಜೆಯಂ
ಸಂತತಂ ಮಾಡಿ ಸಮ
ನಂತರದ ಪಗಲ್ಗಳುಮ
ನಂತೆ ಕಳೆಯಲ್ಕಾಱದಾ ಮಹಿಮನು ೯೬

ಇದು ನಂದಿನಾಥೇಶ
ಗದಿತವಾನಂದೈಕ
ದುದಧಿ ಸಾನಂದಾಖ್ಯಚರಿತೆಯೊಳಗೆ
ಮುದದಿಂದೆ ಶರಣಕವಿ
ಪದೆದು ಕನ್ನಡಿಸಿದೀ
ಮೊದಲ ಸಂಧಿಯೆ ಭಕ್ತಿಗಿದುವೆ ಸಂಧಿ ೯೭‡

---

[1] ಹ (ಕ) [2] ನೀ (ಕ)

‡ ೯೭ನೆಯ ಪದ್ಯ ಆದ ತರುವಾಯ 'ಅಂತು ಪ್ರಥಮ ಸಂಧಿ ೧ಕ್ಕಂ ಪದನು ೯೭ಕ್ಕಂ' ಎಂದು (ಕ) ಪ್ರತಿಯಲ್ಲಿಯೂ, 'ಶ್ರೀ ಶಿವಾದ್ವೈತ ಸಾಕಾರಸಿದ್ಧಾಂತ ಸಾನಂದ ಚರಿತ್ರೆಯ ಯೆರಡನೆಯ ಸಂಧಿ ಸಮಾಪ್ತ' ಎಂದು (ಖ) ಪ್ರತಿಯಲ್ಲಿಯೂ ಇದೆ.

ಎರಡನೆಯ ಸಂಧಿ

ಇಲ್ಲಿಯ ಪದಂಗಳ ಪ್ರತ್ಯೇಕ ಪ್ರತ್ಯೇಕ ಕಥೆಗಳ ಸಾಕ್ಷಿ ವಾಕ್ಯಂಗ[1]ಳಂ[1] ಬರೆವಲ್ಲಿ ಗ್ರಂಥಭಾರಕ್ಕಂಜಿ ಜಗತ್ಪ್ರಸಿದ್ಧವಾಗಿರ್ದವಕ್ಕೆಯುಂ ಪಲವು ವಾಕ್ಯದ[2]ಲ[2]ಲ್ಲದೆ ಕಥೆ [3]ನಡೆ[3] ಯದವಕ್ಕೆಯುಂ ಸಾಕ್ಷಿವಾಕ್ಯಂಗಳಂ ಬಿಟ್ಟುಳಿದವಕ್ಕವಱವಱ ಕಡೆಕಡೆಯಲ್ಲಿಯುವಱ ಸಾಕ್ಷಿವಾಕ್ಯಂಗಳನೊಡನೊಡನೆ ಬರವುತ್ತಂ ಬಂದೆನದನಱಿಂದು ಕೂಡಿವೋದುತ್ತಂ ಬಹುದು.

ರಾಗ—ಗು[4]ರ್ಜ[4]ರಿ॥ ತಾಳ—ಝಂಪೆ॥*

ಪಲ್ಲವ॥ ಪರಕೆ ಪರತರವೆನಿಪ
ವರನಿಚಯಮಂ ಪಡೆದು
ಹರಕಥಾಮೃತವನೀಂಟಿಯೆ ಕಿವಿಗಳಿಂ

ವಚನ॥ ಶ್ರೀಸಾನಂದನಂದು—

ಪದ॥ ಶ್ರೀಮದಮಳಾಗ್ನ್ಯರ್ಕ
ಸೋಮಾಂಬಕನ ಶಿವನ
ತಾಮರಸನಯನಾರ್ಚಿತಾಂಘ್ರಿಯುಗನ
ಸೋಮನಭಿರಾಮನು
ದ್ದಾಮ ಜಿತಕಾಮ ನಿ
ಸ್ಸೀಮ ಭೀಮನ ಮಗಂ ಸಾನಂದನು ೦

ನೋಡಿ ಕಣ್ದಣಿದು ನಲಿ
ದಾಡಿ ನಿಚ್ಚಂ ಶಿವ
ಕ್ರೀಡಾ ಕಥಾರತ್ನ ಶರಧಿಯೊಳಗೆ
ತೋಡಿ ಶ್ರು[5]ತಿ[5]ಪೂರವಂ
ಮಾಡುವನನರ್ಘ್ಯಮಂ
ಕೂಡಿಯುವನೆನಲದಂ ಪದ್ಮಿದೇವಂ ೧

---

[1] ಳನು (ಗ) [2] ಲಿ (ಗ) [3] ಮಡಿ (ಖಗ) [4] ಜ್ಜ (ಕ) [5] ತ (ಕ)

* ಇದು (ಖಗ) ಪ್ರತಿಗಳಲ್ಲಿಲ್ಲ.

ಜಿತಪುರನ ದಯೆಯಿಂದೆ
ನುತವೆನಲು ಪೇಳ್ದಿನಾ
ಶ್ರುತಿಪುರಾಣಾಗಮಸ್ಮೃತಿತತಿಯೊಳು
ಅತಿಶಯಾರ್ಥವನುಳ್ಳ
ಕಥೆಗಳಂ ತೆಗೆದು ನಿಜ
ಕೃತಿಯೊಳೊಂದೊಂದೆ ಪದದೊಳಗಮರ್ದಿರೆ ೩

ಒರೆದ ಕೃತಿ ಸೂಚಕದಿ
ನಱಿದಾಗಮಾದಿಗಳೊ
ಳಿರದಾ ಮಹಾರ್ಥವಂ ತೋಱಿ ಕೃಪೆಯಿಂ
ಧರಣಿಯ ಜಡತ್ವ[1]ಮಂ[1]
[2]ಪ[2]ಱಿದು ಪುರುಷಾರ್ಥನಿಧಿ
ವರರೀಶನವರೆನ್ನನುದ್ಧರಿಪುದು ೪

ಇಲ್ಲಿ ನಾನೆತ್ತಿ ಬರೆ
ದೆಲ್ಲಾ ಋಷಿಗ್ರಂಥ
ದಲ್ಲಿಲ್ಲದರ್ಥಾತಿರೇಕವೊರೆಯೆಂ
ಸೊಲ್ಲಿಸುವೆನುಳ್ಳುದುಮ
ನಲ್ಲಿ ಛಲಮಂ ಬಿಟ್ಟು
ಬಲ್ಲ ಸದ್ವಿದ್ವಾಂಸರಾರೈವುದು ೫

ವ ॥ ಶಿವಕ[3]ಥೆ[3]ಯು ಸಾಧಾರಣಮದಭವಭಕ್ತರ್ಗಲ್ಲದೆ ಯಾದೃಶತಾದೃಶರಿಗಾಗದೆಂಬುದನು ಪುರಾಣಾದಿಯರ್ಥವಱಿದಂಗಲ್ಲದೆ ಬ[4]ಱಿ[4]ವ್ಯುತ್ಪತ್ತಿ[5]ಯಿಂ[5] ವೇದಾರ್ಥವಱಿಯಬಾರದೆಂಬುದಂ ತೋಱುವ ಪ್ರಕರಣಂ—

ಪದ ॥§ ಭವಿಯೊಡಲ ಮಾಂಸಾಸ್ಥಿ
ತೊವಲೊಳಿಡಿದಿರ್ದಘಂ
ತವೆಯಳಿದು ನಿರ್ದೋಷವಾದಲ್ಲದೆ

---

[1] ವಂ (ಕ) [2] ಹ (ಖಗ) [3] ವಿ (ಗ) [4] ಱಿಯ (ಗ) [5] ಯಂ (ಕ)

§ ಇಲ್ಲಿಂದ ಮುಂದಕ್ಕೆ 'ಪದ' 'ವಚನ' ಗಳನ್ನು ಓದುಗರೇ ತಿಳಿದುಕೊಂಡು ಓದುವುದು.

ಶಿವವಾರ್ತೆಯೊಳಗಾಗಿ
ಕಿವಿಯೊಗದುವೆಂದೊರೆದ
ಶಿವನಾಗಮಕ್ಕೆಣೆಗಳಾಗಿರ್ದವಂ

ಅಕ್ಷೀಣಾಂ ಶೇಷದೋಷಾಣಾಂ ಶಿವವಾರ್ತಾಽಪಿ ದುರ್ಲಭಾ ॥1॥

ಇದಾಗಮಂ ಇದಕ್ಕೆ ಸೂತಸಂಹಿತೆ—

ಪ್ರಕ್ಷಿಣಾಶೇಷದೋಷಸ್ಯ ಶುದ್ಧಾಂತಃಕರಣಸ್ಯ ತು
ದೇವದೇವ ಪರಿಜ್ಞಾನೇ ವಾಂಛಾ ಜಾಯೇತ ಸುವ್ರತಾಃ ॥2॥

ಇತ್ಯಾದಿ. ೬

ಎಲೆ ಶಿವನ ಕಥೆಗೇಳು
ತಲಸಿ ಮುಖವಂ ತಿರುಪಿ
ಕಿಲಕೊಯ್ವನಾವನವನನಿತುಸುಕೃತಂ
ಸಲೆ ಬೆಂದು ನಿರಯದೊಳು
ನೆಲೆಯಪ್ಪನೆಂದು ಮಿಗೆ
ಯುಲಿವ ಕಾಶೀಖಂಡ ವಾಕ್ಯಾರ್ಥವಂ

ಗ್ರಂಥ ॥ ಶಿವವಾರ್ತಾ ಶ್ರುತೋದ್ಯುಕ್ತೋ ಯದ್ಯಾಲಸ್ಯಾತ್ಪರಾಙ್ಮುಖಃ
ವಿನಶ್ಯೇತ್ ಸುಕೃತಂ ಸರ್ವಂ ದುಷ್ಕೃತ್ಯೈ ರೌರವಂ ವ್ರಜೇತ್ ॥3॥

ಇತ್ಯಾದಿ. ೭

ಹರಕಥನ ಮಧ್ಯದೊ[1]ಳ್[1]
ಬರೆ ವಿಘ್ನವಂತಾಗ
ಳೊರೆವಾರ್ಯರಲ್ಲಿಯಾ ಪುಸ್ತಕದೊಳು
ಚರಿತದಿನನುಜ್ಞೆಗಳ
ನೆರೆದು ವಂದಿಸಿ ನಿಲಿಪು
ಅಥ ಕಾಲಾಗ್ನಿರುದ್ರಂ ಭಗವಂತಂ ಸನತ್ಕುಮಾರಃ ಪಪ್ರಚ್ಛ ಅಭಿದೇಹಿ ಭಗವನ್ ತ್ರಿಪುಂಡ್ರವಿಧಿಂ ಸತತ್ತ್ವಂ ಕಿಂ ದ್ರವ್ಯಂ ಕಿಂ ಪ್ರಮಾಣಂ ಕತಿ ರೇಖಾಃ ಕಿಂ ದೈವತಮ್ ಕಾ ಶಕ್ತಿಃ ಕಿಂ ಫಲಮಿತಿ ಚ ತಂ ಹೋವಾಚ ಭಗವಾನ್ ಯದ್ದ್ರವ್ಯಂ ತದಾಗ್ನೇಯಂ ಭಸ್ಮ ಸದ್ಯದಿ ಪಂಚಬ್ರಹ್ಮಮಂತ್ರೈಃ ಪರಿಗೃಹ್ಯ ಮಾನಸ್ತೋಕೇತಿ ಸಮುದ್ಧೃತ್ಯ ತ್ರಿಯಾಯುಷಂ ಜಮದಗ್ನೇರಿತಿ ಶಿರೋಲಲಾಟಸ್ಕಂಧೇಷು ತ್ರಿಭಿರಾಯುಷೈಸ್ತ್ರಿಯಂಬಕೈಸ್ತಿಸ್ರೋ ರೇಖಾಃ ಕುರ್ವೀತ ವ್ರತಮೇತಚ್ಛಾಂಭವಂ ಸರ್ವವೇದೇಷು ವೇದವಾದಿಭಿರುಕ್ತಂ ತತ್ಸಮಾಚರೇನ್ಮುಮುಕ್ಷುರಪುನರ್ಭವಾಯ ಆಲಲಾಟಾದಾಚಕ್ಷುಷೋರ್ಭ್ರುವೋರ್ಮಧ್ಯತೋ ಯಾ ಚಾಸ್ಯ ಪ್ರಥಮಾ ರೇಖಾ ಸಾಽಽಹವನೀಯ ಅಕಾರೋ ರಜೋ ಭೂಲೋಕ ಆತ್ಮಾ ಕ್ರಿಯಾಶಕ್ತಿಃ

ಋಗ್ವೇದಃ—

ಪ್ರಾತಸ್ಸವನೋ ರುದ್ರೋ ದೇವತಾ ಯಾಚಾಸ್ಯ ದ್ವಿತೀಯಾ ರೇಖಾ ಸಾ ಗಾರ್ಹಪತ್ಯ ಉಕಾರಸ್ತಮೋ ದ್ಯೌಃ ಪರಮಾತ್ಮಾ ಜ್ಞಾನಶಕ್ತಿಃ ಯಜುರ್ವೇದೋ ಮಾಧ್ಯಂದಿನಂ ಸವನಂ ಮಹೇಶ್ವರೋ ದೇವತಾ ಯಾ ಚಾಸ್ಯ ತೃತೀಯಾ ರೇಖಾ ಸಾ ದಕ್ಷಿಣಾಗ್ನಿರ್ಮಕಾರ ಅಂತರಿಕ್ಷಮಂತರಾತ್ಮಾ ಇಚ್ಛಾಶಕ್ತಿಃ ಸಾಮವೇದಃ ಸಾಯಂ ಸವನಂ ಸದಾಶಿವೋ ದೇವತೇತಿ ಇತ್ಯಾದಿ. ೧೧೮

ಪಂಚಮುಖದಿಂ ವರ್ಣ
ಪಂಚಕಂಗಳೆ ಭೂತ
ಪಂಚಕಂ ಗೋಪಂಚಕಂಗಳವಱಿಂ
ಪಂಚವಿಧ ಭಸಿತವಿದ
ಪಂಚಮಂತ್ರ[1]ದೆ ಮಾಡಿ
ಪಂಚಪಾತ್ರೆಯೊಳಿರಿಸಿ ಧರಿಪುದೆನಲು

ಜಾಬಾಲೋಪನಿಷತ್ತಿನಲ್ಲಿ—

1 ದಿ (ಕ)

ಸದ್ಯೋಜಾತಾತ್ ಪೃಥ್ವೀ ತಸ್ಮಾನ್ನಿವೃತ್ತಿಃ ತಸ್ಯಾಃ ಕಪಿಲವರ್ಣಾ ನಂದಾ ತಸ್ಯಾ ಗೋಮಯೇ ಭೂತಿರ್ಜಾತಾ ವಾಮದೇವಾದುದಕಂ ತಸ್ಮಾತ್ಪ್ರತಿಷ್ಠಾ ತಸ್ಯಾಃ ಕೃಷ್ಣವರ್ಣಾ ಭದ್ರಾ ತಸ್ಯಾ ಗೋಮಯೇ ಭಸಿತಂ ಜಾತಂ ಅಘೋರಾದ್ವಹ್ನಿಃ ತಸ್ಮಾದ್ವಿದ್ಯಾ ತಸ್ಯಾ ರಕ್ತವರ್ಣಾ ಸುರಭಿಸ್ತಸ್ಯಾ ಗೋಮಯೇ ಭಸ್ಮಜಾತಂ ತತ್ಪುರುಷಾ ದ್ವಾಯುಸ್ತಸ್ಮಾಚ್ಛಾಂತಿಸ್ತಸ್ಯಾ ಶ್ವೇತವರ್ಣಾ ಸುಶೀಲಾ ತಸ್ಯಾ ಗೋಮಯೇ ಕ್ಷಾರಂ ಜಾತಂ ಈಶಾನಾದಾಕಾಶಸಸ್ಮಾಚ್ಛಾಂತ್ಯತೀತಾ ತಸ್ಯಾ ಚಿತ್ರವರ್ಣಾ ಸುಮನಾ ತಸ್ಯಾ ಗೋಮಯೇ ರಕ್ಷಾ ಜಾತಾ ಐಶ್ವರ್ಯ ಕಾರಣಾದ್ಭೂತಿರ್ಭಾಸನಾದ್ಭಸಿತಂ ಸರ್ವಾಘ ಭಕ್ಷಣಾದ್ಭಸ್ಮ ಆಪದಾಂ ಕ್ಷರಣಾತ್ ಕ್ಷಾರಂ ಭೂತಪ್ರೇತಪಿಶಾಚಬ್ರಹ್ಮರಾಕ್ಷಸಾಪಸ್ಮಾರ ಭವಭೀತಿಭ್ಯೋಽಭಿರಕ್ಷಣಾದ್ರಕ್ಷೇತಿ.

ತೇಷಾಂ ವಿರಜಾನಲಜಂ ವಕ್ಷ್ಯೇ—ಅಗ್ನೌ ಜ್ವಾಲಾವೃತಂ ರುದ್ರಂ ವಹ್ನಿಮಂಡಲ ಮಧ್ಯಗಂ ಧ್ಯಾಯೇತ್ಕಲಾದಶಯುತಂ ಶಕ್ತಿಸ್ವಸ್ತಿಕ ಧಾರಣಮಿತಿ ರುದ್ರಾಗ್ನಿಂ ಸಂಚಿಂತ್ಯ ರುದ್ರಾಗ್ನೌ ವಿಭೂತ್ಯಾದಿ ಸಂಪಾದಯಾಮೀತಿ ಸಂಕಲ್ಪ್ಯ ವಿಕಟಾಂಗಾ ಮುನ್ಮತ್ತಾಂ ಮಹಾಶನಾಂ ಖಿಲಾಮಲಸಾಮಶಿವಚಿಹ್ನಾಂಕಿತಾಂ ಪುನರ್ಧೇನುಂ ಕೃಶಾಂಗಾಂ ವತ್ಸಹೀನಾಂ ವಂಧ್ಯಾಮಂಗಹೀನಾಮದುಗ್ಧದೋಹಿನೀಂ ನಿರಿಂದ್ರಿ ಯಾಮಜಗ್ಧತೃಣಾಂ ಕೇಶಚೇಲಾಸ್ಥಿಭಕ್ಷಿಣೀಂ ಸಂಧಿನೀಂ ನವಸುತಾಂ ರೋಗಾನ್ವಿತಾಂ ವಿಹಾಯ ಅಪ್ರಶಸ್ತ ಭೂಮ್ಯಾದಿಪತಿತಕ್ಲಿನ್ನ ದುರ್ಗಂಧ ಪರ್ಯುಕ್ಷಿತೇತ್ಯಾದಿ ಗೋಮಯಂ ವಿಹಾಯ ಪ್ರಶಸ್ತಗೋಮಯಮಾದಾಯ ಈಶತತ್ಪುರುಷಾಘೋರ ವಾಮಸದ್ಯೋಜಾತಾದ್ಯೈರುತ್ಪತ್ತಿಸ್ಥಿತಿ ಸಂಹಾರ ಭೇದೈರ್ಗ್ರಹಣ ಕಬಳನ ಶೋಷಣ ದಹನ ಶೋಧನಾಭಿಮಂತ್ರಾದಿ ಕ್ರಮೇಣ ಪಂಚಪ್ರಣವೈಃ ಪಂಚಬೀಜೈಃ ಸಹ ಪಂಚಮಂತ್ರೈರ್ವಿಭೂತ್ಯಾದಿಸ್ಸಂಪಾದ್ಯಾ ಸುದೃಢರಮ್ಯ ಕ್ಷಾಲಿತ ಪ್ರೋಕ್ಷಿತ ಚೂತ ಬಿಲ್ವಾಶೋಕದಾರುಮಯಪಾತ್ರೇ ಶೈಲಮಯಪಾತ್ರೇ ವಾ ಧನವತ್ಸಂ ಗ್ರಹೇದಿತಿ ಕಾಲಗ್ನಿರುದ್ರಃ.

ಇದಕ್ಕೆ ವಾಯವೀಯ ಸಂಹಿತೆ—

ಶಿವಾಗ್ನೇರ್ಭಸಿತಂ ಗ್ರಾಹ್ಯಮಗ್ನಿಹೋತ್ರೋದ್ಭವಂ [1]ತಥಾ[1]
ವೈವಾಹಾಗ್ನ್ಯುದ್ಭವಂ ವಾಪಿ ಪ[2][ಕ್ವಂ][2] ಶುಚಿ ಸುಗಂಧಿ ಚ ॥258॥
ಕಪಿಲಾಯಾಃ ಸಕೃಚ್ಛಸ್ತಂ ಗೃಹೀತಂ ಗಗನೇ ಪತತ್
ನ ಕ್ಲಿನ್ನಂ ನಾತಿ ಕಠಿನಂ ನ ದುರ್ಗಂಧಂ ನ ಶೋಷಿತಮ್ ॥259॥

---

1 ಕುವಾ (ಕಿಗ) 2 ಕ್ವಂ (ಕಖಗ)

ಉಪರ್ಯಧಃ ಪರಿತ್ಯಜ್ಯ ಗೃಹ್ಣೀಯಾತ್ ಪತಿತಂ ಯದಿ
ಪಿಂಡೀಕೃತ್ಯ ಶಿವಾಗ್ನ್ಯಾದೌ ತತ್ ಕ್ಷಿಪೇನ್ಮೂಲಮಂತ್ರತಃ ॥260॥
ಅಪಕ್ವಮತಿಪಕ್ವಂ ಚ ಸಂತ್ಯಜ್ಯ ಭಸಿತಂ ಸಿತಮ್
ಆದಾಯ ವಾಸಸಾಲೋಡ್ಯ ಭಸ್ಮಾಧಾರೇ ವಿನಿಕ್ಷಿಪೇತ್ ॥261॥
ಸುಕೃತೇ ಸುದೃಢೇ ಶುದ್ಧೇ ಕ್ಷಾಲಿತೇ ಪ್ರೋಕ್ಷಿತೇ ಶುಚಿಃ
ಸಮ್ಮಂತ್ರ್ಯ ಮಂತ್ರೀ ಮಂತ್ರೇಣ ಪಾತ್ರೇ ಭಸ್ಮ ವಿನಿಕ್ಷಿಪೇತ್ ॥262॥
ತೈಜಸಂ ದಾರುಜಂ ವಾಪಿ ಮೃಣ್ಮಯಂ ಶೈಲ[1]ಮ್ಯೈ[1]ವ ವಾ
ಅನ್ಯದ್ವಾ ಶೋಭನಂ ಶುದ್ಧಂ ಭ[2]ಸ್ಮಾ[2]ಧಾರಂ ಪ್ರಕಲ್ಪಯೇತ್ ॥263॥
ಕ್ಷೇಮದೇಶೇ ಸ್ಥಿರೇ ಶುದ್ಧೇ ಧನವದ್ಭಸ್ಮ ನಿಕ್ಷಿಪೇತ್
ಪ್ರಸ್ಥಿತೋ ಭಸ್ಮ ಗೃಹ್ಣೀಯಾತ್ ಸ್ವಯಂ ವಾನುಚರೋಽಪಿ ವಾ॥264॥
ನ ಚಾಯುಕ್ತಕರೇ ದಧ್ಯಾನ್ನೈವಾಶುಚಿತಲೇ ಕ್ಷಿಪೇತ್
ನ ಸಂಸ್ಪೃಶೇನ್ನಿಜಾಂಗೈಶ್ಚನೋಪೇಕ್ಷೇತ ನ ಲಂಘಯೇತ್ ॥265॥
ತಸ್ಮಾದ್ಭಸಿತಮಾದಾಯ ವಿನಿಯುಂಜೀತ ಮಂತ್ರತಃ
ಕಾಲೇಷೂಕ್ತೇಷು ನಾನ್ಯತ್ರ ನಾಯೋಗ್ಯೇಭ್ಯಃ ಪ್ರದಾಪಯೇತ್ ॥266॥

ಗ್ರಂಥ ಒಂಬತ್ತು. ಇತ್ಯಾದಿ. ೧೧೯

ಗಾರುಹಸ್ಥ ಬ್ರಹ್ಮ
ಚಾರಿ ಅತ್ಯಾಶ್ರಮಿಗ
ಳಾರಾಗಲಿನ್ನು ಯತಿ ವನವಾಸಿಯುಂ
ಚಾರುತರ ಭಸಿತವಿದ
ನೋರಂತೆ ಧರಿಪುದೆಂ
ದಾರಯ್ದು ಸಾಱುವುಪನಿಷದಾದಿಯುಂ

ಆ ವೇದಂ—

ತ್ರೈವರ್ಣಿಕಾನಾಮಾಗ್ನಿಹೋತ್ರಾಗ್ನಿಜಂ ಗೃಹಸ್ಥಾನಾಂ ವಿರಜಾನಲಜಂ ವಿವಾಹಾಗ್ನಿಜಮೌಪಾಸನಾಗ್ನಿಜಂ ವಾ ಬ್ರಹ್ಮಚಾರಿಣಾಂ ಸಮಿದಗ್ನಿಜಂ ಶೂದ್ರಾಣಾಂ ಶ್ರೋತ್ರಿಯಾಗಾರಪಚನಾಗ್ನಿಜಮನ್ಯೇಷಾಂ ದಾವಾನಲಸಮುದ್ಭವಂ ಯತೀನಾಂ ಸರ್ವತ್ರಸ್ಥಿತಂ ಅತಿವರ್ಣಾಶ್ರಮಿಣಾಂ ಶ್ಮಶಾನಗತಂ ಸರ್ವೇಷಾಂ ದೇವಾಲಯಸ್ಥಿತಮಿತಿ

ಇದಕ್ಕೆ ಮಾನವ ಪುರಾಣದೀಶ್ವರ ವಾಕ್ಯಂ—

---

[1] ಮೋ (ಗ) [2] ಸ್ಕ (ಗ)

ಅಥಾಚಿರೇಣ ಸಂಸಾರನಿವೃತ್ತ್ಯೈ ಚಾದರೇಣ ತು
ಆಶ್ರಮಾಣಾಂ ಚ ಸರ್ವೇಷಾಮುಪಾಯಂ ಪ್ರವದಾಮ್ಯಹಮ್ ॥267॥

ಬ್ರಹ್ಮಚಾರೀ ವಿಮುಕ್ತ್ಯರ್ಥಂ ಸಮಿದಗ್ನಿಂ ಸಮುದ್ಭವಮ್
ಭಸ್ಮಾದಾಯಾದರೇಣೈವ ತ್ರಿಪುಂಡ್ರಂ ಧಾರಯೇನ್ಮುದಾ ॥268॥

ಗೃಹಸ್ಥೋ ವಾಽಽಹಿತಾಗ್ನಿಸ್ತು ಭಸ್ಮಸ್ವಾಪಾಸನೋದ್ಭವಮ್
ಆದಾಯ ಸಜಲಂ ನಿತ್ಯಂ ತ್ರಿಪುಂಡ್ರಂ ತೇನ ಧಾರಯೇತ್ ॥269॥

ಆಹಿತಾಗ್ನಿರ್ದ್ವಿಜಸ್ಸ್ವಸ್ಯ ಭಸ್ಮಾದಾಯಾಗ್ನಿಹೋತ್ರಜಮ್
ತೇನ ತ್ರಿಪುಂಡ್ರಂ ಸಶ್ರದ್ಧಂ ಧಾರಯೇಚ್ಚ ದಿನೇ ದಿನೇ ॥270॥

ವ[1]ನಸ್ಥೋ[1] ವಹ್ನಿ[2][ಜಂ][2] ಸೋ ಚೇದ್ಭಸ್ಮಾದಾಯಾಗ್ನಿಹೋತ್ರಜಮ್
ಪರೇಷಾಂ ತೇನ ಸಶ್ರದ್ಧಂ ತ್ರಿಪುಂಡ್ರಂ ಧಾರಯೇತ್ ಸದಾ ॥271॥

ವೈಖಾನಸೋಗ್ನಿಮಾನ್ವಹ್ನೇಃ ಸ್ವಸ್ಯ ಭಸ್ಮ ಸಮುದ್ಭವಮ್
ಆದಾಯ ಸಜಲಂ ತೇನ ತ್ರಿಪುಂಡ್ರಂ ಧಾರಯೇತ್ಸದಾ ॥272॥

ಪರಿವ್ರಾಡಗ್ನಿಹೋತ್ರಾದೇಃ ಗೃಹಸ್ಥಾನಾಮನುಜ್ಞಯಾ
ಭಸ್ಮಾದಾಯ ಸಿತಂ ತೇನ ತ್ರಿಪುಂಡ್ರಂ ಧಾರಯೇನ್ಮುದಾ ॥273॥

ಅಥವಾ ಶ್ರೋತ್ರಿಯಾಗಾರಾದಗ್ನಿಮಾಹೃತ್ಯ ಸಾದರಮ್
ವಿರಜಾಖ್ಯೇನ ಮಂತ್ರೇಣ ತತ್ತ್ವಾನಿ ಸಕಲಾನಿ ತು ॥274॥

ಜುಹುಯಾದ್ರುದ್ರರೂಪೇಣ ಭಾವಿತಾಗ್ನೌ ಸ್ವಯಂ ಪುನಃ
ತದುತ್ಥೇನ ಸಿತೇನೈವ ಭಸ್ಮನಾ ಸಜಲೇನ ತು ॥275॥

ಅಗ್ನಿರಿತ್ಯಾದಿಭಿರ್ಮಂತ್ರೈಸ್ತ್ರಿಸಂಧ್ಯಾಮವಕುಂಠಯೇತ್
ಪ್ರಣವೇನ ತ್ರಿರುಕ್ತೇನ ಸಹಂಸೇನ ತ್ರಿಪುಂಡ್ರಕಮ್ ॥276॥

ಲಲಾಟೇ ಹೃದಯೇ ಬಾಹ್ವೋರಧೋರ್ಧ್ವಂ ದ್ವ್ಯೈ ಚ್ಚೈವ ಧಾರಯೇತ್
ಶಿವಲಿಂಗಂ ಸಮಭ್ಯರ್ಚ್ಯ ತ್ರಿಸಂಧ್ಯಾಸು ವಿಶೇಷತಃ ॥277॥

ಏವಂ ಯೋ ವರ್ತಮಾನಸ್ತು ಸರ್ವಬಂಧೈಸ್ಸಮುಚ್ಯತೇ

ಇವು ಹನ್ನೆರಡು ಇತ್ಯಾದಿ. ೧೨೦

1 ನಿಸ್ಥಾ (ಗ) 2 ಪೂ (ಕಖಗ)

ಜಲದೊಳ್ವಿಭೂತಿಯಂ
ಕಲಸಿ ಧರಿಸುವುದರ್ಕೆ
ನಲಸಿ ಪಡುವಲು ಪಕ್ಕಿಗೆಯ್ದುವನ್ನಂ
ಜಲವುಳಿಯಲಲ್ಲಿಂದ
ಬಳಿಕುಳಿದ ಸಮಯದೊಳು
ಸಲೆಯೆಂದು ವಿಧಿಸಿದಾಗಮವಾಕ್ಯವಂ

ಭಸ್ಮ ವಾಮಕರೇ ಸ್ಥಾಪ್ಯ ದಕ್ಷಿಣೇನಾಭಿಮಂತ್ರಿತಮ್
ಮಧ್ಯಾಹ್ನಾತ್ ಪ್ರಾಗ್ಜಲೈರ್ಯುಕ್ತಂ ಪರತೋ ಜಲವರ್ಜಿತಮ್ ||278||

ಇತ್ಯಾದಿ. ೧೨೧

ಎಸುವಡೆದು ಮಸಣದೊಳ
ಗಸುಗಳೆವವನ ನೊಸಲೊ
ಳಸವಸದಿನಡಿಯಿಟ್ಟನಾಯ್ಪುಜ್ಜಿಯ
ಭಸಿತದಿನವಂಗುಮಾ
ವಸಥಗಣಪದವಿಯೆಂ
ದುಸುರ್ದ ಶಿವ[1]ರಾ[1]ಹಸ್ಯದಾಶ್ಚರ್ಯವಂ

ಕಶ್ಚಿತ್ಕಂಠಗತಃಪ್ರಾಣಃ ಕಾಲಪ್ರಾಪ್ತೋ ಮೃತೋಪಮಃ
ಶೇತೇ ಶ್ಮಶಾನೇ ವಿವಶೋ ದಸ್ಯುಶಸ್ತ್ರನಿಷೂದಿತಃ ||279||
ಅಥ ತೇಷಾಂ ಪುಳಿಂದಾನಾಂ ಶ್ವಾಽನುಗಃ ಕಶ್ಚಿದೇವ ಹಿ
ಧಾವನ್ನನುಪದಾಂತಸ್ಥಭಸ್ಮಪುಂಜೇಷ್ವಿತಸ್ತತಃ ||280||
ತಸ್ಯಾನನಲಲಾಟಾಗ್ರನ್ಯಸ್ತಾಂಘ್ರಿಃ ಸ್ವೈರತೋ ಯಮೌ
ಏತಸ್ಮಿನಂತರೇ ನೇತುಂ ಕಾಲಮೃತ್ಯುರ್ಯಮಾನುಗಾಃ ||281||
ತಾವತಾ ಮುಚ್ಯಮಾನಾಸುಂ ಪ್ರತ್ಯಸರ್ಪನ್ನಮುಂ ಯದಾ
ತದಾನೀಮೇವ ಗಣಪಾ ನಾನಾಪ್ರಹರಣೋದ್ಯತಾಃ ||282||
ವಿಮಾನೇಽಪ್ಸರಸಾಂ ವೃಂದೈಸ್ತಂ ಮೃತಂ ಪರ್ಯವಾರಯನ್
ತತಸ್ತೇ ಧರ್ಮರಾಟ್ ಪ್ರೇಷ್ಯಾ ದೃಷ್ಟ್ವಾಽ ಭಸ್ಮಾಂಕಧಾರಣಮ್ ||283||
ಶಂಭೋಸ್ತು ಶಾಸನಂ ಕೃತ್ವಾ ಹಿತ್ವಾಽತಸ್ತಂ ಚ ಲಿಂಗಿನಮ್
ಪ್ರದದ್ರುರ್ ಊರ್ದ್ವಿಶಸ್ಥಿತಂ (?) ನಿನ್ಯುಃ ಶಿವಪುರಂ ಗಣಾಃ ||284||

ಇವಾಲು ಶಿವರಹಸ್ಯಂ ಇತ್ಯಾದಿ. ೧೨೨

1 ರ (ಕ)

ಶ್ರೀ ವಿಭೂತಿಯನೊಲ್ಲ
ದೋವೊ ಮುಕ್ತಿಯನೆಯ್ದ
ಲಾವನಿಚ್ಛೈಪನವನ ಬಗೆಯದೆನಲು
ತೀವಿ ವಿಷವಂ ಕುಡಿದು
ಭಾವಿಪನ ನಿತ್ಯತ್ವ
ದಾ ವಿಧವದೆಂದ ಪಾರಾಶರಿಯವಂ

ತ್ರಿಪುಂಡ್ರಧಾರಣಂ ಮುಕ್ತ್ವಾ ಮುಕ್ತಿಮಿಚ್ಛತಿ ಯಃ ಪುಮಾನ್
ವಿಷಪಾನೇನ ನಿತ್ಯತ್ವಂ ಕುರುತೇ ಸ್ವಾತ್ಮನೋ ಹಿ ಸಃ ॥285॥

ಇತ್ಯಾದಿ. ೧೨೩

ಸಿಂಗರಕೆ ರಕ್ಷೆಗಂ
ಮಂಗಳಕೆ ಪೂತತೆಗೆ
ಲಿಂಗಾರ್ಥವಾಗಿ ಭಸ್ಮಾಂಕವಿದನೆ
ಜಂಗಮಕೆ ಪರದೈವ
ಭಂಗುರರ್ಗಿತ್ತೆನೆಂ
ದಂಗಜಾರಾತಿ ನುಡಿದುದನಖಿಳದಿಂ

ರಕ್ಷಾರ್ಥಂ ಮಂಗಲಾರ್ಥಂ ಚ ಪವಿತ್ರಾರ್ಥಂ ಚ [1]ಸತ್ತಮ[1]
ಲಿಂಗಾರ್ಥಂ ಚೈವ ಭಕ್ತಾನಾಂ ಭಸ್ಮ ದತ್ತಂ ಮಯಾ ಪುರಾ ॥286॥
ಇದು ಭವಿಷ್ಯತ್ಪುರಾಣ ಮೊದಲಾಗೆಲ್ಲಾ ಪುರಾಣದಲ್ಲೂ ಸಮಂ

ಇತ್ಯಾದಿ. ೧೨೪

ವರಭೂತಿವಿಧಿಯೆಂದು
ತರದ ತ್ರಿರೇಖೆಯಂ
ವಿರಚಿಸಿದನಜನಖಿಳ ನರರ ನೊಸಲಂ
ಪರಿಕಿಸಲ್ಕಿದುವೆ ಶುಭ
ಕರವೆಂದು ಸ್ಕಂದವಾ
ದರಿಸಿ ತ್ರಿಪುಂಡ್ರಮಹಿಮೆಯನೊರೆದುದಂ

ಸೃಷ್ಟ್ವಾ ಸೃಷ್ಟಿಚ್ಛಲೇನಾಹ ತ್ರಿಪುಂಡ್ರಸ್ಯ ಪ್ರಶಸ್ತತಾಮ್
ಸಸರ್ಜ ಚ ಲಲಾಟಂ ಹಿ ತಿರ್ಯಗ್ರೇಖೋರ್ಧ್ವಂ ನ ವರ್ತುಳಮ್ ॥287॥

---

1 ಸಂತತಂ (ಖಗ)

ತಿರ್ಯಗ್ರೇಖಾಃ ಪ್ರದೃಶ್ಯಂತೇ ಲಲಾಟೇ ಸರ್ವದೇಹಿನಾಮ್
ತಥಾಪಿ ಮಾನವಾ ಮೂರ್ಖಾ ನ ಕುರ್ವಂತಿ ತ್ರಿಪುಂಡ್ರಕಮ್ ॥288॥

ಇವೆರಡೂ ಇತ್ಯಾದಿ. ೧೨೫

ಹಾ ಶಿವಾದೇವ ಶ್ರೀ
ಭಾಸುರ ವಿಭೂತಿಯಂ
ಲೇಸಾಗಿ ಬಿಟ್ಟು ಮಣ್ಣಿಟ್ಟು ಮುದದಿಂ
ದೇಶಮಿವು ನರ್ತಿಸುವ
ಹೇಸಿಕೆಯ ಪರಿಯೊರೆದ
ವಾಸಿಷ್ಠರಾಮಾಯಣೀ ಯಾದಿಯಂ

ಅಹೋ ನ ಚಿತ್ರಂ ಯತ್ಸತ್ಯಂ ಭಸ್ಮ ತದ್ವಿಸ್ಮೃತಂ ಧೃತಂ
ಯದಸತ್ಯಂ ಮೃದಾ ಧಾರ್ಯಂ ತತ್ಪುರಃ ಪರಿವಲ್ಗತಿ ॥289॥

ಇತ್ಯಾದಿ. ೧೨೬

ಕಂಡು ಕಾಣದೆ ಮರು
ಳ್ಗೊಂಡು ಶಿವಪಥದ ತ್ರಿ
ಪುಂಡ್ರವಂ ಬಿಟ್ಟು ಮಣ್ಣಿಟ್ಟು ಕೆಟ್ಟು
ಕೊಂಡಾಡುತಿರೆ ಜಗದ
ಭಂಡಾಟವಂ ಮನಂ
ಗೊಂಡ ಬ್ರಹ್ಮಾಂಡ ಪೌರಾಣಾದಿಯಂ

ಬ್ರಹ್ಮಾಂಡಪುರಾಣಂ—

ಅಹೋ ಮೋಹಸ್ಯ ಮಾಹಾತ್ಮ್ಯಂ ಲೋಕಃ ಪಶ್ಯನ್ನಪಶ್ಯತಿ
ತ್ರಿಪುಂಡ್ರಂ ಮೋಕ್ಷದಂ ತ್ಯಕ್ತ್ವಾಹ್ಯನ್ಯತ್ರ ರಮತೇ ನರಃ ॥290॥

ಇದಕ್ಕೆ ಸೂತಸಂಹಿತೆ—

ಅಹೋ ಮೋಹಸ್ಯ ಮಾಹಾತ್ಮ್ಯಂ ಮುನೀಂದ್ರಾ ಬ್ರಹ್ಮವಾದಿನಃ
ಯನ್ನರಾ ಭಸ್ಮ ಸಂತ್ಯಜ್ಯ ಕುರ್ವಂತ್ಯನ್ಯೈಸ್ಸಮಾಹಿತಾಃ ॥291॥

ಇದು ಸೂತಸಂಹಿತೆಯದು

ಅಹೋ ಮೋಹಸ್ಯ ಮಾಹಾತ್ಮ್ಯಂ ಮಯಾ ವಕ್ತುಂ ನ ಶಕ್ಯತೇ
ಮುಕ್ತಿದಂ ಭಸ್ಮ ಸಂತ್ಯಜ್ಯ ನರೋಽನ್ಯತ್ರ ವಿಚೇಷ್ಟತೇ ॥292॥

ಇದು ವಾಸಿಷ್ಠ ಲೈಂ[1]ಗ[1]ದಲ್ಲಿ ಶಿವನ [2]ನುಡಿ[2]
ಇವು ಮೂಱು ಇತ್ಯಾದಿ. ೧೨೭

---

1 ಗ್ಯ (ಕ) 2 ವಾಕ್ಯ (ಗ)

ತಿರಿಯಕ್ ತ್ರಿಪುಂಡ್ರಕಂ
ಸುರವಿಪ್ರತತಿಗೆ ಭೂ
ವರ ವೈಶ್ಯನಿಚಯಕ್ಕೆ ವರ್ತುಳಾಂಕಂ
ಅರೆವೆಱೆಯು ಕುಱುಪು ಶೂ
ದ್ರರ ನೊಸಲೊಳುಳಿದರ್ಗೆ
ಬರೆ ಊರ್ಧ್ವವೆಂದ ಶಾತಾತಪಮುಮಂ

ತ್ರಿಪುಂಡ್ರಂ ಸುರವಿಪ್ರಾಣಾಂ ವರ್ತುಳಂ ನೃಪವೈಶ್ಯಯೋಃ
ಅರ್ಧಚಂದ್ರಂ ತು ಶೂದ್ರಾಣಾಮನ್ಯೇಷಾಮೂರ್ಧ್ವಪುಂಡ್ರಕಮ್ ॥293॥

ಇದಾ ಸ್ಮೃತಿ ಇತ್ಯಾದಿ. ೧೨೮

ದ್ವಿಜರೆಂದುವುಂ ಸದಾ
ಯಜನಾದಿ ಕ್ರಿಯೆಗಳೊಳು
ನಿಜವಾದ ವಿಧಿಭಸಿತಧಾರಣವದೆ
ತ್ಯಜಿಪುದಾ ಮಣ್ಣ[1]ದಂ[1]
ದ್ವಿಜರಂಟಲಾಗೆಂದು
ದ್ವಿಜನೊರೆದ ಗಾರುಡಪುರಾಣೋಕ್ತಿಯುಂ

ಅಭಾವೇ ವಾ ತಥಾ ವಿಪ್ರೋ ಲೌಕಿಕಾಗ್ನೇರಥಾಹರೇತ್
ಭಸ್ಮನೈವ ಪ್ರಕುರ್ವೀತ ನ ಕುರ್ಯಾನ್ಮೃತ್ತಿಕಾದಿಭಿಃ ॥294॥

ಇತ್ಯಾದಿ. ೧೨೯

ಎಲೆ ವೇದವಂ ಶೂದ್ರ
ರೆಲೆ ವೋದಲಾಗದೆಂ
ತೆಲೆಯುಂತು ಭಸಿತವಿಡದಾ ಪಾರ್ವರುಂ
ಎಲೆ ಲಿಂಗಪೂಜೆಯುಂ
ಸಲೆ ಮಾಡಲಾಗದೆಂ
ಬೆಲೆ ನಿನ್ನ ಸಂಹಿತಾ ವಾಕ್ಯಾದಿಯುಂ

ವೇದಸ್ಯಾಧ್ಯಯನೇ ಶೂದ್ರೋ ನಾಧಿಕಾರೀ ಯಥಾ ಭವೇತ್
ತ್ರಿಪುಂಡ್ರೇಣ ವಿನಾ ವಿಪ್ರೋ ನಾಧಿಕಾರೀ ಶಿವಾರ್ಚನೇ ॥295॥

ಇದು ಸನತ್ಕುಮಾರ ಸಂಹಿತೆಯಲ್ಲಿ ಇದಕ್ಕೆ ಗಾರುಡಪುರಾಣಂ—

---

1 ಷಂ (ಗ)

ಗೋಪೀಮಲಿಸಧಾರೀ ತು ಶಿವಂ ಸ್ಪೃಶತಿ ಯೋ ದ್ವಿಜಃ
ತಸ್ಯೈಕವಿಂಶತಿಕುಲಮಕ್ಷಯಂ ನರಕಂ ವ್ರಜೇತ್ ॥296॥

ಇತ್ಯಾದಿ. ೧೩೦

ಭಸಿತ ರುದ್ರಾಕ್ಷಧರ
ನಸಮ ವಿಪ್ರಂ ಶುದ್ಧ
ನೊಸೆದುಣಲು ಪಿತೃಪಙ್ಕ್ತಿಪೂತನವನೆ
ತ್ರಿಷುಲೋಕ ವಂದ್ಯನೆಂ
ದುಸುರ್ದವಾ ಬ್ರಹ್ಮಾಂಡ
ವೆಸೆವ ಲೋಕಾಕ್ಷಿ ಸೂತ್ರೋಕ್ತಿಗಳವಂ

ತ್ರಿಪುಂಡ್ರ ಧೃಗ್ವಿಪ್ರವರೋ ಯೋ ರುದ್ರಾಕ್ಷಧರಶ್ಶುಚಿಃ
ಸಪಙ್ಕ್ತಿಪಾವನಃ ಶ್ರಾದ್ಧೇ ಪಿತೃಣಾಂ ದತ್ತಮಕ್ಷಯಮ್ ॥297॥

ಇದಾ ಪಾರಾಶರಪುರಾಣದಲ್ಲಿ ಇದಕ್ಕೆ ಸೂತ್ರಂ—

ತ್ರಿಪುಂಡ್ರಧೃಗ್ವಿಪ್ರವರೋ ಯೋ ರುದ್ರಾಕ್ಷಧರಶ್ಶುಚಿಃ
ಸಪಙ್ಕ್ತಿಪಾವನಃ ಶ್ರಾದ್ಧೇ ಪೂಜ್ಯೋ ವಿಪ್ರೈಸ್ಸುರೈರಪಿ ॥298॥

ಇವೆರಡು ಇತ್ಯಾದಿ. ೧೩೧

ನುತ ಶ್ರಾದ್ಧ ಯಜ್ಞ ಜಪ
ಹುತವಹ ವ್ಯಾಪಾರ
ಜಿತ ಕಂತುಪೂಜನಾದಿಗಳೊಳೆಲ್ಲಂ
ಸಿತ ಭಸಿತಧರನಾವ
ನತಿಪೂತದೇಹನೂ
ರ್ಜಿತ ಮೃತ್ಯುವಂ ಗೆ[1]ಲು[1]ವನೆಂದುದುವುಮಂ

ಶ್ರಾದ್ಧೇ ಯಜ್ಞೇ ಜಪೇ ಹೋಮೇ ವೈಶ್ವದೇವೇ ಸುರಾರ್ಚನೇ
ಧೃತತ್ರಿಪುಂಡ್ರಃ ಪೂತಾತ್ಮಾ ಮೃತ್ಯುಂ ಜಯತಿ ಮಾನವಃ ॥299॥

ಇದಾ ಲೋಕಾಕ್ಷಿಕಂ ಸೂತ್ರಂ ಇತ್ಯಾದಿ. ೧೩೨

ಭಸಿತ ತ್ರಿಪುಂಡ್ರಮುಮ
ನೆಸೆವ ತ್ರಿಸಂಧ್ಯೆಯೊ[2]ಳ
ಗೊ[2]ಸೆದಾವನಿಡಲಘವದುರಿದು ಪೋಗಿ

---

[1] ಲಿ (ಖಗ) [2] ಳುವೊ (ಗ)

ಮಿಸುಪತಪ [1]ಮ[1]ಖವಿದ್ಯೆ
ನಸಿಪವೆಂದುಸುರ್ದು ಮಿಗೆ
ಪಸರಿಸಿದ ಸರ್ವಾಗಮೋತ್ತರವದಂ

ನಾಸ್ತಿ ಭಸ್ಮ ವಿನಾ ಸ್ನಾನಂ ದೀಕ್ಷಾ ಜ್ಞಾನಸ್ಯ ಸಂಗ್ರಹಃ
[2]ನೇಶಃ ಶಿವಾರ್ಚನಾದೀನಿ ನಿರ್ಭಸ್ಮೈವಂ ತಥಾಗಮಃ ॥304॥
ನ ದೀಕ್ಷಾ ನ ತಪೋ ಮಂತ್ರಾ ನ ಯಜ್ಞಾ ದೇವತಾ ನ ಚ
ವಿದ್ಯಾ ಸೈವಾಗಮಜ್ಞಾನಂ ಭಸ್ಮಮಾಹಾತ್ಮ್ಯ ವರ್ಜಿತಮ್ ॥305॥

ಇವೆರಡು ಇತ್ಯಾದಿ. ೧೩೯

ಭೀತಿಯಿಲ್ಲದೆ ಮಹಾ
ಪಾತಕಂಗಳನೆಯ್ದಿ
ದಾತನೀ ಭೂತಿ ಧಾರಣನಿಚಯದಿಂ
ವೀತಕಲ್ಮಷನೆಂದು
ಪ್ರೀತು ಪೇಳ್ದ ವೃದ್ಧ
ಶಾತಾತಪಸ್ಮೃತಿಯ ವಾಕ್ಯಾರ್ಥವಂ

ಸುರಾಂ ಪೀತ್ವಾ ಗುರುದಾರಾಂಶ್ಚ ಗತ್ವಾ ಸ್ತೇಯಂ ಕೃತ್ವಾ ಬ್ರಹ್ಮಹತ್ಯಾಂ ಚ ಕೃತ್ವಾ
ಭಸ್ಮಚ್ಛನ್ನೋ ಭಸ್ಮಶಯ್ಯಾಂ ಶಯಾನೋ ರುದ್ರಾಧ್ಯಾಯೀ ಮುಚ್ಯತೇ ಸರ್ವಪಾಪೈಃ ॥306॥

ಇತ್ಯಾದಿಃ ೧೪೦

ಜಲದೊಳವಗಾಹವದು
ಲಲನೆಸಂಗಂ ಪ್ರಾಣಿ
ಗೊಲೆಯೆಂದು ಬಿಟ್ಟುದಕದಾ ಸ್ನಾನವಂ
ಸಲೆಭಸಿತದವಗಾಹ
ನೆಲೆ ಯತಿಗೆ ವಿಧಿಯಿದೆಂ
ದುಲಿವ ಸೂತಾಖ್ಯ ಸಂಹಿತವಾಕ್ಯವಂ

ಆಗ್ನೇಯಂ ಭಸ್ಮಸ್ನಾನಂ ಯತಿಭಿಸ್ತು ವಿಧೀಯತೇ
ಆರ್ದ್ರಸ್ನಾನಾತ್ಪರಂ ಭಸ್ಮ ತ್ವಾರ್ದ್ರೇ ಜಂತುವಧೋ ಧ್ರುವಮ್॥307॥
ಆರ್ದ್ರಂ ತು ಪ್ರಕೃತಿಂ ವಿದ್ಯಾತ್ ಪ್ರಕೃತಿಂ ಬಂಧನಂ ವಿದುಃ
ಪ್ರಕೃತೇಸ್ತು ಪ್ರಹಾಣಾರ್ಥಂ ಭಸ್ಮನಾ ಸ್ನಾನಮಿಷ್ಯತೇ ॥308॥

ಈ ಎರಡೂ ವಾಸಿಷ್ಠ ಲೈಂಗದಲೂ ಸಮಂ. ಇತ್ಯಾದಿಃ ೧೪೧

---
1 ಮು (ಕ) 2 ನೆ (ಖಗ)

ಅವಪಾತಕಂಗಳಂ
ತವನೆಯ್ದುವಂ ಭಸಿತ
ದವಗಾಹವಿರ್ದವನೆ ಶಿವಮಂತ್ರವಂ
ತವೆ ಜಪಿಸಿದವಸುಮಾ
ಶಿವತೀರ್ಥಸುಸ್ನಾತ
ನವನೆಂದ ಕಾಲಾಗ್ನಿರುದ್ರಶ್ರುತಿಯಂ

'ತ್ರಿಪುಂಡ್ರಂ ಭಸ್ಮನಾ ಕರೋತಿ ಯೋ ವಿದ್ವಾನ್ ಬ್ರಹ್ಮಚಾರೀ ಗೃಹಸ್ಥೋ ವಾನಪ್ರಸ್ಥೋ ಯತಿರ್ವಾ ಸ ಸಮಸ್ತಪಾತಕೋಪಪಾತಕೇಭ್ಯಃ ಪೂತೋ ಭವತಿ। ಸತತಂ ರುದ್ರಮಂತ್ರಜಾಪೀ ಭವತಿ। ತೇನೇತಿಹಾಸಾಗಮಪುರಾಣಾನಾಂ ಶತಸಹಸ್ರಾಣಿ ಜಪ್ತಾನಿ ಭವಂತಿ। ಪ್ರಣವಾನಾಮಯುತಂ ಜಪ್ತಂ ಭವತಿ। ರೂಪೇ ರೂಪೇ ದಶಪೂರ್ವಾಂ ಪಙ್ಕ್ತಿಂ ಪುನಾತಿ। ದಶೋತ್ತರಾಂ ಚ ಪಙ್ಕ್ತಿಂ ಪುನಾತಿ। ಸಮಸ್ತಮಹಾತೀರ್ಥೇಷು ಸ್ನಾತೋ ಭವತಿ। ಸ ಸರ್ವಕರ್ಮಸು ಸದಾ ಯೋಗ್ಯೋ ಭವತಿ। ದೇಹಂ ತ್ಯಕ್ತ್ವಾ ಶಿವಸಾಯುಜ್ಯ [1]ಮೇ[1]ತಿ। ನ ಚ ಪುನರಾವರ್ತತ ಇತ್ಯಾಹ ಭಗವಾನ್ ಕಾಲಾಗ್ನಿರುದ್ರಃ'

ಇತ್ಯಾದಿ. ೧೪೨

ಸರ್ವತೀರ್ಥಸ್ನಾನ
ಸರ್ವಯಜ್ಞಾವಭೃತ
ದೊರ್ವುಳಿಯ ಕೋಟಿಗುಣ ಫಲವಪ್ಪುದು
ಸರ್ವಾಂಗದೊಳು ಭೂತಿ
ಪರ್ವಿರಲು ಧೂಳಿಸಲ
ಗುರ್ವಿಂದೆ ಭೀಮತಂತ್ರಾಖ್ಯಾನವಂ

ಸರ್ವತೀರ್ಥೇಷು ಯತ್ಪುಣ್ಯಂ ಸರ್ವಯಜ್ಞೇಷು ಯತ್ಫಲಮ್
ತತ್ಫಲಂ ಕೋಟಿಗುಣಿತಂ ಭಸ್ಮಸ್ನಾನಂ ನ ಸಂಶಯಃ ॥309॥

ಇತ್ಯಾದಿ॥ ೧೪೩

ಪರಿವಿಡಿಯಲಾಶ್ರಮದ
ನೆರವಿ ರುದ್ರಾಗ್ನಿಪರಿ
ಚರಿಯ ವಿಧಿಯಿಂದೊಗೆದ ಶ್ರೀವಿಭೂತಿಯಂ
ವರತ್ರಿಯಾಯುಷಮಂತ್ರ
ವೊರೆದಿಡುವುದೆಂದ ಪರ
ತರ ಭವಿಷ್ಯತ್ಪುರಾಣದ ವಾಕ್ಯವಂ

---

[1] ಖ (ಗ)

ಶಿವಾಗ್ನಿಕಾರ್ಯಂ ಯಃ ಕೃತ್ವಾ ಕುರ್ಯಾತ್ತ್ರ್ಯಾಯುಷಮಾತ್ಮವಿತ್
ವಿಶುದ್ಧಃ ಸರ್ವಪಾಪೈಶ್ಚ ಸಿತೇನೈವ ಚ ಭಸ್ಮನಾ ॥310॥

ಇತ್ಯಾದಿ. ೧೪೪

ಭೂತಿಯೇ ವರವಿಪ್ರ
ಜಾತಿಗಿದು ವಿಧಿಯೆಂದು
ಪ್ರೋತು ಮಾನಸ್ತೋಕ ಮಂತ್ರಾದಿಯಿಂ
ಕಾತ್ಯಾ[1]ಯಿನೀ[1] ಗೃಹ್ಯ
ಕಾತ್ಯಾ[2]ಯಿನೀ[2] ಸ್ಮೃತಿಯ
ನಾತುರಿಪ ಬೋಧಾಯನ ಸ್ಮೃತಿಯುಮಂ

'ಮಾನಸ್ತೋಕೇ ತನಯೇ ಮಾನ ಆಯುಷಿ ಮಾನೋ ಗೋಷು ಮಾನೋ ಅಶ್ವೇಷು ರೀರಿಷಃ ವೀರಾನ್ಮಾನೋ ರುದ್ರ ಭಾಮಿತೋವಧೀರ್ಹವಿಷ್ಮಂತೋ ಸಮಿಧಮಿತ್ವಾಂ ಹವಾಮಹೇ' ಇದು ಶ್ವೇತಾಶ್ವತರೋಪನಿಷತ್

ಮಾನಸ್ತೋಕೇತಿ ಮಂತ್ರೇಣ ಮಂತ್ರಿತಂ ಭಸ್ಮ ಧಾರಯೇತ್
ಊರ್ಧ್ವಪುಂಡ್ರಂ ಭವೇತ್ಸಾಮಂ ಮಧ್ಯಪುಂಡ್ರಂ ಯಜೂಂಷಿ ಚ ॥311॥
ಅಧಃಪುಂಡ್ರಮೃಚಸ್ಸಾಕ್ಷಾತ್ ತಸ್ಮಾತ್ ಪುಂಡ್ರತ್ರಯಂ ಶುಭಮ್
ತ್ರಿಯಾಯುಷಂ ಜಮದಗ್ನೇಃ ಕಶ್ಯಪಸ್ಯ ತ್ರಿಯಾಯುಷಮ್ ॥312॥
ಅಗಸ್ತ್ಯಸ್ಯ ತ್ರಿಯಾಯುಷಂ ಯದ್ದೇವಾನಾಂ ತ್ರಿಯಾಯುಷಮ್
ತನ್ಮೇ ಅಸ್ತು ತ್ರಿಯಾಯುಷಮಿತಿ ಮಂತ್ರೈಃ ಪೃಥಕ್ಕ್ರಮಾತ್ ॥313॥
ತ್ರಿಯಾಯುಷಾಣಿ ಕುರುತೇ ಲಲಾಟೇ ಚ ಭುಜದ್ವಯೇ
ನಾಭೌ ಶಿರಸಿ ಹೃತ್ಪಾರ್ಶ್ವೇ ಬ್ರಾಹ್ಮಣೋ ವೈದಿಕಸ್ಸದಾ ॥314॥

ಈ ನಾಲ್ಕುಗ್ರಂಥ ಮೂಱುಶ್ರುತಿಯುಲೂ ಸಮಂ ಇತ್ಯಾದಿ * ೧೪೫

ಭೂತಿಯಂ ಬಿಡದಿರೆಲೆ
ಪಾತಕರಿರೆಂದೆಂದು
ಮಾತೆಯೊಲು ವಿಪ್ರರ್ಗೆ ಶಿಕ್ಷೆಯಾಗಿ
ತ್ರೈ[3]ತ್ರಿ[3]ರಿಯುವೆನೆ ಸರಿಗೆ
ಪ್ರೋತು ಮಾನವಪದುಂ
ಭೂತ್ಯೈ ನ ಪ್ರಮದಿತವ್ಯಾಯರ್ಥವಂ

---

[1] ಯನ (ಕ) [2] ಯನ (ಕ) [3] ತ್ರಿ (ಗ)

* ಇಲ್ಲಿಂದ ಮುಂದೆ (ಗ) ಪ್ರತಿಯಲ್ಲಿ 'ಶಿವವಾಕ್ಯ ಮಾಹೇಶ್ವರವಾಕ್ಯ' ಎಂಬಿದೆ.

ಭೂತ್ಯೈ ನ ಪ್ರಮದಿತವ್ಯಮೆಂಬ ಮಂತ್ರ ಯಜುಸ್ಸಿನ ಶಿಕ್ಷಾಪನ್ನದಲ್ಲಿ ।
ಇದಕ್ಕೆ ಮಾನವಪುರಾಣಂ—

ಭೂತ್ಯಾಲಗ್ನಿ ಸಮುತ್ಥಾಯಾಸ್ತಥಾದೇಹಾವಕುಂಠನಾತ್
ಲಲಾಟೇ ಹೃದಿ ದೋರ್ದ್ವಂದ್ವೇ ತ್ರಿಪುಂಡ್ರಸ್ಯ ಚ ಧಾರಣಾತ್ ॥315॥
ನೈವ ಪ್ರಮದಿತವ್ಯಂ ವೈ ಭ್ರಮಾದಪಿ ಕದಾಚನ
ಭೂತ್ಯೈವೋದ್ಧೂಳನಂ ತಿರ್ಯಕ್ ತ್ರಿಪುಂಡ್ರಸ್ಯ ಚ ಧಾರಣಮ್॥316॥
ವರಿಷ್ಟಂ ಸರ್ವಧರ್ಮೇಭ್ಯಸ್ತತಸ್ತಂ ನಿತ್ಯಮಾಚರ

ಇವೆರಡೂವರೆ ಇತ್ಯಾದಿ. ೧೪೬

ಹರನಮರವರನೆಂತು
ವರಕಾಶಿತೀರ್ಥದಾ
ಕಾರವೆಂತು ತತ್ತ್ವಮಯುವೆಂತು ಭಸಿತಂ
ನೆರೆದ ಪುಂಡ್ರಾಳಿಗಂ
ತರಸು ತ್ರಿಪುಂಡ್ರವೆಂ
ದೊರೆದ ಶ್ರುತಿಮಯ ಶಿವರಹಸ್ಯೋಕ್ತಿಯಂ

ಸಮಸ್ತತೀರ್ಥೌಘಮಯಾ ಚ ಕಾಶೀ ವಿಶ್ವೇಶ್ವರಃ ಸರ್ವಸುರಾತ್ಮಕೋ ಯಥಾ
ಸಮಸ್ತತತ್ತ್ವೈಕರಸಾ ವಿಭೂತಿಸ್ತಥೈವ ಪುಂಡ್ರೌಘಮಯಂ ತ್ರಿಪುಂಡ್ರಮ್ ॥317॥

ಇತ್ಯಾದಿ. ೧೪೭

ಭಸಿತವೇ ರುದ್ರಾಗ್ನಿ
ಭಸಿತವೇ ಬ್ರಹ್ಮವಾ
ಭಸಿತವೇ ನಿರಂಜನಜ್ಯೋತಿಯೆಂದು
ಒಸೆದು ಜಾಬಾಲೋಪ
ನಿಷದವಾ ಮಹಿಮೆಯುಮ
ನುಸುರ್ದುದು ಸ ಏಷ ಭಸ್ಮಜ್ಯೋತಿಯಂ

ಸ ಏಷ ಭಸ್ಮ ಜ್ಯೋತಿಃ ಸ ಏಷ ಬಸ್ಮಜ್ಯೋತಿರಿತಿ ।

ಇದಕ್ಕೆ ಮಾನವಪುರಾಣಂ—

ಭಸ್ಮಜ್ಯೋತಿರ್ಭವತ್ಯೇವ ಶಿವಾಖ್ಯಂ ನ ಹಿ ಸಂಶಯಃ
ಜಾಬಾಲೋಪನಿಷತ್ಸರ್ವಂ ಪ್ರಾಹೇದಂ ಪರಯಾ ಮುದಾ ॥318॥

ಇತ್ಯಾದಿ. ೧೪೮

ನೆರದ,ಶ್ರುತ್ಯಾಗಮಂ
ನಿರುತವೇದುಂ ಪೊಗಳ್ದು
ಹರಹರ ಶ್ರೀವಿಭೂತಿ ಮಹಿಮೆಯುಳವಂ
ಪರಿಕಿಸಲು ನಡುಗಿದಪ
ವಿರ[1]ದೆಂ[1]ದು ಶಿವವಾಕ್ಯ
ವೊರೆದ ಸರ್ವಾಗಮೋತ್ತರಪ್ರಮುಖ್ಯವಂ

ಏನಂ ತಾಃ ಖಲು ವೈ ವೇದಾಃ ಸರ್ವಶಾಸ್ತ್ರಾಣಿ ಭೂರಿಶಃ
ಅಸ್ಪೃಷ್ಟ್ವಾ ವೈಭವಂ ಭೂತೇರ್ಯದಿದಂ ಚಕಿತಂ ವ್ಯದುಃ ||319||

ಇದಕ್ಕೆ ಮಾನವಪುರಾಣಂ—

ಶ್ರುತಯಃ ಸ್ಮೃತಯಸ್ಸರ್ವಾ ಪುರಾಣಾನ್ಯಖಿಲಾನಿ ಚ
ವದಂತಿ ಭಸ್ಮಮಾಹಾತ್ಮ್ಯಮತಸ್ತದ್ಧಾರಯೇತ್ ಸದಾ ||320||

ಇವೆರಡು ಇತ್ಯಾದಿ. ೧೪೯

ಶಿವವಾಕ್ಯ ಮಾಹೇಶ್ವರ ವಾಕ್ಯಪ್ರಮಾಣ[2]ಮೊ[2]ಳಗಾದವಂ ತೋಱುವ ಪ್ರಕರಣಂ—

ನರಮುನಿಸುರ ಬ್ರಹ್ಮ
ಹರಿನುಡಿಗಳೊಂದೊಂದ
ನರಿಯುವೊತ್ತಲು ಕ್ರಮದಿನಂತೆ ಹರಿಯ
ವೊರೆ ಹರನೊಳಿರದೆನಲು
ನರಕಿಯದನಳಿವವಂ
ವರವೆಂದ ಸರ್ವಜ್ಞಾನೋತ್ತರವದಂ

ನ ಪುಂಭಿರಾರ್ಷಕಂ ವಾಕ್ಯಂ ದೈವಿಕಂ ಮುನಿಭಿಸ್ತಥಾ
ನ ದೇವೈರ್ಬ್ರಹ್ಮಣೋ ವಾಕ್ಯಂ ವೈಷ್ಣವಂ ಪದ್ಮಜನ್ಮನಾ ||321||
ನ ಶೈವಂ ವಿಷ್ಣುನಾ ವಾಕ್ಯಂ ಬಾಧ್ಯತೇ ತು ಕದಾಚನ
ಬಾಧತೇ ಯೋ ಹಿ ಪಾಪಾತ್ಮಾ ಸ ನಷ್ಟೋ ಮೂಢಚೇತನಃ ||322||

ಇವೆರಡು ಇತ್ಯಾದಿ. ೧೫೦

---

1 ಬೆಂ (ಗ) 2 ಪೊ (ಕ)

ವೇದಾಗಮಾದಿಯುಂ
ಭೇದಿಪ ಕುದೃಷ್ಟಾಂತ
ವಾದ ಸಾಕ್ಷಿಪವೊರೆದಾ ಶಾಸ್ತ್ರವಂ
ಓದಿಸಲ್ಕಾಗದತಿ
ವಾದಿಗಳಿನೆಂದೊರೆದ
ನಾದಿ ನುಡಿಯುಂ ಶಿವರಹಸ್ಯಾದಿಯುಂ

ಶ್ರುತಿಸ್ಮೃತಿವಿರುದ್ಧಂ ಯತ್ಸಾಕ್ಷಿ ಪಂಚತ್ವಹೇತುಮತ್
ತದಸಚ್ಛಾಸ್ತ್ರಮಿತ್ಯಾಹುಃ ಪುರಾಣಾಗಮವೇದಿನಃ ॥323॥

ಇತ್ಯಾದಿ. ೧೫೧

ನೆರದ ಶ್ರುತಿವಾಕ್ಯವುಂ
ವರಶಾಸ್ತ್ರವಾಕ್ಯವುಂ
ಶರಣರೊರೆಯುಂ ಪ್ರಮಾಣಂ ತ್ರಿವಿಧವುಂ
ಧರೆಗೆಂದು ಶರಣರು
ತ್ಕರುಷೆಯು ಮಹತ್ವವಂ
ನೆಱೆ ಮೆಱೆದ ಶಿವರಹಸ್ಯದ ಹೃದಯವಂ

ಶಿವಧ್ಯಾನರತಾಃ ಶಾಂತಾಃ ಶಿವಶಾಸ್ತ್ರವಿದಶ್ಚ ಯೇ
ತೇಷಾಂ ವಾಕ್ಯಂ ಸದಾ ಶ್ರಾವ್ಯಂ ಶ್ರೇಯಃ ಪರಮಿಹೇಚ್ಛತಾ ॥324॥

ಇತ್ಯಾದಿ. ೧೫೨

ಶ್ರುತಿ ಶೈವಶಾಸ್ತ್ರಜಿತ
ರತಿಪನವರೊರೆಗಳ
ಪ್ರತಿಮ ಪ್ರಮಾಣವಿಮಾನವಳಿಪ
ಕ್ಷತಭಾಗ್ಯಹತಪುಣ್ಯ
ಗತಿಹೀನ ಮನುಜನೊರೆ
ಪ್ರತಿಯಪ್ಪುದೆಂತೆಂದ ವಾಕ್ಯವದುವಂ

ವೇದಾಃ ಪ್ರಮಾಣಂ ಸ್ಮೃತಯಃ ಪ್ರಮಾಣಂ ಧರ್ಮಾರ್ಥಯುಕ್ತಂ
ವಚನಂ ಪ್ರಮಾಣಮ್
ಯಸ್ಯ ಪ್ರಮಾಣಂ ನ ಭವೇತ್ಪ್ರಮಾಣಂ ಕಸ್ತಸ್ಯ ಕುರ್ಯಾದ್ವಚನಂ
ಪ್ರಮಾಣಮ್ ॥325॥

ನ ಯಸ್ಯ ವೇದಾ ನ ಚ ಶೈವಶಾಸ್ತ್ರಂ ನ ವೃದ್ಧವಾಕ್ಯಂ ಹಿ ಭವೇತ್
ಪ್ರಮಾಣಮ್
ಸ ಪಾತಕೋದ್ದಿಷ್ಟಹೆತೋ ದುರಾತ್ಮಾ ನಾತ್ಮ್ಯಾಪಿ ತಸ್ಯೇಹ ಭವೇತ್ಪ್ರ
ಮಾಣಮ್ ॥326॥

ಇವೆರಡು ಇತ್ಯಾದಿ. ೧೫೩

ನೆರದ ಕೋಟಿಯು ಕೋಟಿ
ವರಕೋಟಿ ವರುಷವಾ
ಪರಿಯ ಕೋಟಿಗಳ ನಾಲಗೆಗಳಿಂದಂ
ಹರನ ಮಹಿಮೆಯು ನಿರಂ
ತರ ಪೊಗಳೆ ಸವೆಯದಾ
ಪರಮಾಣೆನನಿತೆಂದ ಸ್ಕಂದೋಕ್ತಿಯಂ

ಕೋಟಿಕೋಟ್ಯಾಯುಷಾ ಕೋಟಿಕೋಟಿಜಿಹ್ವೇನ ಸರ್ವದಾ
ಕೇನಾಪಿ ಶಕ್ಯಂ ನೋ ವಕ್ತುಂ ಶಂಭೋರ್ಮಾಹಾತ್ಮ್ಯಮಪ್ಯಣುಮ್
॥327॥

ಇದಾ ಕಾಳಿಕಾಖಂಡದ ವ್ಯಾಸಭುಜಸ್ತಂಭದಲ್ಲಿ ಇತ್ಯಾದಿ ೧೫೪

ನರಕದಿಕ್ಕಿಗೆ ದ್ವಿಜ
ನೆರೆವ ಕಳ್ಳರು ಕದ್ದು
ಹರಿಸೆ ಹರಿಗಾಡಿನೊಳು ಪಶುನಿಚಯವಂ
ಮರಳ್ಚಿ ಪಶುಪತಿಪುರದೊ
ಳಿರಿಸಿ ಸುವಿಧಾನದೊಳು
ವೆರಪಲಿಂದಾಂ ಬಯಸಿ ಬರದೆನಿನಿತಂ ೧೫೫

ಇಂತಿನಿತು ಮೊದಲಾದ
ನಂತ ಕಥೆಯಂ ಕೇಳು
ತಂತಕಾಂತಕನವರ್ಗೂಡಿ ನಿಚ್ಚಂ
ಸಂತತಂ ಸುಖದಿಂದ
ಚಿಂತ್ಯನವನಮು ನಿ
ಶ್ಚಿಂತದೊಳು ಸಾನಂದನೊಪ್ಪುತಿರ್ದಂ ೧೫೬

ಇದು ನಂದಿನಾಥೇಶ
ಗದಿತವಾನಂದೈಕ
ದುದಧಿ ಸಾನಂದಾಖ್ಯಚರಿತೆಯೊಳಗೆ
ಮುದದಿಂದೆ ಶರಣಕವಿ
ಗೊದವಿದ ಶಿವಾದ್ವೈತ
ಹೃದಯವಿದು ಭಾವಿಸೆ [1]ತೃತೀ[1]ಯ ಸಂಧಿ ೧೫೭

ಇದು ಶಿವನ ಭಕ್ತತತಿ
ಗುದಿತ ಸಂಪದಕರಂ
ಇದು ಶರಣನಿಕರಕ್ಕೆ ಸಂಭ್ರಮಕರಂ
ಇದು ಶಿವಜ್ಞಾನಿಗಳ
ಹೃದಯಕಾಹ್ಲಾದಕರ
ವಿದು ನರರ ದುರಿತಹರವೆನಿಪ ಸಂಧಿ ೧೫೮

---

1 ತ್ರಿತ (ಖಗ)

ನಾಲ್ಕನೆಯ ಸಂಧಿ

ನರಕ ವರ್ಣನದ ರಗಳೆ—

ಕಂದ॥ ಶ್ರೀನಾಗಕುಂಡಲಂ ಪಂ
ಚಾನನ ಗುರುರೂಪ ವಿಶ್ವನಾಥಂ ಸಾಂಬಂ
ಸಾನಂದದೇವನಧಿಕನ
ನೂನ ಶಿವಾಸ್ಪದವನೆನಗೆ ಕೊಡುಗನವರತಂ ೧

ಲಲಿತರಗಳೆ.

ಗೌರೀಶನಣುಗಸಾನಂದೇಶನಾನಂದ
ಪೂರಿತಾತ್ಮಂ ಶಿವನ ಭಕ್ತಿಗೆಡೆಯಪ್ಪಂದ
ಗುರುರೂಪ ವಿಶ್ವೇಶ ಚರಣ ಸರಸಿಜಭೃಂಗ
ಗುರುರೂಪ ವಿಶ್ವಪತಿ ಪದಕಮಲ ವರಭೃಂಗ
ನಿರುತಿರ್ದನೊಂದುದಿನವುದಯುಸಮಯಂಗೆಯ್ದು
ಹರಹರಮಹಾಶಾಸ್ತ್ರ ಶಿವಧರ್ಮಮುಮನೆಯ್ದೆ
ಶರಣನಾಲಿಸಿ ಗುಹನಿನಾದ ಉತ್ತರವದಂ
ಪರಿಕಿಸುವನೆಂಬ ಬಗೆ ಮನವನನುವಿಸಲದಂ
ಪುರಮಥನ ಪ್ರಮಥಾದಿ ನಾಥತತಿಯೊಡಗೂಡಿ
ನೆರದೋಲಗದ ಶರಣ ತಿಂಥಿಣಿಯೊಳೊಡಗೂಡಿ

ಕೇಳುತಿರಲಾಶಾಸ್ತ್ರದುತ್ತರದೊಳಿರ್ದುದದ
ನೋಳಿಯಿಂ ನರಕದಾಖ್ಯಾನವೆಂದಿರ್ಪುದದ
ನಾಲಿಸಿದನಮಮ ಯಮಲೋಕವದು ನಡನಡುಗೆ
ಆಲಿಸಿದನಖಿಳದೋಷಂಗಳವು ನಡನಡುಗೆ
ನರಕದೊಳಗೊಂದಿರ್ಪ ಜೀವತತಿ ನಲಿದಾಡೆ
ನಿರಯದೊಳಗಿರ್ದ ಪಾಪರ್ಗೆ ಮುದವೊಡಗೂಡೆ
ಕೇಳಲುಸುರ್ವೆಂ ದೋಷವಿರ್ಪ ತೆಱನಂ ನಿನಗೆ
ಸ್ಥೂಲಸೂಕ್ಷ್ಮಂ ಸುಸೂಕ್ಷ್ಮಾಖ್ಯದಿಂ ಜಗದೊಳಗೆ

ತ್ರಿವಿಧರೂಪಿಂದಖಿಳದೋಷಂಗಳಿರ್ಪವೆಲೆ
ತವಿಸಲಾವಂಗಿವಂ ಕೇಳಲರಿದರಿದು ಸಲೆ

ಇಂದಿವಱಿಹೊಳೊಂದನೊರೆವೆಂ ಸ್ಥೂಲವೆನಿಪುದಂ
ಸಂದ ಭೇದೋಪಭೇದ ಪ್ರಕಾರದೊಳದಂ
ಜನಿಪವೆಲ್ಲಾ ದೋಷ ತ್ರಿಕರಣದೊಳಜೀಯುವಕೆ
ಜನಿಯಿಕುಂ ಬೇಱೆ ಬೇಱಬ್ಧಿಸಂಖ್ಯೆಯೊಳವಕೆ
ಪಾಪ ಉಪಪಾಪಮಾಪಾಪವತಿಪಾಪವೆಂ
ದೀ ಪುರಾಣದೊಳು ನಾಲ್ಕುಂ ಭೇದವಿಂತಿವಂ
ಸ್ಮಾರ್ತರಂತೊರೆವರೀರಯ್ದು ವಿಧವೆಂದಿವಂ
ಕರ್ತನ ವರ್ಗಗಳು ಪೊರ್ದರೆಂದುವೀ ಪಾಪವಂ
ಅಂತಕಾಂತಕನವರು ಪೊರ್ದರೀ ದೋಷವಂ
ಎಂತಕ್ಕೆಯೇನಾನುವಶದಿನೊಗೆದೊಡೆಯುವಂ

ಗುರುವೆ ಪರಿಹರಿಪರಂತಂತೆ ಶಾಸ್ತ್ರಗಳಿಂದೆ
ಹರ ಹರ ಹರ ವರ ವರಗುರು ಕೃಪೆಯೊಳೆಂದಂದೆ
ಅಂತಕನವರ್ಗಲ್ಲಿಯಧಿಕಾರವಿಲ್ಲಣ್ಣ
ಎಂತುವುಂ ಯಮನವರ್ಗೆ ಪುಗಲರಿದುವರಿದಣ್ಣ
ಉಳಿದವರ್ಗುಳಿಯದುಣ್ಣದೆ ಕರ್ಮವಣ್ಣ
ಅಳಿದು ಪೋಗದುವೆನಿತು ಜನ್ಮವುಳಿವಡೆಯಣ್ಣ
ಅಂಡಜ ಜರಾಯುಜ ಸ್ವೇದಜೋದ್ಭಿಜವೆಂದು
ಹಿಂಡುಯೋನಿಯು ಲಕ್ಕವೆಂಬತ್ತನಾಲ್ಕೆಂದು
ಅಜನಿಂತು ನಾಲ್ಕುತೆಱನಾಗಿ ಸೃಷ್ಟಿಸಿದವೀ
ತ್ರಿಜಗದೊಳು ದಿವಿಜ ದನುಜರ್ಮನುಜರೆಂದುವೀ

ತಿರಿಯಗಾದಿ ಪ್ರಮುಖ ಬಹುವಿಧದ ಜೀವರಂ
ತರತರದ ಕರ್ಮಾನುಗುಣ್ಯದಿಂ ಜೀವರಂ
ಪರಿಪರಿಯಲೊತ್ತಿ ಗೋಣ್ಮುರಿಗೊಂಬುದಾಮೃತ್ಯು
ಪರಿಕಿಸಲ್ಕರಿದಾವಗಂ ಮುಱಿವುದಾ ಮೃತ್ಯು
ಮಿಥುನ ಋತುಕಾಲಮುವನಾ ಗರ್ಭದೊಳಗೆಯ್ದೆ
ಪ್ರಥಮದಿನ ಕಲಲವೆಸರಂ ಪಡೆವನವನೈದು

ದಿನಕೆ ಬೊಬ್ಬುಳಿಯೆನಿಸಿದವನೇಳುದಿನದವಂ
ಜನನಿ ಗರ್ಭದ ಮಾಂಸಪೇಸಿಯೆಂದೆನಿಪವಂ
ಪದಿನಾಲ್ಕು ದಿನಕೆ ನೆತ್ತರ ಘಟ್ಟಿಯೆನಿಪವಂ
ಪದೆದು ಪೊಳೆ ಪೊನಸಿದಿಪ್ಪತ್ತೈದುದಿನದವಂ

ತಿಂಗಳೊಂದಱೊಳಯ್ದು ಪೊಳೆ ಪೊಳೆತು ತೋರ್ಪವಂ
ತಿಂಗಳೆರಡಱೊಳಖಿಳಮುಖ್ಯಾಂಗವೊಗೆದವಂ
ಪ್ರತ್ಯಂಗಸಂಧಿ ಮೂದಿಂಗಳಿಗೆ ನೆಱೆತದವಂ
ಮತ್ತೆ ಬೆರಲ್ಗಳು ಪುಟ್ಟಿದಬ್ದ ಮಾಸದೊಳವಂ
ಮುಖ ಮೂಗು ಕಿವಿ ಪೊಳೆತು ತೋರ್ಪೈದು ತಿಂಗಳವ
ನಖ ದಂತ ಕಿವಿ ವಿವರವಡೆದಾಱು ತಿಂಗಳವ
ನೇಳುತಿಂಗಳೊಳಖಿಳ ಗುಹ್ಯವಡೆದಿರ್ಪವಂ
ಜೋಳಿಸಿದ ಪೂರ್ಣಾಂಗದೇಳ್ಮಾಸಗರ್ಭವಂ
ಮಾತೃವುಂಡನ್ನ ಷಡ್ರಸವೀರ್ಯವಂ ನಾಭಿ
ಸೂತ್ರಯಂತ್ರದಿ ತೃಪ್ತಿಯೆಯ್ದೆ ವರ್ಧಿಸಿ ಶೋಭೆ

ವಡೆದಖಿಳ ಲಕ್ಷಣಂಬೆತ್ತು ನವಮಾಸದೊಳು
ತಡೆಯದೆ ತ್ರಿಕಾಲದಱಿವೊಗೆದು ನವಮಾಸದೊಳು
ತನಗೆ ಸುಖವಿದು ತನಗೆಯಿದು ದುಃಖವೆಂದಱಿದು
ತನಗೆ ನಿದ್ರೆಯು ತನಗೆ ಸ್ವಪ್ನವೆಂಬುವನಱಿದು
ಮುನ್ನ ಮಾಡಿದ ಸುಕೃತ ದುಷ್ಕೃತಂಗಳನಱಿದು
ಇನ್ನು ತಾ ಮುಂದೆಸಪ ಕೃತವಕೃತ ಫಲವಱಿದು
ಸತ್ತುಪುಟ್ಟುವ ಪುಟ್ಟಿಸಾವ ಪರಿಗಳನಱಿದು
ಸುತ್ತಿ ಚೌರಾಸೀತಿ ಲಕ್ಷಯೋನಿಯುನಱಿದು
ಪೇವರಿಸಿ ಭವಮಾಲೆಗಳ್ಕಿ ಕಡುನೊಂದಗಿದು
ತಾವು ಕಾಣದ ಯೋನಿಯಿಲ್ಲೆಂದು ಸುಗಿದಗಿದು

ಉಣ್ಣದಿರ್ಪುದದೋಂದು ಪೊಲೆಯದಿಲ್ಲಿಲ್ಲೆಂದು
ಬಣ್ಣಾವಣ್ಣಿಗೆಯ ದುಃಖವನೆಯ್ದೆ ಕುದಿದಂದು
ನಿರಯದಿಂ ದೂರ್ವಾಸ ಗರ್ಭವಾಸವಿದೆಂದು
ನರಕದಿಂ ಘೋರತರ ಗರ್ಭದಿರವಿದೆಯೆಂದು

ಮರಳಿ ಯೋನಿಗೆ ಸಲ್ಲದಿರ್ಪುಪಾಯವನೆಂದು
ನಿರುತವಿದನುಳಿವಡಿನ್ನಿದೆಯಲ್ಲದಿಲ್ಲೆಂದು
ಇದೆ ಯೋನಿ ಕಂಬಿಯೆಚ್ಚಿನ ಸರಿಗೆಯಾವಿನ್ನು
ಇದೆ ಯೋನಿಮಲಗಳಿಂ ನುಸುಳ್ದು ಬರ್ದುಕಿದೊಡಿನ್ನು
ಗುರು ಕರುಣಭಸಿತ ಶಿವವಿದ್ಯೆವಡೆದಾವಿನ್ನು
ಹರನ ಚರಣವನೆಯ್ದೆ ಪೊರ್ದಿ ಬದುಕುವೆನಿನ್ನು

ಭವರೋಗ ವೈದ್ಯನಂ ಸಾರ್ದು ಬರ್ದುಕುವೆವೆಂದು
ಭವಘೋರ ಶರಧಿಯಂ ದಾಂಟಿ ನೀಗುವೆವೆಂದು
ನೆನೆವುತಿರಲಣ್ಣ ಗರ್ಭ[1]ರಿಪು[1] ಹರಿ ತಾನೆ
ಸಿನೆ ಗರ್ಭಶತ್ರು ವಿಷ್ಣ್ವನಿಲ ರೂಪಿಂ ತಾನೆ
ಮುನಿದು ಪೊಡೆಯಲ್ ಪ್ರಾಣಿ ತಿರಿಗಿದನಧೋಗತಿಗೆ
ಘನ ಸುವಿಜ್ಞಾನವಱಿದೊಗೆವನಜ್ಞತೆಯೊಳಗೆ
ಹರಿ ಸೋಂಕೆ ನರಕದೊಳು ಪೊರಳ್ವರಿಂತೆಂಬಂತೆ
ಧರಣಿಯೊಳ್ ಬಿೞ್ದ[2]ಱಿಂಚಿ ಮಿಡಿಕಿ ಪೊರಳ್ವವನಂತೆ
ನೆಲದೊಳಗೆ ಮೊಱೆದೊಳಗೆ ತೊಟ್ಟಿಲೊಳಗಕಟಕಟ
ನಲಿವವಂ ನಗುವವಂ ಲಲ್ಲೆಗೆಯ್ವವನಕಟ

ತೊದಲುನುಡಿಗಲಿತು ಮುದ್ದಾಗಿ ಬಾಳ್ವವನಯ್ಯೊ
ಪದೆದು ದಟ್ಟಡಿಯಿಟ್ಟು ನಡೆದು ಬಾಳ್ವವನಯ್ಯೊ
ಉಡುವಲ್ಲಿ ಉಂಬಲ್ಲಿ ಪಡೆವಲ್ಲಿಯೊ ವೋವೋ
ಬಿಡದೆಲ್ಲವಂ ಬಲ್ಲನೊಡೆಯನೆನಲೊವೋವೋ
ಇಂತು ನಾನಾವಿಧದೊಳೊಂದಿರ್ಪ ಜೀವರುಮ
ನೆಂತುವುಂ ಬಾಳಲೀಯಂ ಮೃತ್ಯುದೇವರುಮ
ನೊತ್ತಿ ಕೊಲಲತ್ತಲೆಲೆ ದೂತರೊಯ್ವರು ಸಂದು
ಮುತ್ತಿ ಯಮಲೋಕಕೆರಡುಂ ಬಟ್ಟೆಯೊಳವೆಂದು
ವಸುಧೆಯೊಳು ಧರ್ಮನಿಷ್ಠರನೊಯ್ವ ಮಾರ್ಗವದು
ಸಸಿನವದು ಸಾರೆಯದು ಸ್ವಸ್ಥವದು ಸೌಖ್ಯವದು

---

[1] ವಗೆ (ಕ) [2] ಢ್ಢ (ಖ)

ಕೆರಹು ತುರಗಂ ಕರಿಗಳುಂ ರಥಂಗಳುವಮುಮ
ತರತರದ ಕೊಡೆಗಳುಂ ಮೇಲ್ಕಟ್ಟುವಂತಮುಮ
ಭೋಗವಸ್ತ್ರಾಭರಣವನ್ನಪಾನಾದಿದಂ
ರಾಗಪ್ರದಂ ಪಡಿಕರಿಗೆ ಮಂಗಳಪ್ರದಂ
ಏವೇಳ್ವೆ ಪಾಪಕರ್ಮರನೊಯ್ವ ಬಟ್ಟೆಯದ
ಏವೇಳ್ವೆ ಕ್ರೂರಕರ್ಮರನೊಯ್ವ ಕಷ್ಟವದ
ನೇವೇಳ್ವೆನಣ್ಣ ಬಣ್ಣಿಪರಾರೊ ಘೋರವಂ
ಏವೇಳ್ವೆನಣ್ಣ ಬಣ್ಣಿಪರಾರೊ ಹೇಯವಂ
ಜೀವಪನ ಪುರಕೊಯ್ವ ತೆಂಕಬಟ್ಟೆಯನದಂ
ಗಾವುದೆಂಬತ್ತಾಱುಸಾಹಸ್ರವೆನಿಪದಂ

ಹರಹಿ ತೀವಿದ ಕೂರಿತಪ್ಪ ಬಲ್ಮುಳ್ಳಿನಿಂ
ಚರಣವಿಡೆ ಘುರಿಘುರಿಲಸರಿವ ನಿರ್ಮು'ಣ[1]ಲಿನಿಂ
ಕ್ಷುರಧಾರೆಯಂತೆ ಕೂರಿದವಪ್ಪ ಕಲ್ಲಿನಿಂ
ಇರಬಾರದುತ್ತರಿಸಬಾರದೊಳ್ಗಿಸಱಿನಿಂ
ಸುತ್ತಿ ಸೂಚೀನಿಭದ ದರ್ಭೆವುಲ್ಲಲ್ಲಲ್ಲಿ
ಇತ್ತ ದರಿಯುತ್ತ ಪರ್ವತತತಿಗಳಲ್ಲಲ್ಲಿ
ಧಳಧಳನೆವ್ವರಿವ ಕೆಂಡವನುಗುಳ್ವ ಮಳೆಯಲ್ಲಿ
ಧಳಧಳನಿಳಿದುಕೊಳ್ವ. ವಿಷಮಗರ್ತಗಳಲ್ಲಿ
ಅಯ್ಯಲಡಿಯಿಡೆ ಕಾಲಸರಿವ ಹೆಂಟೆಗಳಣ್ಣ
ಅಯ್ಯಲಡಿಯಿಡೆ ಸುಡುವ ಹುರಿದ ಬೆಳ್ಮಣಲಣ್ಣ

ಅಲ್ಲಲ್ಲಿ ಕಾಸಿ ಪೆಟ್ಟಿದ ಸಿಲುಕುಮೊಳೆಯಣ್ಣ
ಅಲ್ಲಲ್ಲಿಯಿಡಿದಡರ್ದ ಬಿದಿರ ಹಿಂಡಿಲವಣ್ಣ
ತನ್ನ ತಾನಱಿಸಿ ಕಾಣದ ತಮಂಧಂಗಳಿಂ
ಎನ್ನನಂ ಮುಂದುಗೆಡಿಸುವ ಚೌಹಟಂಗಳಿಂ
ವೊಂದಿ ಘೋಳ್ಗುಟ್ಟಿಸುವ ಕಾಳ್ಗಿಚ್ಚು ತಗುಳ್ವಲ್ಲಿ
ಸಂದು ಹಾಸಿದ ಕಾಸಿದಱಿಗಲ್ಗಳಲ್ಲಲ್ಲಿ

1 ಳ (ಕ)

ಉಱಿಹಿಮಂ ನೆನೆವ ಮನವಂ ಮುರುಂಟಿಪುದೆಯ್ಯೊ
ತಱಿಸಲಲು ಮೂಗುವರೆ ಮುಳುಗುಗುವೆಳೆಮಣಲಯ್ಯೊ
ನಡೆದು ಹುಗೆ ಕುಡಿದುಕ್ಕುತಿರ್ಪ ಕಮ್ಮಡುವಕಟ
ಮಡುಗಟ್ಟಿ ಕರಗಿರ್ಪ ಸೀಸರಸವಕಟಕಟ

ಕಿಱಿದೆಡೆಯ ಸಿಂಹ ಕಿಱಿದೆಡೆಯ ಪೆರ್ಬುಲಿಯುಪ್ಪ
ಕಿಱಿದೆಡೆಯ ಬಳ್ಳು ಕಿಱಿದೆಡೆಯ ಚೇಳುಗಳಪ್ಪ
ಅಲ್ಲಿ ಪಥಿಕರನೆಯ್ದಿ ಪೀರ್ವ ಜಿಗುಳೆಗಳಮ್ಮ
ಅಲ್ಲಿ ನೆಲಮುಕ್ಕನೆನಿಸುವ ಪಾವು ನೋಡಮ್ಮ
ಅಕಟ ಬೆಂಬಿಡದೂಱುವಾ ಮಹಾನೋಣವಹೋ
ಅಕಟ ಅಱಿತಿಯಟ್ಟಿ ನುಂಗುವ ಮಹೋರಗವಹೋ
ಅಲ್ಲಿ ಮುನಿದೆಱಗಿಱಿದು ಸೀಳ್ವ ತುಳಗಜವಹೋ
ಅಲ್ಲಿ ಬಟ್ಟೆಯನುಳಿದು ಪುಗದೆಸೆಗಳಿಲ್ಲಹೋ
ಬಸಿದ ಕೋಡಿನ ಸಲಗನೆಸೆವ ಕೋಣಂಗಳಿಂ
ಮಸಗಿ ವಿಸಟಂಬರಿದು ಕರ್ಚುವೃಷ್ಟಂಗಳಿಂ

ಪಿಡಿದು ರಕ್ತವನೀಂಟಿ ಬಿಡದ ಢಾಕಿನಿ ನಿವಹ
ವೊಡೆದು ಕರವಾಳಿನಿಂ ಪೋಳ್ವ ರಕ್ಕಸನಿವಹ
ಅಲ್ಲಿ ಕ್ಷಯರೋಗ ಮೂತ್ರಂ ಗುಲ್ಮಪೋತ್ತರಂ
ಅಲ್ಲಿ ವಾತಂ ಪಿತ್ತವತಿಸಾರ ಕೇಕರಂ
ಬೆಂದ ಕುಷ್ಟಂ ಪಾಂಡು ಮೊಲೆನಾಗನೊಡನೊಡನೆ
ಪಿಂದುವಿಡಿದಲೆವವೆಲ್ಲಾ ರೋಗವೊಡನೊಡನೆ
[1]ಪು[1]ಡಿಯನಿಡಿದಡಸಿ ಕೂಱುಂಗೊಂಬ ಗಾಳಿಯಿಂ
ಒಡೆದು ತಲೆಹುಡಿಗುಟ್ಟುವಱಿತಗಲ್ಲ ವೃಷ್ಟಿಯಿಂ
ಅಱಿಯಟ್ಟಿ ಕುಟ್ಟಿ ಛಿಳಿಛಿಟಿಲೆಂಬ ಸಿಡಿಲ್ಗಳಿಂ
ನೆಱಿ ತನುವನುಜೀತಾಗಿ ನುಸುಳ್ವ ಸರಲ್ವಳಿಗಳಿಂ

ಘೂರುಘುಮ್ಮೆಂದಿಳಿವ ಕೈದುಗಳ ಮಳೆಯಣ್ಣ
ಏಱಿ ಬಾಯೊಳ್ ಪುಗುವ ಕ್ಷಾರಧಾರೆಗಳಣ್ಣ
ಅಕ್ಕಟ ಮುರುಂಟಿಸುವ ಶೀತವಾತವದಣ್ಣ
ಅಕ್ಕಟುರಿವರಿವ ಬೀಸುವ ಗಾಳಿಗಳವಣ್ಣ

---

[1] ಹು (ಖಗ)

ಒಡನೆ ಸಂಬಳವಿಲ್ಲದೀಪರಿಯ ಮಾರ್ಗದೊಳು
ಯೆಡೆಯಲೂರಿಲ್ಲೊಡನುಡಿವರಿಲ್ಲ ಮಾರ್ಗದೊಳು
ನೀರಿಲ್ಲ ನೆಳಲಿಲ್ಲ ನಿಲಲೀಯರಕಟಕಟ
ದಾರಿ ಮುನ್ನಿಲ್ಲ ಘೋರಾಂಧವಿಡಿದಕಟಕಟ
ಅಲ್ಲಿ ದುರ್ಮದರೆನಿಪ ಪಾಪಕರ್ಮರನೋವೊ
ಬಲ್ಲಾಳಯಮದೂತರೆಳದೊಯ್ವರೋವೋವೊ

ಪಿತರಿಲ್ಲ ಸುತರಿಲ್ಲ ಮಾತೆಯಿಲ್ಲಯ್ಯಲಾ
ಸತಿಯಿಲ್ಲ ಸುತೆಯಿಲ್ಲ ಹಿತವರಿಲ್ಲಯ್ಯಲಾ
ಇಲ್ಲಿ ಸಹಭೋಕ್ತೃಗಳು ಏಕಾಕಿ ತಾನಲ್ಲಿ
ಇಲ್ಲಿಯರ್ಥಾರ್ಜನೆಯ ದುಃಖವಗಣಿತವಲ್ಲಿ
ಓರ್ವನಾರ್ಜಿಸಿದ ಸುಖಕನಿಬರುಂ ಹುದುವಿಲ್ಲಿ
ಸರ್ವರಾರ್ಜಿಸಿದ ದೋಷಕ್ಕೋರ್ವನಂತಲ್ಲಿ
ಬಳಿ ಬಳಿಯಲಂದು ಮಾಡಿದ ಕರ್ಮವಳುತ ಬರೆ
ಹಳವಿಸುತ ರೂಪುಗೊಂಡಾ ಪಾಪವೊಡನೆ ಬರೆ
ಬರುತಲಱ್ತವೆಣನಾಗಿ ಬಱಬಱನೆ ತನು ಬತ್ತಿ
ಬಱಲಾಗಿ ತುಟಿಗಂಟಲಿರ್ಪೊಡಿ ನೆಱೆಪೊತ್ತಿ

ಕರಮೆ ನೀರಡಿಕೆ ಮಿಗೆ ತಟ್ಟಾಱಿಸುತ್ತ. ಬರೆ
ಮರಗಿಚ್ಚಿನಂತೆ ಪಸಿವೊಳಗೊಳಗೆ ಸುಡುತ ಬರೆ
ಇನಿತವಸ್ಥೆಯ ಬಟ್ಟೆಗೊಲೆಯುಲ್ಲದೆಲೆಯಣ್ಣ
ಇನಿತವೆಯ್ದುದೆ ಮೇಲೆ ಮಾಳ್ಪ ವಧೆಗಳಿವಣ್ಣ
ಅತಿಗರ್ವಿತದ ಧೂರ್ತರೆಂಬರ್ಗೆ ಕೇಳಣ್ಣ
ನುತ ಶೃಂಖಲಾಬಂಧನಂ ಮಾಡಿ ಕೇಳಣ್ಣ
ನೆಗಪಿ ತಲೆ ತೇಯೆ ದಱದಱನೆಳವರೋವೋವೊ
ಮಗುಚಿವುರವೆಯ್ದೆ ತೇಯಲು ಮಾರ್ಗದೊಳಗೋವೊ
ಅರೆಬರಂ ಮುಳ್ಳೊಳಗೆ ಕೆಲರನಗ್ನಿಗಳೊಳಗೆ
ಕರಮೆ [1]ಹೆಡ[1]ಗಟ್ಟಿನಿಂ ಕೈಸಂಕಲೆಗಳು ಮಿಗೆ

ಕೆಲಬರಂ ಕೊರಲ ಸಂಕಲೆಯುರುಳಿನಿಂದಯ್ಯೊ
ಕೆಲಬರ್ಗೆ ನಾಲಗೆಯೊಳಿಕ್ಕಿದಂಕುಶಪಯ್ಯೊ

---

1 ಪೆಡೆ (ಖ)

ಉಱೆ ವರ್ಮ ಕುರುಳ ಸಂಕಲೆಯೊಳರೆಬರನಹೋ
ನೆಱೆ ತೂಂತುಗೊಱೆದ ಮೂಗಿನ ನೇಣೆನಿಂಪಹೋ
ಗಲ್ಲವಂ ಕೊಱೆದು ಸಂಕಲೆಗೋದು ಕೆಲಬರಂ
ಎಲ್ಲ ತುಟಿಯೊಳ್ ಕೊಯ್ದು ಸಂಕಲೆಯೊಳರೆಬರಂ
ಕೊಱೆದು ತೊಡೆಯೊಳ್ ಕಾಯ್ದು ಕೋದ ಸಂಕಲೆಯಿಂದೆ
ಕೊಱೆದು ಕಿವಿಯೊಳು ಕೊಱೆದು ಚಿಬುಕದೊಳ್ ನೇಣಿಂದೆ
ನಡೆಗುಱುಗಳಂ ಮಾಡಿ ಕೈಯನೆಚ್ಚುವರಿರವೆ
ನಡಯಿಸೆಚ್ಚಾರ್ದು ಕಾಲ್ಗಳನರಿದು ಬಿಡದಿರವೆ
ತಲೆಗಳಂ ತುದಿಮೂಗನೆಚ್ಚು ಕೆ[1]ಡ[1]ಪುವರಹೋ
ಕೆಲರ ಶಿಶ್ನಂ ವೃಷಣವಂಗಸಂಧಿಯನಹೋ
ಈ ತೆಱದ ಯಾತನೆಯ ಮಾಡುತವರೊಯ್ವಲ್ಲಿ
ವಾತ ಪಿತ್ತಾದಿ ರೋಗಂಗಳಂತಲೆವಲ್ಲಿ
ಹಸಿದೆವೆಂಬರು ಕೆಲರು ತೃಷೆಯೆಂಬವರ್ ಕೆಲರು
ನಸಿದೆವೆಂಬರ್ ಕೆಲರು ಛಳಿಯೆಂಬವರ್ ಕೆಲರು
ಬೆಂದ ಕಾಮನ ದಾಳಿಯೆಡೆಯೆಡೆಯಲವಗ್ರಾಹ
ಕಂದರ್ಪಜಿತನನಱಿಯದ ಪಾತಕಗ್ರಾಹ
ಅನ್ನಪಾನಾದಿಗಳನಂದೀಯದಿಂದುಂಟೆ
ಮುನ್ನವೀಯದ ಸುಖವ ನೆರೆವರಲ್ಲಿಯದುಂಟೆ
ಇಱಿಸಿಕೊಳುತಂ ತಱಿಸಿಕೊಳುತ ಕೊಱೆಯಿಸಿಕೊಳುತೆ
ನೆಱೆಮುಱಿಸಿಕೊಳುತೊಱಸಿಕೊಳುತಲೂಱಿಸಿಕೊಳುತೆ
ಹರಿವುತುಂ ತೇರ್ರೈಸುತುಂ ತೆರಳುತುರುಳುತುಂ
[2]ಪೊ[2]ರಳುತುಂ ಸುರುಳುತುಂ ಮೊರೆವುತುಂ ನರಳುತುಂ
ನೊಂದೆವಯ್ಯೋ ನೊಂದೆವಯ್ಯೊ ಸಾಲದೆಯಿನ್ನು
ಬೆಂದೆವಯ್ಯೋ ಬೆಂದೆವಯ್ಯೊ ಸಾಲದೆಯಿನ್ನು
ನಿಂದು ನಿಂದೆಳೆಯಿರಯ್ಯೋ ಧರ್ಮವಾಗದೇ
ನಿಂದು ನಿಂದರಿಯಲಾಗವೆ ಕೊಯ್ಯಲಾಗದೇ
ಮೆಲ್ಲಮೆಲ್ಲನೆ ಸೀಳಿರೆಮ್ಮಯ್ಯ ದಮ್ಮಯ್ಯ
ಮೆಲ್ಲಮೆಲ್ಲನೆ ಚುಚ್ಚಿರೆಮ್ಮಯ್ಯ ದಮ್ಮಯ್ಯ

---

1 ಡು (ಖ) 2 ಹೊ (ಖಗ)

ದೂತರಿರ ತಾತರಿರ ಒಟ್ಟೆ ಕೃಪೆಮಾಡಿರೇ
ಆತುರರ ಕಾ[1]ತ[1]ರರೊಳೇನು ದಯೆಮಾಡಿರೇ
ಬಾತೆಗೇಡಿಗಳೆಮ್ಮೊಳೇಕಿನಿತು ರೋಷವೆಲೆ
ಪಾತಕರನಱಿದಱಿದು ಮೂದಲಿಸಲೇಕೆ ಸಲೆ
ಅಂದೆಯುಱಿದೊಡೆ ಯಿನಿತವಸ್ಥೆಯುಹವೇ ತಂದೆ
ಅಂದು ಮಱೆದಿರ್ದಕಾರಣವಿನಿತುವೆಲೆ ತಂದೆ
ಪರಮಶಿವಧರ್ಮವೆನಲೊಮ್ಮೆ ಕೇಳದ ಫಲಂ
ನರಕದಾಖ್ಯಾನವೆನಲೊಪ್ಪೆ ಕೇಳದ ಫಲಂ
ವೇದಾಗಮಂಗಳೆನೆ ಸಾಧಿಸದಿರೆಂದದಿದು
ಆದ್ಯರಾಖ್ಯಾನವೆನಲೋದದಿರಿಯೆಂದದಿದು
ಶರಣರುನ್ನತಿಕೆಯುಱಿದಱಿಯದಂತಿರ್ಪುದಿದು
ಹಿರಿಯರೆಂಬುದುಮನೆಲೆ ಕೇಳದಂತಿರ್ಪುದಿದು
ಎಲ್ಲಿಯದು ಸ್ವರ್ಗವೆಲ್ಲಿಯ ನರಕವೆಂದ ಫಲ
ಎಲ್ಲಿಯದು ಭಕ್ತಿಯೆಲ್ಲಿಯ ಮುಕ್ತಿಯೆಂದ ಫಲ
ಅಱೆಹೊದೆದ ಗೋಣೆ ಹೋಣೆಗನಾಯ್ತು ಕೊಲೆಗೆ ಸಲೆ
ಉಱಿದಱೆಸಿಕೊಂಡ ತಲೆಗುಱಿ ನೆಱಿಯಿತಿಲ್ಲಿಗೆಲೆ
ಸರಿ ಹರಿಹರರ್ ಭೇದವಿಲ್ಲೆಂದ ಫಲವಯ್ಯ
ನೆರೆದ ಶ್ರುತಿ ಏಕನೆನಲಾಲಿ[2]ಸಿ[2]ದ ಫಲವಯ್ಯ
ಇಟ್ಟ ಮಟ್ಟಿಯು ಬೊಟ್ಟುಯಿಟ್ಟೆಯಾಯಿತ್ತಹೋ
ಸುಟ್ಟ ಮುಡುಹಿನ ಚಕ್ರವಿಕ್ಕಿತೀ ಪಥಕಹೋ
ಧರ್ಮವೆಂದೆಸಗೆ ಹಸುಕರ್ಮಬೊಮ್ಮತಿಯಾಯ್ತು
ಸುಮ್ಮನವ ಕೊಂದ ಫಲ ಕುಮ್ಮರಿದುದಿಂತಾಯ್ತು
ಬಯಲ ಬೊಮ್ಮದ [3]ಬೋಳು[3] ದಾಳಿಯಾಯಿತ್ತಕಟ
ನಯದ ಮುಂಡೆಯ ಬೋಧೆ ವಧೆಮಾಡಿತಕ್ಕಟ
ನಾವೆಸಪ ಕೃತ್ಯವೇ ಕೃತ್ಯವೆಂದಿರ್ದಂದು
ನಾವೆ ನಿತ್ಯರು ಸಾವದೆತ್ತಣದು ಘಡಯೆಂದು
ಅರುಯೆಮಗಿದಿರಿಲ್ಲೆನುತಿರ್ದುವಿರುತ್ತಿರಲು
ಮಾರಿಯಂದದ ಮೃತ್ಯುವೊತ್ತಿ ಮುಱಿವುತ್ತಿರಲು

1 ತು (ಗ) 2 ಸ (ಖ) 3 ಬೊಳ್ಳು (ಗ)

ಮರಗಳಿರ ಮಟ್ಟಿಗಳಿರಾ ಕಂಡಿರೇ ತಮ್ಮ
ಗಿರಿಗಳಿರ ಶರಧಿಗಳಿರಾ ಕಂಡಿರೇ ತಮ್ಮ
ಗಿಡುಗಳಿರ ಮಡುಗಳಿರ ಕಂಡಿರೇ ತಮ್ಮಿರವ
ಸುಡುಗಾಡುಗಳಿರ ಕಂಡಿರೆ ಕಂಡಿರೇಯಿರವ
ಅವನಿ ಬಾಯ್ದೆಱೆದು ನುಂಗವ್ವ ಬರ್ಸೆಕಿಸು ತಾಯೆ
ಅವಧರಿಸು ದೆಸೆಯ ದೈವವೆ ನುಂ[1]ಗಿರ್ಪ ತಾಯೆ
ಮಾರಿ ನಿನ್ನಂ ಮಾರಿ ನುಂಗಿತೆಯಕಟಕಟ
ದಾರಿಯಿದನಾರು ಸೈರಿಸಿ ನಡೆವರಕಟಕಟ
ಬೇಕೆಂಬರಿಲ್ಲ ಬೇಡೆಂಬರಿಲ್ಲಯ್ಯಲಾ
ಸಾಕೆಂಬರಿಲ್ಲ ಸಾಲದೆಯೆಂಬರಿಲ್ಲಲಾ
ಹಾ ಪಾಪವೇಯಕಟ ಹಾ ಕರ್ಮವೇಯಕಟ
ಏ ಪರಿಯೊ ಭಾವಿ ಹಾ ಹಾ ದೈವವೇಯಕಟ
ಅಕ್ಕಟಾ ಅಕ್ಕಟಾಯಿಂತು ಮಾಡಿದೆ ವಿಧಿಯೆ
ಅಕ್ಕಟಕ್ಕಟ ನಿನಗೆ ಸಂತೋಷವೇ ವಿಧಿಯೆ
ಎಂದು ನೆನೆನೆನೆದು ದುಷ್ಕೃತ ಕೃತವನಡಿಗಡಿಗೆ
ನೂರ್[2]ದೆಂಬತಾಱುಸಾಹಸ್ರ ಯೋಜನದೊಳಗೆ
ಅಗಿದು ಮೈದೆಗೆದು ಸಿಗ್ಗಾಗಿ ತಮ್ಮಿಂ ತಾವೆ
ತೆಗಳಿ ಬೈಬೈದು ಬಾಯುಳಿದು ಶೋಕಿಸಿ ತಾವೆ
ಕೈಮುಱಿಯೆ ಮೋದಿ ಬಾಯ್ ಬಸುಱ್ಗಳುಮನಯ್ಯಲಾ
ಮೈಮಱೆದು ಮೂರ್ಛಿಸುತವೆಚ್ಚಱುತವಯ್ಯಲಾ
ಅಳುತ ಬಳಲುತ ಕಳವಳಿಸುತಳಲುತಯ್ಯಯ್ಯೊ
ಹಳವಿಸುತ ಹೆಪ್ಪಳಿಸುತಳಸಿಕೊಳುತಯ್ಯಯ್ಯೊ
ಇಂತಿಂತು ಬರ್ಪವರನಂತ ಸಂತಾಪದಿಂ
ಸಂತತಂ ಯಮನವರ್ಗಳಿಂತಿಂತು ಕೋಪದಿಂ
ನಾನಾಪದೌಘಸಂದಣಿ ಪುದಿದ ಮಾರ್ಗದೊಳು
ನಾನಾವಿಚಿತ್ರವಿಧ ವಧೆ ಪುದಿದ ಮಾರ್ಗದೊಳು
ಪುರಕೊಯ್ದು ಯಮರಾಜನೋಲಗದೊಳಮರ್ದಿರಲು
ಪರಿವಿಡಿಯೊಳಿರಿಸಿ ದೂತರು ಬಿನ್ನವಿಸುತಿರಲು

---

[1] ಗಿಲೆ (ಖಗ) [2] ದೆನೆಂಬತ್ತು (ಗ)

ಇದು ನಂದಿ ರಚಿತ ಸಾನಂದಚರಿತದೊಳಗಿದು
ಪದಪಿನಿಂ ಶರಣಕವಿಯೊರೆದ ಕನ್ನಡದೊಳಿದು
ಪ್ರಕರಣ ಚತುಷ್ಟಯವೆನಿಪ ರಗಳೆ ಸಲೆ ತಾನೆ
ಸಕಲರಿಗೆ ವೈರಾಗ್ಯದ ಪ್ರಕರಣಂ ತಾನೆ ೨೭೦

ಕಂ॥ ಗುರುರೂಪ ವಿಶ್ವನಾಥಂ
ನರಕಾಂಧ ದ್ಯುಮಣಿಯೊಡೆಯನಗಜಾವಸಥಂ
ಗುರುಭಕ್ತಿವರವನೆಮಗಂ
ಕರುಣಿಸುಗೆ ಪುರಾರಿ ಮೃತ್ಯುಹರನನವರತಂ ೨

ಐದನೆಯ ಸಂಧಿ

ನಿರಯನಾಮವರ್ಣನ ಸಂಧಿ

ರಾಗ– ಗುಂಡಾಕ್ರಿ। ತಾಳ-ಝಂಪೆ

ಪಲ್ಲವ॥ ನರಕತರು ಪರಶು ಶಂ
ಕರ ಶರಣ ಕಾರುಣ್ಯ
ಶರಧಿ ನರಕಾಖ್ಯಾನಮಂ ಕೇಳಿದಂ

ವ॥ ಸಾನಂದದೇವಂ ಅಮಮ!

ಪದ॥ ಶ್ರೀಪರಮನಮಲಜನ
ದಾಪತ್ತೃಶಾಂತಕರ
ನಾ ಪಾಪತತಿಗತುಳ ತಾಪಪ್ರದಂ
ಶ್ರೀಪಾರ್ವತೀಶ ಗುರು
ರೂಪವಿಶ್ವೇಶಯೆ
ನ್ನೋಪ ರಕ್ಷಿಪುದಚಲಭಕ್ತಿಯಿತ್ತು ೧

ಆತುರಿಸಿಯಂತಂತೆ
ಘಾತಿಸುತೆ ಗರ್ವಿತರು
ಪ್ರೀತಿವಿಮುಖರು ದುಷ್ಟರಾಪಥದೊಳು
ದೂತರೊಯ್ದೆಲೆದೇವ
ಪಾತಕಾಳಿಯಿದೆನಲು
ಪ್ರೇತಾಧಿರಾಜನಾ ಪಥದೊಳಣ್ಣ ೨

ಈ ಪಥಕ್ಕಿತರವ
ಪ್ಪಾ ಪಥದೊಳೊಗೆದ ನಿ
ಷ್ಪಾಪರ್ಗೆ ಧರ್ಮಮೂರ್ತಿಯನೆ ತಳೆದು
ಆ ಪೊತ್ತು ಆದರಿಸಿ
ವೋಪರಂತೊಸೆದೆಂದ
ನಾ ಪುಣ್ಯಜನಕೆ ಭಾಸ್ಕರನಂದನಂ ೩

ಎನ್ನಾಣೆ ಬಟ್ಟೆಯೊಳ
ಗನ್ಯಾಯುವಿಲ್ಲಲೇ
ಮನ್ನಿಸಿದರೇ ಸುಖದೊಳೆಯ್ತಂದಿರೆ
ಧನ್ಯರಾರ್ ನಿಮ್ಮಿಂದೆ
ಯನ್ಯರಾರ್ ನಿಮಗಾಪ್ತ
ರೆನ್ನರೊಳರೆಲೆ ಧರ್ಮನಿಷ್ಠರಿನ್ನು ೪

ನಿವನಿವಗೆ ಪುಷ್ಪಕವ
ನಿವನೇಱಿ ದಿವದೊಳಗೆ
ತವೆಯುಂಡು ಯಿಲ್ಲಿಗೆಯ್ತಂದು ಮರಳಿ
ಅವಶೇಷ ನರಕವೆಂ
ಬವನುಂಬುದೆಂದು ಕಳು
ಪುವ ಭರದೊಳಿರ್ದುಳಿದು ತಿರಿಗಿನೋಡಿ ೫

ದೋಷಿಗಳ ಕಣ್ಗೆಯು
ಪ್ಪಾಸುರಂ ಮಸಗಿದಂ
ತಾಶಾಸಮೂಹವಂ ನುಂಗುವಂತೆ
ದೋಷಾಸ್ಯದಿಂದಳುರ್ವ
ಕೇಸುರಿಯಿಪೆನಲಡರ್ದ
ವಿಾಸೆ ತಲೆನವಿರ್ಗಳ್ಕಿಭಯುಮನುಗು[1]ಳ್[1] ೬

ಕಾಳೋರಗಮುಮನಾ
ಹಾಳಾಹಳಮುಮನಾ
ಕಾಲಾನಳನುಮನಾ ಗರಳದುರಿಯಂ
ಕಾಳರಕ್ಕಸಿಯನಾ
ಕಾಳಭೈರವನನುಱಿ
ದೇಳಿಪಾ:ತಿರ್ದನಾ ಪಾ[2]ಪಿ[2]ತತಿಗೆ ೭

ನೀಲಾಂಜನಾದ್ರಿಯೆಂ
ಬೋಲೊಗೆದ ತನುರೋಮ
ಜಾಲವಲ್ಲಿಯು ಬೇಗೆ ವುರಿತತಿಗಳಂ

---

1 ಳ್ಳ (ಕ) 2 ಪ (ಗ)

[1]ಪೊ[1]ೞಿಪಂತಿರ್ದುದೆನೆ
ಕಾಲಯಮನಿರವದಾ
ಲೋಲುಪರ್ಗರಿದು ನೋಡುವಡೆನಿಸಿದಂ ೮

ಮೀಱಿ ವದನದೊಳೊಗುವ
ಕೋಱದಾಡೆಗಳಲ್ಲಿ
ಊಱಿದಂತೆರಡಗ್ನಿಮಂಡಲಮವಂ
ಸಾಱುವಂತಿರ್ದ ಕಣ್
ಬೇಱಿರ್ದ ಕೈದುವಿಂ
ಮೂಱಾಱು ತೋ[2]ಱು[2] ಸುತ್ತಿಱಿಯಲಿರ್ದಂ ೯

ಕಡುರಕ್ತವಸ್ತ್ರವತಿ
ಕಡುರಕ್ತಚಂದನಂ
ಕಡುರಕ್ತ ಪೂಮಾಲೆ ಭಯಮನುಗುೞ
ಕುಡಿವಂತೆ ಸಾಗರವ
ನಿಡಿದು ಬೊಮ್ಮಾಂಡವಂ
ಪುಡಿಗುಟ್ಟಿ ಮುಕ್ಕುವಂತಿರಲಗುರ್ವಿಂ ೧೦

ಆ ರೂಪಿನಿಂ ಮೃತ್ಯು
ವಾ ರೂಪಿನಿಂ ಕಾಲ
ನಾ ರೂಪಿನಿಂ ಕೃತಾಂತಾಖ್ಯನಲ್ಲಿ
ಮಾರಿಯಲ್ಲತ್ಯುಗ್ರ
ಮಾರಿಯಂತಲ್ಲಿ ಮಾ
ಮಾರಿಯಾ ಚಿತ್ರಗುಪ್ತಾದಿಕರಣಂ ೧೧

ಉಗ್ರಕಂಟಕ ಮಹಾ
ನುಗ್ರ ಮಾಚಂಡನ
ತ್ಯುಗ್ರ ಸುರಕಂಟಕಂ ಕಾಳರಾತ್ರಿ
ಅಗ್ರದೊಳು ಕಂಡಂ ಸ
ಮಗ್ರರೋಲೈಸಿರ್ದ
ರಗ್ರಗಣ್ಯರು ಗಣಿಸಲರಿದೆನಿಪರು ೧೨

---

1 ಹೋ (ಖಗ) 2 ಳ (ಗ)

ರೂಪ್ರಗೊಂಡೋವೊ ಮಾ
ಪಾಪ ರೋಗಕ್ಕೆ ತಾಂ
ಭೂಪನೆನಿಸುವ ಕ್ಷಯವ್ಯಾಧಿಗೂಡಿ
ತಾಪನೆನಿಸುವುದು ಸಂ
ತಾಪವೆನಿಸುವುದುಗ್ರ
ತಾಪವೆನಿಸುವುದು ತಾಱಿಂಗಾವುಲಿ ೧೩
ಜ್ವರ ವಾತ ಪಿತ್ತ ಜಲ
ಗರ ಕುಷ್ಠ ಕ್ರಿಮಿ ಮಹೋ
ದರ ವಕ್ಷಗುಲ್ಮ ಸಂಗ್ರಹಣಿ ಗ್ರಹಣಿ
ಉರಿಯಪಸ್ಮಾರ ಕೇ
ಕರ ಪಾಂಡು ಶಿರ ಭಗಂ
ಧರ ಮೂತ್ರ ಮೂಲರೋಗಂಗಳಿನಿತುಂ ೧೪
ಪರಿವರಿಸಿ ಯಿಾತೆಱದ
ನೆರದೋಲಗದ ನಡುವೆ
ಉರಿದೆ[1]ಳ್ದು[1] ನೋಡಿ ಪಾಪರನಾ ಯಮಂ
ಪರಿಭವಿಸುತಿರೆ ಸಭ್ಯ
ವರನದಂ ನಿಲಿಸಿ ಶ್ರೀ
ಕರಣಾಧಿಪಂ ಚಿತ್ರಗುಪ್ತಾಂಕನು ೧೫
ನೀತಿಯುತ ಮಧ್ಯಸ್ಥ
ನಾತುರರನೀಕ್ಷಿಸಿಯೆ
ಭೂತ ಭವ್ಯಂ ವರ್ತಮಾನವಱಿವಂ
ಜಾತಕಜ್ಞಂ [2]ಶಾಸ್ತ್ರ
ಜಾತ[2]ವಂ ಬಲ್ಲವಂ
ಮಾತುಗಳನಾಕ್ಷೇಪವ್ಶೊರೆದು ಕೃಪೆಯಿಂ ೧೬
ಬಂದಿರೇಯಕಟಕಟ
ತಂದೆಗಳಿರಯ್ಯಯ್ಯೊ
ನೊಂದಿರೇ ಬೆಂದ ದಾರಿಯೊಳಿಲ್ಲರು
ಅಂದನ್ಯರರ್ಥವದ
ನೊಂದು ನೆವದಿಂ ಕೊಂಬ
ಚಂದದಾ ಬಲ್ಮೆಯುಂ ನೆನೆವುದಿಲ್ಲಿ ೧೭

---

[1] ದ್ದು (ಕ) [2] ಸಕಲಶಾಸ್ತ್ರ (ಕ)

ಕಳವಿಂದೆ ಬ[1]ಲ್ಪಿಂ[1]ದೆ
ದಳವುಳದಿನರ್ಥದಿಂ
ಚೆಲುವೆಂಬ ತೊವಲ ಮಱಿಗೆಱುವಿನಿಂದೆ
ಪಲತೆಱದಿನಕಟ ಪರ
ಲಲನೆಯರನೊಯ್ಯಲಾ
[2]ಪೊ[2]ಲೆಮನದೆ ಕೆಡಿಸುವುದನೀಕ್ಷಿಸುವುದು ೧೮

ಪರಗೃಹಕ್ಷೇತ್ರವಂ
ಪರರ ಪಶುವರ್ಗವಂ
ಪರರ ಧಾನ್ಯಾದಿ ವಸ್ತುಗಳನಂದು
ಪರರ ಫಲವ್ರಾತ[3]ವಂ[3]
ಹರಿದೇ[4]ಳ್ದು[4] ಕೊಳುವುದಂ
ಪರಿಕಿಸುವುದಿಸ್ನು ನಿರಯಾಗ್ನಿಮುಖದಿಂ ೧೯

ಸರಿಯಲ್ಲವೆಂಬುದಂ
ಶರಣರೊಡನಣಕಿಪುದ
ನುರುತ್ರಿಪುಂಡ್ರಾಂಕವುಳಿದಿಟ್ಟು ಮಣ್ಣಂ
ಅರವರಿಸದಕಟ ಕೇಳ್
ನರರ್ಗೆ ಮೈಯಿಕ್ಕಿ ಪರಿ
ವರಿಸಿ ಮಂಚದ ಕೆಳಗೆ ಕುಳ್ಳಿರ್ಪುದುಂ ೨೦

ಹರಿದು ಹಣವುಳ್ಳ ಹೊಲೆ
ಯರೊಳು ವೇದವನೋದಿ
ತರದಘಕ್ಕೊರೆದು ಪ್ರಾಯಶ್ಚಿತ್ತವಂ
ನೆರೆದು ಪರಧನವನಪ
ಹರಿಸಿ ಹೊಟ್ಟೆಯನಂತೆ
ಪರರನ್ನದಿಂ ಹೊರೆವುತಿಪ್ಪರವದಂ ೨೧

ಕೆಲವು ದಿನವಲ್ಪವಹ
ನೆಲನಾಳ್ದು ಧನಲೋಭ
ದಳಿಪಿನಿಂ ಪ್ರಜೆಯನನ್ಯಾಯದಿಂದೆ

---

[1] ಲುಹಿಂ (ಖಗ) [2] ಹೊ (ಕ) [3] ಮಂ (ಗ) [4] ಡ್ದು (ಕ)

ನೆಲೆಗೆಡಿಸಿ ಕವರ್ದು ನಿಜ
ತಳತಂತ್ರಕಿಕ್ಕಿ ಸಲೆ
ಯೆಲೆ ನರಕ ಸಮರಕೇಕಾಕಿಯಹರೆ ೨೨

ಮಂಡಲವದಿಲ್ಲವಾ
ಮಂಡಲೇಶ್ವರರಿಲ್ಲ
ದಂಡನಾಥರು [1]ಪೆಂ[1]ಡಿರೊ[2]ರ್ವ[2]ರಿಲ್ಲ
ಭಂಡಾರವಿಲ್ಲಕಟ
ತಂಡ ತಂಡದ ದಳಂ
ಕೊಂಡೆಯರುವಿಲ್ಲ ದಿಂಡೆಯರುವಿಲ್ಲ ೨೩

ಹರಪೂಜೆ ಗುರುಲಿಂಗ
ವರಮಂತ್ರಸ್ಮರಣೆಗಳ
ದುರುಳತನದಿಂದುಲಿದು ನಿಂದಿಸುತಲು
ಪರಮ ಶಿವಶಾಸ್ತ್ರವದ
ನೊರೆಯಬೇಡದ ಕೇಳ
ದಿರುಮೆಂದ ನಿರಯಫಲವೃಂಬುದಿಲ್ಲಿ ೨೪

ನರಕಿಗಳು ನೆರದಂದು
ಅರಸನಂ ಬೇಳ್ಮಾಡಿ
ಪರಿವರಿಸಲೆಂದು ಪ್ರಜೆಯುಂ ಪೀಡಿಪ
ಅರಮನೆ [3]ಪಸಾಯಿತ[3]ರ
ನರರೆ ನೋಡುವೆ ಬಳಿಕ
ವಿರದೆ [4][ಮಾ][4]ರಾಜ ಮಾಡಿತನುಣ್ಣರೆ ೨೫

ಹರಭಕ್ತಿ ಹಸರವಿಡಿ
ದಿರದೆ ಹರಿದಾಡಿ ಮೆ
ಲ್ಪೊರೆದ ನುಡಿವದಿರಿನಿಂ ಕೈಮುಗಿವ[5]ತಂ[5]
ಕರಗಿ ಕಾಸಿದ ತುಪ್ಪ
ದೊರೆವುಗ್ಗಡಂ ತೂಕ
ಸರಿಯೆಂದು ಹುಸಿವ ಪರಿಯುಂ ನೆನೆವು[6]ದು[6] ೨೬

---

1 ಹೆಂ (ಖಗ) 2 ಬ್ಬ (ಖಗ) 3 ಯ ಪಸಾಯ್ತ (ಗ) 4 ಮಹಾ (ಕಖಗ) 5 ತುಂ (ಕ) 6 ದುಂ (ಕ)

ನೆರದ ಸಿರಿಗರ್ವದಿಂ
ಪರಿಕಿಸದೆ ಕುಲಧರ್ಮ
ದಿರವನೀಕ್ಷಿಸದೆ ಪಾರ್ವರು ನೆಲದೊಳು
ಇರೆ ಮಂಚದೊಳು ನೀವು
ಹರುಷದಿಂದಿರಲವರ್
ನೆರದೋಲಗಿರ್ಪುದಂ ನೆನೆವುದಿಲ್ಲಿ ೨೭

ಶಿವನವರ್ಗೆ ಭಸಿತಕ್ಕೆ
ಶಿವಭಕ್ತಿ ಮಾರ್ಗಕ್ಕೆ
ಶಿವನ ಕ್ಷೇತ್ರಾದಿ ಸಂಪದಕೆ ದ್ರೋಹಂ
ಅವಿಚಾರಿತಂ ಮಾಡಿ
ತವಿಲಿಲಿಯ ನಿರಯವಂ
ನಿವನಿವಗೆ ಸವಿದು ಬಳಿಕಂ ನೆನೆಯಿರೆ ೨೮

ಇಂತಿಂತು [1]ಪ[1]ಲವನೇ
ಕಾಂತದೊಳು ಮಾಡಿ ನಿ
ಶ್ಚಿಂತವೆಂದಿರ್ದರಿಪ್ಪನ್ನವಕಟ
ಅಂತಕನವರ್ಗಳೞಿ
ದಿಂತು ತಂದರು ನಿಮ್ಮ
ನೆಂತೆಂತು ಮಾಳ್ಪುದಂ ನೋಡಿಯಿರದೆ ೨೯

ಸಲೆಯಿಂದುವನ್ಯರ್ಗೆ
ನೆಲದ್ರೋಹಗೆಯ್ದವಂ
ದೊಲಿದು ನಲಿದಾ ದ್ರೋಹವೀ ರೂಪನೆ
ತಳೆದು ನಿಮ್ಮಯ ಕೊಲೆಗೆ
ಫಲವಾದುದೆಂದಿರ್ಪು
ದೆಲೆ ದೂತರೆಂದು ಬೇಜಲ್ಪುವಜಾಯಿಂ ೩೦

ಎಂದ ಕರಣಾಧಿಪನ
ಚಂದದಾಕ್ಷೇಪದಿಂ
ದಂದು ನೆಗಳ್ದಾ ಪಾಪವೊಡನೆ ನೆರದು

---

1 ಹ (ಖಗ)

ಬಂದು ರೂಪಂ ತಳೆದು
ಮುಂದೆ ಶೋಕಿಪುದಜಂ
ನೊಂದು ತಲೆಗುತ್ತಿರ್ದ ಪಾಪಿಷ್ಠರಂ ೩೧

ನೋಡಿ ಯಮನೆಂದನೀ
ಗಾಡಿಗರನಿರಿಸಿ ಮಾ
ತಾಡಿಸದಿರೇಳಿ ಚಂಡಪ್ರಮುಖರು
ಬೇಡಿದ ಪರಿಯ ವ[1]ಧೆ[1]ಯ
[2]ಮಾ[2]ಡಿ ನರಕಾಗ್ನಿಯೊಳು
ಕೂಡಿ ಕಡಿದಡಸಿಯೆನೆ ಕೇಳಿಯುವರುಂ ೩೨

ನಿರಯವ್ಯೇಕೋಟಿಗಿರ
ದರಸೆನಿಪವ್ವೊಂದೊಂದು
ನಿರಯವ್ವೈದೈದು ಪ್ರಧಾನ ವರ್ಗಂ
ಉರುಪಿ ಕಾಲಾಗ್ನಿಗಳ
ನಿರದೆಡಕಿದಂತಮಮ
ನೆರೆದಿರ್ದವಿವೆಯಿಪ್ಪತ್ತೆಂಟುಕೋಟಿ ೩೩

ಅರಸಾವುದೆಂದೆನಲು
ಪರಿವಿಡಿಯೊಳೊರೆವೆನಿದೆ
ಪರಿಕಿಪುದು ಘೋರಾಖ್ಯವಿದೆ ಮೊದಲದು
ಉರು ಸುಘೋರಾಖ್ಯವಾ
ಪರಿಯಲತಿಘೋರಾಖ್ಯ
ವಿರೆ [3]ಮಹಾಘೋರಾಖ್ಯವೆಂ[3]ದು ನಾಲ್ಕುಂ ೩೪

ಘೋರ ರೂಪಂ ತರಳ
ತಾರಂ ಭಯಾನಕದ
ಸಾರಯದೆ ಕಾಳನಿಶಿಭಯವುತ್ಕಟಂ
ಈರೈದನೆಯ ಚಂಡ
ವಾರಯ್ಕೆ ಮಹಚಂಡ
ವೀರಾಱನೆಯ ಚಂಡಕೋಳಾಹಳಂ ೩೫

---

1 ಧ (ಗ) 2 ಜೋ (ಕಗ) 3 ಯಘೋರಾಖ್ಯವಿಂತೆಂ (ಖಗ)

ಅದು ಪ್ರಚಂಡಂ ಪದ್ಮ
ವದು ಮಹಾಪದ್ಮವಂ
ತದಭೀಮ ಭೀಮಭೀಷಣ ಕರಾಳಂ
ಅದದೆ ವಿಕರಾಳವೋ
ವದೆ ವಜ್ರವೆಂಬ ದಂ
ತದಿ ತ್ರಿಕೋಣಂ ಪಂಚಕೋಣವೆಂದುಂ ೩೬

ಉರುಸುದೀರ್ಘಾಂಕವದೆ
ಪರಿವರ್ತುಳಂ ನಾಡೆ
ಪರಿಕಿಪೊಡೆ ಸಪ್ತಭೌಮಾಷ್ಟಭೌಮಂ
[1]ಉರಿವ ದೀಪ್ತಾಖ್ಯವಂ
ತರರೆ ಮಾಯಾಖ್ಯ ನೋ
ಡಿರೆಯರಸು[1] ನರಕವಿಪ್ಪತ್ತೆಂಟಿವಂ ೩೭

ರೌರವಂ ಮೊದಲಾಗಿ
ಯಾರಯ್ವುದೈದ
ನೋರಂತೆ ನರಕಪ್ರಧಾನತತಿಯುಂ
ಬಾರಿಸುವೆ ತಮ ಮಹಾ
ರೌರವಂ ಶೀತೋಷ್ಣ
ದೋರನ್ನದೈದು ಸಚಿವರು ಘೋರದ ೩೮

ಇದು ಸುದಮನಾಖ್ಯವಿಂ
ತಿದು ಸುತೀಕ್ಷ್ಣಂ ನೋಡ
ಯಿದು ಪದ್ಮಸಂಜೀವನಾಂಕ ನಿರಯಂ
ಇದು ಶತಾಖ್ಯಂ ಬೆಂದ
ಡಿದು ಮಹಾನಾಶಾಖ್ಯ
ವದು ಸುಘೋರಾಖ್ಯಕ್ಕಮಾತ್ಮವರ್ಗಂ ೩೯

ಇದೆ ವಿಲೋಮಂ ಬೆಂದ
ದಿದೆ ಸುಭೀಮಂ ಬೆಂದ
ದಿದೆ ಕಟಂ ಕಟ ಮಹಾತೀವ್ರವೇಗಂ
ಇದೆ ಕರಾಳಂ ಬೆಂದು
ದಿದೆಗೂಡಿ ಪಂಚಕಂ
ಪದೆದುವತಿಘೋರಕ್ಕಮಾತ್ಮವರ್ಗಂ ೪೦

---

1 ನೆರಡು ಕಿಡಿಕಿಡಿಯೊಗೋಗುತುರಿವರಿವೃತಿವೆ ನೋಡಿರರಸನಿಜ (ಕ)

ನೋಡ ವಿಕರಾಳಮಂ
ನೋಡ ಪ್ರಕಂಪವಂ
ನೋಡ ಮಾಪದ್ಮಂ ಸುವಕ್ತ್ರಂಗಳಂ
ನೋಡ ಕಾಲಾಖ್ಯವೊಡ
ಗೂಡಿದೈದುಗಳಿವಂ
ನೋಡ ಮಾಘೋರಕ್ಕಮಾತ್ಯವರ್ಗಂ ೪೧

ಆಹ ಪ್ರಮರ್ದನವಿ
ದಾಹ ಸೂಚೀಮುಖವಿ
ದಾಹಾ ಸುನೇಮಿಬಾಧಕವೆಂಬಿವು
ಆಹ ಸಂಪೀಡನಮಿ
ದಾಹವೈದುಗಳುಮಾ
ವಾಹಿನೀಶಘೋರ್ರರರೂಪಾಖ್ಯದ ೪೨

ಬೆಂದ ಕುಂಭೀಪಾಕ
ಬೆಂದೀ ಸುಪಾಕಮಿವು
ಬೆಂದ ಪ್ರಮುಖಾಖ್ಯ ಬೆಂದೀ ದಾರುಣಂ
ಬೆಂದ ಅಂಗಾರಕವಿ
ದೊಂದಿದಯ್ದುಂ ಸಚಿವ
ರೆಂದಱಿಯ ತರಳತಾರಾನಿರಯಕೆ ೪೩

ನರಕವಿದು ದಹನಾಖ್ಯ
ವಿರದಸೃಜ್ಮಡುವಿದೆ ದ
ಲರರೆ ತೀಕ್ಷ್ಣಾಯಸಸ್ತುಂಡಶಕುನಿ
ನರಕವಿದು ಘಾಯಹ್ರದ
ವೆರು ಮಹಾಸಂವರ್ತ
ದೊರೆವೆತ್ತಮಾತ್ಯರ್ ಭಯಾನಕ್ಕೆ ೪೪

ನಿರಯವಿದು ಕ್ರತುವೆಸರ
ನಿರಯ ಘಾತಿಮಾಂಸ
ನಿರಯಂ ಸತಪ್ತ ಜತುಲೇಪವೆಸರ
ನಿರಯ ದ್ರವದ್ರಪುವಿ
ದಿರದೆ ಉಚ್ಛ್ವಾಸವಿದು
ನಿರಯ ಸಚಿವರು ಕಾಳರಾತ್ರಿಗೈದುಂ ೪೫

ಓಹೋ ನಿರುಚ್ಛ್ವಾಸ
ವೋಹೋ ಸುದೀರ್ಘವಿದೆ
ವೋಹೋಹೊ ಕೂಟಶಾಲ್ಮಲಿಯರಿಷ್ಟಂ
ಓಹೊ ಸುಮನಾಹಾಖ್ಯ
ವೋಹೊವ್ಯೆದುಂ ನರಕ
ವಾಹಿನೀಶರ್ಭಯೋತ್ಕಟ ನೃಪತಿಗೆ ೪೬

ಅಯ್ಯವಿದೆ ನಾದಾಖ್ಯ
ವಯ್ಯೊ ಪ್ರದಾಹವಿದೆ
ಯಯ್ಯೊ ರುಕ್ಷಂ ಸುಪ್ರದಾಹವೆಂದುಂ
ಅಯ್ಯೊ ಮೇಷಾಖ್ಯವಿದೆ
ಯಯ್ಯಲಯ್ಯುದ್ದಂ ನಿರಯ
ವಯ್ಯ ಚಂಡಾಖ್ಯಕ್ಕಮಾತ್ಯವರ್ಗಂ ೪೭

ಎಲೆಲೆ ಸಲಗಂ ನೋಡಿ
ದೆಲಲೆ ಶಲ್ಯಾಂಕವಿದೆ
ಯೆಲಲೆ ಸಿಂಹಾಖ್ಯಂ ಗಜಾನನಾಖ್ಯಂ
ಎಲಲೆ ವ್ಯಾಘ್ರಾಂಕವಿಂ
ತೆಲೆ ಮಹಾಚಂಡಂಗೆ
ಕೊಲೆಗೆಡಿಗ ಸಲುವ ಸಪ್ರಧಾನನರಕಂ ೪೮

ಶುನಕನಿದೆಯುಮ್ಮಮ್ಮ
ಕನಿಗಸೂಕರನೋವೊ
ತನುಗೊಬ್ಬಿನಜಮಹಿಷಿವೆಸರವಕಟ
ತೊನೆವುದಿದೆಯಾವಿಕಂ
ವಿನುತ ಪ್ರಧಾನರಜಿಃ
ಘನಕೋಪ ಚಂಡಕೋಳಾಹಳಕ್ಕೆ ೪೯

ನೆರದ ಉಗ್ರಾಖ್ಯವಿದೆ
ನೆರದೀ ವೃಕಾನನಮು
ಮಿರದೆಯಿಪೆ ಗ್ರಾಹಕುಂಭೀರಂಗಳುಂ

ನೆರೆದ ನಕ್ರಾಖ್ಯಮಿವು
ನರಕಪ್ರಧಾನವರ
ರಿರವೆ ಪ್ರಚಂಡಭೂಪಂಗಿವೈದುಂ ೫೦

ಸಲೆ ಸರ್ಪನೆಂಬುದಿದೆ
ಸಲೆ ಕೂರ್ಮನೆಂಬುದಿದೆ
ಸಲೆ ವಾಯಸಂ ಗೃಧ್ರವೆಂಬವೆರಡುಂ
ಸಲೆ ಉಲೂಕಾಖ್ಯಮಿವು
ಸಲುವ ಪ್ರಧಾನರಱಿ
ಕೊಲೆಗಡಿಗ ಪದ್ಮಾಖ್ಯನೃಪವರಂಗೆ ೫೧

ಎಲೆ ಜಲೂಕಾಖ್ಯವಿದೆ
ಎಲೆ ಮಹಾವ್ಯಾಘ್ರವಿದೆ
ಯೆಲೆ ಮರ್ಕಟಂ ಕರ್ಕಟಂಗಳೆರಡುಂ
ಎಲೆ ಗಂಡಕಂಗೂಡಿ
ಸಲುವ ಪ್ರಧಾನರಱಿಂ
ಸಲೆ ಪಂಚದಶದ ಪದ್ಮಾವತಿಗೆಲೆ ೫೨

ಒಂದು ಪೂತೀವಕ್ತ್ರ
ವೊಂದು ರಕ್ತಾಖ್ಯವಂ
ತೊಂದು ಪೂತೀಮೃತ್ತಿಕಾಖ್ಯವೊಂದು
ಒಂದು ಕಣ ಧೂಮವೆಸ
ರೊಂದಿದ್ದೈದುಂ ಸಚಿವ
ರಂದವಡೆದಾ ಭೀಮ ನೃಪವರಂಗೆ ೫೩

ಒಂದುಂ ತುಷಾಗ್ನಿ ಮ
ತ್ತೊಂದು ಚಿಃ ಕ್ರಿಮಿಪುಂಜ
ವೊಂದಮೇದಾಖ್ಯವೊಂದ ಪ್ರತಿಷ್ಠೆ
ಒಂದು ಮೂತ್ರಾಂಬುಗಳ
ನೊಂದೆ ಭೋಜನವೆಸರು
ಸಂದ ಸಚಿವರು ಭೀಮ ಭೀಷಣಕ್ಕೆ ೫೪

ಇದಿದೆ ಮಲಭಕ್ಷಣಮು
ಮಿದೆಯಾತ್ಮಭಕ್ಷಣಮು
ಮಿದಿದೆ ರುಧಿರಾಂಭಃ ಪ್ರಭೋಜನಾಖ್ಯಂ

ಇದೆ ಸರ್ವಭಕ್ಷಣಮು
ಮಿದೆ ಸುದಾರುಣವೊಂದೆ
ಹದಿನೆಂಟನೆಯ ಕರಾಳದ ಸಚಿವರು ೫೫

ಇದಿದೆ ಸಂಕಟವಿಕಟ
ಯಿದಿದೆ ಸುವಿಶಾಲವಿಂ
ತಿದಿದೆ ವಿಕಟಂಕಟಾಖ್ಯಾಂಕನರಕಂ
ಇದಿದೆ ಪೂತನವೆಸರ
ದಿದುಗೂಡಿದೈದುಗಳು
ಪುದಿದು ವಿಕರಾಳಕ್ಕಮಾತ್ಯವರ್ಗಂ ೫೬

ಅಕಟಾಂಬರೀಷಾಂಕ
ವಕಟಾಕಟಾಹಾಖ್ಯ
ವಕಟ ಕಷ್ಟಂ ತಪ್ತಲೋಹಶಯನಂ
ಅಕಟ ವೈತರಣಿನದಿ
ಪ್ರಕಟದಿಂ ವಜ್ರಂಗೆ
ಸಕಲನರಕಪ್ರಧಾನಿಗಳಜೀವ್ರುದು ೫೭

ಅಕಟಾಸಿತಾಳವನ
ವಕಟಾತಸೀಯಂತ್ರ
ವಕಟಾಸ್ಥಿಭಂಗ ಪ್ರಪೀಡನಾಖ್ಯಂ
ಅಕಟಕಟ ತಿಲಯಂತ್ರ
ವಕಟಕಟಿಕ್ಷುಯಂತ್ರ
ವಕಟಕಟ ತ್ರಿಕೋಣಕ್ಕಮಾತ್ಯವರ್ಗಂ ೫೮

ಇದು ಮಹಾಚೂರ್ಣ ನೋ
ಡಿದು ದಲಾ ಸಂಚೂರ್ಣ
ವಿದು ಕೂಟವೇಷ ಪ್ರಮರ್ದನಾಖ್ಯಂ
ಇದು ತಪ್ತಲೋಹಮಯ
ಮಿದು ತಪ್ತಶೈಲಮಯ
ವೊದವಿ ಭೂ ಪಂಚಕೋಣದ ಸಚಿವರು ೫೯

ಪರ್ವತಂ ಕ್ಷುರಧಾರೆ
ಪರ್ವತಾಂಕಂ ಯಮಳ
ಪರ್ವತಂ ಮೂತ್ರಕೂಪಾಖ್ಯ ನರಕಂ

ಪರ್ವಿವಿಷ್ಟಾ ಕೂಪ
ದೊರ್ವ್ರಳಿಯುಮಾತ್ಯರತಿ
ಗರ್ವಿತರು ನೆರದಾ ಸುದೀರ್ಘವೈದುಂ ೬೦

ಅಮಮ ಕ್ಷಾರದ ಕೂಪ
ವಮಮಾಂಧಕೂಪವಂ
ಶಮಮ ಶಾಂತನ ಮುಸಲುಲೂಖಯಂತ್ರಂ
ಅಮಮಾ ಶಿಲಾಶಕಟ
ವಮಮ ಪ್ರಧಾನಿಗಳು
ವಮರ್ದರಾ ನರಕಪತಿ ವರ್ತುಳಕ್ಕೆ ೬೧

ಇದು ಲಾಂಗುಲಂ ನಿರಯ
ವಿದು ತಾಳಪತ್ರಾಖ್ಯ
ವಿದದಲಸಿ ಗಹನ ಮಶಕದ ಮಂಟಪಂ
ಇದು ಮೋಹನಂಗೂಡಿ
ಪದದಿಪ್ಪತ್ತೈದನೆಯು
ಪದದಮಾತ್ಯರು ಸಪ್ತಭೌಮಾಖ್ಯದ ೬೨

ಇದು ವಸ್ತಿಭಂಗ ನೋ
ಡಿದು ತಪ್ತಶೂಲಮಯ
ವಿದು ತಪ್ತಗುಡನರಕ ಬಹುದುಃಖಜಂ
ಇದು ಮಹಾದುಃಖಾಖ್ಯ
ವೊದವಿದ್ದೈದುಂ ನರಕ
ವದೆಯಷ್ಟಭೌಮಕ್ಕಮಾತ್ಯವರ್ಗಂ ೬೩

ಅರರೆ ಶಾಲ್ಮಲ ನರಕ
ವರರೆ ಸಕಲಂ ಮಲಮು
ಮರರೆ ಹಾಳಾಹಳವಿರೂಪವೆರಡುಂ
ಅರರೆ ಸಾರೂಪಾಂಕ
ವೊರೆದೀ ಪ್ರಧಾನರಾ
ನರಪ ದೀಪ್ತಾಖ್ಯಕೆಂದಜಃವುದ್ದೈದುಂ ೬೪

ಅಕಟೀಯುಮಾನುಗಮು
ಮಕಟೇಕಪಾದ ನೋ
ಡಕಟಾ ವಿಪಾದ ತೀವ್ರಾಂಕವೆಂದುಂ

ಅಕಟಾ ಚಿರಂತವಿಂ
ಶಕಟವೈದುಂ ನರಕ
ವಕಟ ಮಾಯಾಖ್ಯಕ್ಕಮಾತ್ಮವರ್ಗಂ ೬೫

ವರಕವಿಪ್ಪತ್ತೆಂಟು
ವರಸುಗಳು ಸಾವಂತ
ನಿರಯಶತ ಚತ್ವಾರಿಗಣನೆಯಿನ್ನು
ನಿರಯವಿಪ್ಪತ್ತೆಂಟು
ವರ ನಾಯಕಕೋಟಿ
ಪರಿವಾರ ಭೇದವರಿದೆಣಿಸಲೆಂದುಂ ೬೬

ಇಂತು ಪೇಳುತೆ ಪಾಪ
ಸಂತತಿಗೆ ತೋಱಿ ಭಯ
ದಂತವೆಯ್ದಿಪ ದೂತ ದುಶ್ಚೇಷ್ಟೆಯಂ
ಕಂತುಜಿತಗಣವಱಿಯ
ನಂತಕಾಂತಕನವಂ
ಮಂತಣದೊಳಮರ್ದೊಪ್ಪಿ ಕೇಳುತಿರ್ದಂ ೬೭

ಇದು ನಂದಿನಾಥೇಶ
ಗದಿತವಾನಂದೈಕ
ದುದಧಿ ಸಾನಂದಾಖ್ಯ ಚರಿತೆಯೊಳಗೆ
ಮುದದಿಂದೆ ಶರಣಕವಿ
ವಿದಿತಮಾಗಲು ಪೇಳ್ದ
ಪುದಿದ ನರಕಾಖ್ಯಾನ ಸಂಧಿ ತಾನೆ ೬೮

ಆರನೆಯ ಸಂಧಿ

ನರಕಯಾತನೆಯ ರಗಳೆ—

ಕಂದ॥ ಪರಮಗುರುರೂಪ ವಿಶ್ವೇ
ಶ್ವರನಾಜ್ಞೆಯಸಾಂತು ಸೂರ್ಯನಂದನನತ್ಯಾ
ತುರದಿಂ ಪಾಪಿಷ್ಠರನಾ
ನಿರಯದೊಳನವರತ ದಂಡಿಸುವನೆನಲೆಂತೆನೆ ೧

ಉತ್ಸಾಹರಗಳೆ :

ರೌದ್ರಕಾಯರುನ್ನತಾಂಗರುಗ್ರರುದ್ಧತ[1][ರುಂ][1] ಸದಾ
ಕ್ರುದ್ಧರೇಳ್ದರಾಜ್ಞೆಯಿಂದನಂತ ದೂತತತೀ ತದಾ
ಕ್ಷುದ್ರಮೃಗವನೆಯ್ದೆ ಸಿಂಹವಿಕ್ರಮಂತೆ ಪಾಪತತಿಯ
ಮುತ್ತಿ ಮುಸುರ್ವರೊರ್ವರೊರ್ವರೊತ್ತಿಪಿಡಿದು ಜೀವತತಿಯ
ನಾಗಸವನಡರ್ದು ನೋಳ್ಪ ಮರನ ಕೊಂಬಿನಲ್ಲಿ ಕೊಯ್ದು
ತೊಡರ್ದ ಸಂಕಲೆಯುಲಿ ಕಯ್ಯ ನೇಱಗಟ್ಟಿ ಕಾಲೊಳೆಯ್ದೆ
ನೂಱು ನೂಱು ಲೋಹ ಭಾರವಂತೆ ಸೂಳು ಸೂಳಿಗೊಮ್ಮೆ
ನಡುವನಱೆಯೆ ನೂಱುಯೋಜನಾಂತವಾಡೆ ತೂಗಿ ತಮ್ಮ
ನೆಯ್ದೆ ಬಯ್ದು ನೊಂದು ನೋಡಿ ಗೆಯ್ದ ಪಾಪದಂದವೆಂದು
ಸುಮ್ಮನಳುತವಿರಲು ಕಾಯ್ದ ಮೊಳೆಯ ಚಮ್ಮಟಿಗೆಗಳಿಂದೆ

ಅಡಸಿ ಹೊಯ್ಯೆ ಜರ್ಝರೀಕೃತಾಂಗರಾಗಿ ಬಿಡದೆ ಮತ್ತೆ
ಏಱ ಬಾಯೊಳಗ್ನಿಯಂತೆ ಉರಿವ ಕ್ಷಾರವೆಱೆದು ಮತ್ತೆ
ಕರಗಿ ಕೆಸಱಿಸಂತಿರಿರ್ದ ತಾಮ್ರಲೇಪನಂಗಳಕಟ
ತೊಪಲನೆತ್ತಿ ನೆತ್ತಿಪರಲು ಕತ್ತಿಯಿಂದೆ ಕೀಸಿಯಕಟ
ಎಣ್ಣೆ ತೀವಿ ಕಾಯ್ದ ಕೊಪ್ಪರಿಗೆಯೊಳದ್ದಿ ತೆಗೆವರಯ್ಯ
ಬಳಸಿ ಹುಳುಗಳಡರ್ವ ಶುದ್ಧಕೂಪನಿಚಯದೊಳಗೆಯುಯ್ಯ

---

[1] ರು (ಕಖಗ)

ಒಂದಿ ರಕ್ತಶ್ಲೇಷ್ಮ ಸಿಂಬುಳಿಂದೆಯಾದ ಕೂಪದಲ್ಲಿ
ಎಲುಗಳುಳಿಯೆ ಕ್ರಿಮಿಗಳು[1]ೞಿ[1]ಯೆ [2]ಹೊಗಿಸಿ ಸುತ್ತ[2] ಬರಿಸಿಯಲ್ಲಿ
ಅಯ್ಯ ಉಕ್ಕಿನಿಂದೆ ಸವೆದ ಕೊಕ್ಕನುಳ್ಳ
ಯೆಯ್ದೆ ತನುವನಿಱಿದು ತೂಂತುಗೊಱೆದು ಖಂಡದಿಂಡೆಯಾಡಿ

ಕಚ್ಚಿ ನೆಳಲ್ವ ನಾಯ್ಗಳಲ್ಲಿ ಕರುಳನುಗಿವ ನರಿಗಳಲ್ಲಿ
ಜಕ್ಕುಲಿಪ್ಪ ಕರಡಿಯಲ್ಲಿ ಪೊತ್ತಿಮುಱಿವ ಹುಲಿಗಳಲ್ಲಿ
ತೆಗದು ಬಗಿದು ಪುಗಿಸಿ ಹುಗ್ಗಿ ರಾಶಿಯಾದ ಕೆಂಡದೊಳಗೆ
ತರದಿ ಪಿಡಿದು ತೊಡಸಿ ಕೂರ್ಪುವೆತ್ತು ಬಸಿದ ಶೂಲದೊಳಗೆ
ತಱಿದುಯೆಳ್ಳಿನಂತಿರಾಗ್ನಿ ಚಕ್ರವೆಂಬ ನಿರಯದೊಳಗೆ
ಚುಚ್ಚಿ ಮುಚ್ಚಿ ಕಿಚ್ಚನೊಟ್ಟಿಯಿಕ್ಕಿ ಲೋಹಭಾಂಡದೊಳಗೆ
ಮತ್ತೆ ಎಣ್ಣೆ ತೀವಿ ತರದೊಳಿಟ್ಟು ಕೊಪ್ಪರಿಗೆಯೊಳೆಯ್ದೆ
ಮಾಯ ಜೀವತತಿಯ ನಡುವರೊಯ್ದು ಬಯ್ದು ಪೊಯ್ದು ಕೊಯ್ದು
ಶರಣರೊಡನಸತ್ಯವಪ್ರಿಯಂಗಳುಸುರ್ದ ನಾಲಗೆಗಳ
ನೊಱಲಲೊಱಲನಂತಬಾರಿ ಕಿತ್ತುಪೊಟ್ಟಿ ನಾಲಗೆಗಳ

ನುದಿರ್ಚಿ ಹುರಿದು [3]ಪ[3]ಲ್ಲನುರದೊಳಿಕ್ಕಿ ಕಾಲೊಳೊರಸಿ ಮತ್ತೆ
ಮೂಗನರಿದು ಕೆತ್ತಿ ಕೀಸಿಯುರದೊಳುದ್ದುತಿರ್ಪರೊತ್ತಿ
ಕಿಱಿಯ ಬಱಿಯ ದೈವತತಿಗೆ ಆಗಮಂಗಳೊರೆದ ನರರ
ರಸನೆಗಳೆವ ಕೂರ್ಪುವೆತ್ತ ನೇಗಿಲಲ್ಲಿಯುಳುವರರರೆ
ತಂದೆ ತಾಯ್ಗೆ ಗುರುಗೆ ಉತ್ತರಂಗಳಿತ್ತ ಮುಖದೊಳೆಯ್ದೆ
ವಜ್ರಲೇಪವೆನಿಪ ಜಿಗುಳೆಗಳುಮನೊಯ್ದು ಬಿಡುವರೆಯ್ದೆ
ಬಾಯ್ಗಳೇಱಿನಲ್ಲಿ ತುಂಬಿ ಕ್ಷಾರರಸವನೆಱೆದು ಮತ್ತೆ
ಕಾಯ್ದ ತಾಮ್ರ ರಸವನುಕ್ಕುವೆಣ್ಣೆಯೆಱೆದುಯೆಱೆದು ಮತ್ತೆ
ಬಿಡದೆ ಹುಳಿತ ಶುದ್ಧ ವೆಱದು ತೀವಿ ತೀವಿ ಚಿಃ ಸುಡಕಟ
ಅರ್ಚಿಸುವರು ಮುಳ್ಳುವೊರೆದ ಲೋಹದೆಲವ ಮರದೊಳಕಟ

ಲೋಹ ವಲಿಕೆಗಳೊಳು ಬೆನ್ನನೊತ್ತಿ ಸೀಳಿ ತೆಗೆವರಣ್ಣ
ದೇಹಜಂಗಳೆನಿಪ ಕರ್ಮಿ ಶಿರವನಿರದೆ ಕೀಳ್ವರಣ್ಣ
ಅನ್ನದಾನ ವಿರಹಿಗಿಕ್ಕುತಿರ್ಪರರಿದು ತಮಗೆ ತಮ್ಮ

[1] ಳಿ (ಖ) [2] ಹೋಗಿ ಸುತ್ತಿ (ಖ) [3] ಹ (ಗ)

ನುದಕವೀಯದವರ್ಗೆಯಂತೆ ರಕ್ತವೆಱೆವರಱೆದು ತಮ್ಮ
ನಾಲೆಯಾಡುತ್ತಿರ್ಪರರೆಗು ಕಬ್ಬಿನಂತೆ ಗಾಣದೊಳಗೆ
ಅಂಗವರಿದು ಬೀಳೆ ಹರಿಸಿ ಖಡ್ಗ ತಾಳ ವಿಟಪಿಯೊಳಗೆ
ಪಾಪ ರಂಗದೊಳಗೆ ಸೂಚಿಗಳುಮನಿಡಿದು ಪೊಡೆದು ತೀವಿ
ಮಸೆದು ಕೂರಿತೆನಿಸಿ ಕಾಯ್ದ ಶೂಲತತಿಯೊಳಿಡುವರೋವಿ
ಇನಿತವಷ್ಟೆ ನಿರಯ ಯಾತನೆಗಳನುಣುತೆ ನೊಂದು ಬೆಂದ
ರೊಮ್ಮೆಗೊಮ್ಮೆ ನೋಡಿ ತಮ್ಮನಿಂತು ಬಯ್ದು ಸುಯ್ದುವೆಂದ

ಇಂತು ಕೊಯ್ದು ಕೊಱೆದು ಕುಸುರಿದಱಿಯೆ ಸಾವು ಬಾರದಿಹವೆ
ಇಂತು ಸೀಳಿ ಹೋಳಿ ಜಾಳಿಸಲ್ಕೆ ಹರಣವಳಿಯದಿಹವೆ
ಅಡಲು ಜೀವವಳಿಯವೋವೊ ಸುಡಲು ಜೀವವಳಿಯವೋವೊ
ಪಿಡಿದು ಖಂಡವರಿಯಲಯ್ಯೊ ಕೊಡಲಿಗಡಿಯಲಳಿಯವಯ್ಯೊ
ಶೂಲವೆಂದಡಳಿಯದಿಹವೆ ಸೂನವೆಂದಡಳಿಯದಿಹವೆ
ಎಳೆವ ಹೂಟೆಯೆಂದಡಕಟ ಕಳಹಲಂಗಳೆಂದಡಕಟ
ಬೈದೊಡಂತೆ ಬಡಿದೊಡಂತೆ ಹೊಯ್ದಡಂತೆ ಕೊಯ್ದಡಂತೆ
ಕೊಱೆದೊಡಂತೆ ಮುಱಿದೊಡಂತೆ ಹಱಿದೊಡಂತೆ ಇಱಿದೊಡಂತೆ
ಅರೆದೊಳುದ್ದೆ ಮರಳಿ ಬಹವು ಕರುಳನುಚ್ಚೆ ಮರಳಿ ಬಹವು
ಹುರಿವಡಯ್ಯೊ ಮರಳಿ ಬಹವೆ ಕರಿದಡಯ್ಯೊ ಮರಳಿ ಬಹವೆ

ಕುರುಳ್ಚೆಯುರಳ್ಚೆ ತೆರಳ್ಚೆ ಮರಳ್ಚೆ ಹೊರಳ್ಚೆಯಕಟ ನಿಜವು ಜೀವ
ಹತ್ತು ತೆಱನೆ ಪ್ರಾಣವೆಂಬರಲ್ಲ ಹುಸಿಯನಂತ ಜೀವ
ವೆನಿತು ಖಂಡವಾದೊಡನಿತಱಲ್ಲಿ ಬೇಱೆ ಬೇಱೆ ಜೀವ
ವೆನಿತು ಚೂರ್ಣವನಿತಱಲ್ಲಿ ತೀವಿ ತೀವಿ ಬೆಂದ ಜೀವ
ಎಲೆಲೆ ತಲೆಯನರಿದೊಡರಿಯಲೆಂದು ಕೆಲವ ಕಾಲವೊಳವೆ
ಕೊಲಲು ಕೊಲಲು ಮಲೆತು ನಿಲುತ ಕುಲಲುವೆಂಬ ಕಾಲವೊಳವೆ
ಕಾಯವುರಿಯದೊಡುರಿಯಲೆಂದು ಜೀವವಿರ್ದ ಮಾರಿಯುಂಟೆ
ದೇಹವಳಿದಡಳಿಯಲೆಂದು ಜೀವವಿರ್ದ ಮಾರಿಯುಂಟೆ
ಬೆಂದ ಜೀವವಳಿದೊಡುಳಿವೆವೆನಿತು ದುಃಖವೊಂದದೋವೊ
ಬಂದು ಬಂದು ಜೀವವೆಮ್ಮ ಕೊಂದು ಕೂಗುತಿರ್ದುದೋವೊ

ಎಂದು ಪಲವು ಪರಿಯಲಾಗಳಾಗಲಳುತೆ ಶೋಕಿಸುವರು
ಅಲ್ಲಿಯಱಿದು ಬಂದ ದೂತರೊಚ್ಚೆ ಕರುಣವಿಲ್ಲದವರು

ಉಳ್ಳಮಾಂಸವನಿತನುಗಿದುವಸ್ಥಿಗಳುಮನಿಡಿವರಂತು
ಅಕಟ ಪಾಪದೃಷ್ಟಿಗಳುಮನೆಯ್ದೆ ಮೀಂಟಿ ನಿಲ್ಲರಂತು
ನಿರುಚ್ಛ್ವಾಸವೆಂಬ ನರಕದಲ್ಲಿ ಮೂಗು ಬಾಯನಯ್ಯೊ
ಉಸುರು ಮಸುಳದಂತಿರಿಡಿದು ಕಟ್ಟಿ ಮೆಟ್ಟಿ ಕೊಲುವರಯ್ಯೊ
ಉಸುರಸಂಕೆ ಪುಗಲಿಕೀಯರುರುಚ್ಛ್ವಾಸ ನಿರಯದೊಳಗೆ
ಪುಗಿಸಿ ಸಣ್ಣಮಣಲನಿಡಿದು ಪೊಯ್ವರಲ್ಲಿಯಕಟ ಮುಳುಗೆ
ವಿವಿಧವಧೆಗಳಿಂದೆ ಅಳಿಸುತಿರ್ಪ ರೌರವದೊಳು ಮತ್ತೆ
ಮಹಾಪಿರಿಯರೆಂಬರಳುವ ಮಹಾ ರೌರವದೊಳು ಮತ್ತೆ

ಓವ್ವೊವಕ್ಷಿ ವದನ ಚರಣ ಹಸ್ತ ವಕ್ಷ ಶಿರದೊಳೆಯ್ದೆ
ಗುಹ್ಯದಲ್ಲಿ ಮಸೆದು ಕಾಯ್ದ ಬಿಸಿಯನಿಡಿದು ನಡುವರೊಯ್ದು
ಕೆಂಡದಂತಿರುರಿವ ಮಳಲನಿಡಿವರವಯವದೊಳಗಕಟ
ಅಱಚಲಱಚಲೊಯ್ದು ಕರಗಿದರಗುಗೆಸಱೊಳಿ ಎವರಕಟ
ಅವನವಳ್ಗೆಯವಳ್ಗದಾವನು ಕೆಯುಕ್ಕಿನಿಂದೆ ಸಮೆದು
ಪಿಂದಣಾಕೃತಿಗಳ ಪಾಣ್ಬ ಪುತ್ಥಳಿಗಳನೆಯ್ದೆ ತಂದು
ಕಾಸಿಯಪ್ಪಿಸುವರು ತಂದು ಕೂರ್ತುವಪ್ಪುವಂತಿರೆಂದು
ಗಂಡರೇವರೆಂದು ಹರಿದು ಕರೆದು ನೆರೆವ ಪರಿಯಲೆಂದು
ನೆರೆವುದೆಂದು ತೀರದುಗ್ರಯಾತನೆಗಳನುಣಿಪರಲ್ಲಿ
ಬೆಂದ ಲೋಹ ಮೂಸೆಗಳೊಳು ಪೊಗಿಸಿಯುಂದ್ರಿಸಿರಸಿಮೆಲ್ಲ

ಮೆಲ್ಲನೂಡಿ ಪಾಪರೆಯ್ದೆ ಕರಗುವಂತಿರುರುಪಿರಯ್ಯೊ
ಕಲ್ಲಿನೊರಳೊಳಿಕ್ಕಿಯಿಕ್ಕಿ ವೊನಕೆವಿಡಿದು ಯಿಡಿವರಯ್ಯೊ
ಪುಗಿಸಿ ಹಾಳುಬಾವಿಗಳೊಳು ತುಂಬಿವಿಂಡನೆಬ್ಬಿ ಬಿಡದೆ
ಜರ್ಝರಾಂಗರಾಗಿ ಕ್ಷಾರ ಕೂಪದೊಳಗೆ ಮೆಟ್ಟಿ ಬಿಡದೆ
ಮಹಾಜ್ವಾಲೆಯೆಂಬ ನರಕಕಿಕ್ಕಿಯಱಚಿ ಅಱಚಿ ಮತ್ತೆ
ಕಯ್ಯನಿಱಿದು ಕಟ್ಟಿ ಪಿಂದೆ ಕಾಲ್ಗಳೆರಡನಂತೆಯೊತ್ತಿ
ಎರಡುಕಂಬದಲ್ಲಿ ಬಿಗಿದು ಚಕ್ರದಾಕೃತಿಗಳೊಳಿರಿಸಿ
ದುಟ್ಟ ಕಡಂದುಱುಗಳಿಂದೆ ತನುವನೆಯ್ದೆ ತೂತುಗೊಱೆದು
ಒಡಲನೆಯ್ದೆ ತೀವುವಂತೆ ಕ್ಷಾರರಸವನೆಱೆದುವೆಱೆದು
ಕೂರಿತಪ್ಪ ಶಾಣಕಲ್ಲೊಳಿಕ್ಕಿ ತೇಪರೊತ್ತಿ ಪಿಡಿದು

ಒಡಲೊಳುಳ್ಳ ಮಾಂಸವಳಿದು ಹುಳಿವ ತೆಱದಿ ಕ್ರಿಮಿಯನೊಯ್ದು
ದ್ವಾರದೊಂಬತ್ತಱೊಳು ಪುಗಿಸಿ ಹೇಸದಲ್ಲಿ ದೂತರೆಯ್ದೆ

ಉರಿವ ಕಿಚ್ಚಿನೊಳಗೆ ತಲೆಕೆಳಕನೆ ಪಿಡಿದು ಸೀವುತಿಪ್ಪ
ಕುದಿವ ಕಿಟ್ಟ ಗುಳವನೆಱೆದು ಕುಡಿಯಿಮೆಂದು ಬ[illegible]ಪರಪ್ಪ
ಶಿವನನಿಳಯ ಶಿವನ ಕೂಪವಾಪಿನಂದನಾಳಿಯಲ್ಲಿ
ಶಿವನ ಮಠಕೆ ಮಂಟಪದೊಳು ಬಿಟ್ಟ ಭೂಪರಳುಕದಲ್ಲಿ
ಮೂತ್ರಮಲವಿಸರ್ಜನಾಂಗ ಮರ್ದನಾದಿಗಳುಮನಲ್ಲಿ
ಸ್ನಾನ ಪಾನ ಊಟ ಕೂಟ ದ್ಯೂತವಾದಿಯೆಸಗಲಲ್ಲಿ
ಅಲ್ಲಿಯೆಳ್ಳುಕಬ್ಬನಾಡುವಂತೆ ಗಾಣವಾಡಿ ನೃಪರ
ಸೂರ್ಯಸಸಿಗಳುಳ್ಳಿನೆಲ್ಲ ನರಕದೊಳಗೆ ಕೂಡಿಯುವರ

ನೋವೊ ತನ್ನ ಗುರುವ ನಿಂದೆಗೇಳಿದವನ ಕಿವಿಯೊಳೆಱೆದು
ಕಾಯ್ದ ತಾಮ್ರ ಸೀಸ ತವರವಾದಿಯಾದ ರಸವನೆಱೆದು
ಉರಿದು ಉಕ್ಕುವೆಣ್ಣೆಯರಗು ಕ್ಷಾರರಸವನೆಱೆದು ಕ್ರಮದಿ
ವಜ್ರಲೇಪವರೆದುವಖಿಳ ನಿರಯದೊಳಗೆ ತರ್ಪರಿರದೆ
ಅನ್ಯವಧುವನಳಿಪಿ ನಿಂದೆ ಸೋಂಕಿದವರ ಮೈಯೊಳಡರೆ
ತೀವಿ ಕಾಯ್ದ ಸೂಜಿಗಳುಮನಿಡಿದು ಬೆಟ್ಟುತಿರ್ಪರರರೆ
ಪಿಂದೆ ಪೇಳ್ದ ತಾಮ್ರವಾದಿಯಾದ ರಸವನೆಱೆವರಂತೆ
ಮುನಿದು ದೃಷ್ಟಿಯಿಂದೆ ಗುರುವನೀಕ್ಷಿಸಿರ್ದ ಪಾಪಿಗಿಂತು
ಅಱಿಯದಕಟ ಗುರುವನೊಮ್ಮೆ ರೋಷದಿಂದೆ ನೋಡಿದವನ
ಅನ್ಯವಧುವಿಗಳುಪಿ ನೆನೆದು ಕೋಪದಿಂದೆ ನೋಡಿದವನ

ಕಣ್ಗಳಲ್ಲಿ ಕಾಯ್ದ ಸೂಜಿಚಯವನಿಡಿದು ಪಿಡಿವರಕಟ
ಕ್ರಮದೆ ಲೋಹವಾದಿಯಾದ ರಸವನೆಱೆದು ಸುಡುವರಕಟ
ಗುರುಗೆ ಲಿಂಗ ಜಂಗಮಾದಿಗೀಯದುಂಡ ಬಾಯೊಳಯ್ಯೊ
ಆರಿಗೀಯದೊಡಲ ಪೊರೆವ ಬೆಂದ ನರರ ಬಾಯೊಳಯ್ಯೊ
ನೂಱು ಕೂರ್ಪ್ಪವೆತ್ತ ಕಾಯ್ದ ಮೊಳೆಯನಿಡಿದು ಬೆಟ್ಟಿಲೋಹ
ಜಾದಿ ರಸವನೆಱೆದು ಕ್ರಮದಿ ನರಕದೊಳಗೆ ತಪ್ಪರಾಹ
ಶಿವನವನದ ಪುಷ್ಪ ಉಗಿದು ವಾಸಿಸೆತ್ತಿ ಮುಡಿದ ಪಾಣೆ
ಮೂಗುತಲೆಗಳೊಳಗೆ ಕಾಯ್ದ ಮೊಳೆಯನಿಡಿವರೆಯ್ದೆ ಹೂಣೆ
ಕ್ರಮದಿ ಲೋಹಜಾದಿರಸದಿ ದಂಡಿಸುತ್ತವಿಪ್ಪರೊಂದೆ
ಶೈವಪಥಮ ದೇಶಿಕರುಮ ಶರಣತತಿಯನುಜದೆ ನಿಂದೆ

ಗೆಯ್ದ ನರರ ಶಿರ ಕಪೋಲ ಹಸ್ತವಕ್ಷಿ ಕುಕ್ಷಿಯಿನ್ನು
ಉಳಿದ ಸಂದಿಗಳುಮವೆನಿತುವೊಳವವನಿತಱೊಳು ಕಡಂಗಿ

ಕಾಯ್ದ ಮೊಳು ಮೊನೆಯ ಮೊಳೆಯನಿಡಿವರೆಲುಗಳೊಡೆದು ಮೂಡೆ
ಕ್ರಮದೆ ಲೋಹಜಾದಿರಸವನೆಱೆವರೇಱೊಳೆಯ್ದೆ ನೋಡಿ
ಅಖಿಳ ನಿರಯದೊಳು ವಿಚಿತ್ರ ಯಾತನಂಗಳೆಸಪವರ್ಗೆ
ಇದುವೆ ಶಾಸ್ತಿ ಪರರ ಧನವನೆಳದುಕೊಂಬ ಪಾತಕರ್ಗೆ
ಶಿವನ ಜ್ಞಾನ ಪುಸ್ತಕಾಪಹರಣ ಶರಣತತಿಯನಿಂತು
ಕಾಲೊಳಂಟಿದವರ್ಗೆ ಪಿಂದೆ ಪೇಳ್ದ ಶಾಸ್ತಿ ಮಾಳ್ಪರೆಂತು
ಇನ್ನು ಕಾಲು ಕೈಯೊಳಗೆವವನಿತನೊರೆವರಾರೊಯಿಲ್ಲಿ
ಶಿವನ ನಿಳಯದೊಳಗೆ ಮೂತ್ರ ಮಲವನೆಸಪ ಪಾಪಿಗಲ್ಲಿ ೧೪೦

ವೃಷಣ ಶಿಶ್ನವೊಡೆಯಲುಕ್ಕಿನೊನಕೆವಿಡಿದು ಬಡಿವರುರದೆ
ತನುವಿನಲ್ಲಿ ಕೂರ್ಪುವೆತ್ತ ಕಾಯ್ದ ಸೂಜಿವಿಡಿವರುರದೆ
ಕೂರ್ಪುವೆತ್ತ ಧಾರೆ ತೋರ ಹಾರೆಗಾಸಿ ಗುದದೊಳಿಟ್ಟು
ತನುಗಳೆಲುಗಳೊಡೆದು ನೆತ್ತಿಗೇಱಿ ಮೂಡೆ ಕುಟ್ಟಿ ಹೆಟ್ಟಿ
ಮರ್ಮದಲ್ಲಿ ಲೋಹಜಾದಿ ರಸವನೆಱೆದು ಸುಡುವರೆಯ್ದೆ
ಇಂದ್ರಿಯಂಗಳೆಲ್ಲಜಲ್ಲಿಯನಿತು ರಸವನೆಱೆವರೆಯ್ದೆ
ಗಾರುಹಸ್ಥರೆನಿಸಿ ಶರಣಗರ್ಭವನ್ನು ವೀಯದವರ
ಕಾಲು ಕೈಯನಗಚಿ ತೋರಣದೊಳು ಕಟ್ಟಿ ಸೀಳಿ ನರರ
ನಾಱಿಸುವರು ತಟ್ಟು ಮಾಡಿ ಪೋಳ್ದು ಸೂಱುವರುಸವಿಟ್ಟು
ವಕ್ತ್ರ ಭಾಳ ಚರಣ ಕರಮೊಳಿಡಿಯೆ ಮೊಳೆಯನಿಕ್ಕಿ ಹೆಟ್ಟಿ
ಮುಖವನೀಳ್ದು ತಿನಲಿಕಲ್ಲಿ ಲೋಹತುಂಡ ವಾಯಸಾದಿ ೧೫೦

ಪ್ರಾಣಿಚಯವನೋವಿ ನಾಲಗೆಯುಲಮರ್ಚಿ ಲೋಹದೊಂದು
ಭಾರಗುಂಡನಿಳಿಯಬಿಟ್ಟು ಮರ್ಮವೆರಡಱೊಳುಮವೆರಡ
ನೊತ್ತಿ ತೂಂತುಗೊಱೆದು ಕೈಯೊಳಮರ್ಚಿ ದ್ವಿಗುಣದೆರಡು ಗುಂಡ
ನಸ್ಥಿಯುಳಿಯಲುಳ್ಳ ಮಾಂಸವೆಳ್ಳಿನನಿತನನಿತನರೆದು
ತಮ್ಮನಿಂತು ತಮಗೆ ಹಲವು ಕಾಲವಿಕ್ಕುತಿರ್ಪರರಿದು
ಕಳೆದು ಕರಗಿ ಉಳಿದು ತಿಳಿದ ಲೋಹ ಸೀಸ ತವರ ರಸವ
ನಂತೆ ಕರಗಿದರಗಿನಂತೆ ಯೆಣ್ಣೆಯಂತೆ ಕ್ಷಾರರಸವ
ನೊಂದನೊಂದನೊಮ್ಮೆ ಕ್ರಮದಿ ತೊಡೆದುವೋಱಲಲೊಱಲಲಯ್ಯ
ಕೊಡಿಸಿಗೊಂಡು ಕೆಡೆಯಲಲ್ಲಿ ಮಳೆಯನೆಸಪರಯ್ಯ ೧೬೦

ಗಾಳಿಯೆಸಗಿಯಾಱಿ ಯೆಣ್ಣೆಯೆಱೆದು ತಾಳಿಸುವರುವಯ್ಯ
ನೆರೆದ ಕಿರ್ಚಿನೊಳಗೆ ಅಡ್ಡ ಹಿಡಿದು ಹಿಡಿದು ಸೀವರಯ್ಯ

ಇನ್ನು ಹಲವು ಯಾತನೆಗಳನೆಸಪರ್ಗ ಪ್ರತಿದಿನಕಟ
ಪಾಪಕ್ಷಯವನೆಯ್ದುವನ್ನ ಕಷ್ಟ ಯಾತನೆಗಳನಕಟ
ಹಸಿವು ಬೇಹತ್ತಿಯಲಿಪ್ಪುದಯ್ಯೊ ತೃಷೆಗಳಲಿದು ಕೊಲುವವಯ್ಯೊ
ಉಷ್ಣವೆಡೆಯಲಿಡೆಯಲೋವೊ ಶೀತವೆಡೆಯಲೆಡೆಯಲೋವೊ
ವಾತ ಪಿತ್ತ ಶ್ಲೇಷ್ಮವಣ್ಣ ಶ್ವಾಸ ಕಾಸ ಮೂತ್ರವಣ್ಣ
ಕಷ್ಟ ಕಷ್ಟ ಗುಲ್ಮವಯ್ಯ ಮೂತ್ರಮೋಹಸಂಗಳಯ್ಯ
ಜ್ವರವದೆಯ್ದೆ ಕುರುವದೆಯ್ದೆ ಗೃಹಣಿಯಲ್ಲಿ ಕ್ಷಯವದಲ್ಲಿ
ಕಾಮವ್ಯೋಹೊ ಕ್ರೋಧವ್ಯೋಹೊ ಲೋಭವೆಡೆಯ ಮೋಹವೆಡೆಯ

ಮದವು ಮತ್ಸರಂಗಳಾದಿಯಾದವೆಯ್ದೆಯೆಡೆಯಲಲೆಯೆ
ಬೊಮ್ಮರಕ್ಕಸಾದಿ ಭೂತಗ್ರಹವವೆಡೆಯಲೆಡೆಯಲಲೆಯೆ
ಇಂತಿವೆಲ್ಲವಾದಿಯಾದ ಘೋರತರದ ಶಾಸ್ತಿ ನೋಡ
ಲೆಲ್ಲ ನರಕದೊಳಗಿವೆಲ್ಲ ಬೇಹತ್ತಿ ಬೇಹತ್ತಿಯುಂಟು ನೋಡ
ಮುಖ್ಯ ನರಕಮಿವುಗಳುಳಿದ ನರಕಸಂಖ್ಯೆಯಜೀವನಾವ
ನೂಜು ದಿವ್ಯವರುಷವಣೆಸಿಯಜ ಕಡೆಯನಜೀವನಾವ
ಎನಿತು ಕಾಲ ಚಿತ್ರವಧೆಯನೆಸಗಲಲ್ಲಿ ಸಾಯಲಜೀಯ
ತಮ್ಮ ತಮ್ಮ ಗೆಯ್ದ ಪಾಪವೆಯ್ದೆ ತೀರುವನ್ನ ಲಜೀಯ
ಒಂದುವ್ಯೊಂದು ನರಕ ಉರಿವ ಕಲ್ಪ ಶಿಖಿಯನಿಳಿಪವಣ್ಣ
ಅಖಿಳ ನಿರಯ ವಧೆಯನೆಯ್ದೆ ಕೇಳ್ದನಾವನುಳಿವನಣ್ಣ

ಅಖಿಳ ಪಾಪತತಿಗೆ ನಿರಯ ಶಾಸ್ತಿವ್ಯೊಂದೆ ಚಂದವಲ್ಲಿ
ಕಾಲಭೇದದಿಂದೆ ಹೆಚ್ಚುಕುಂದುವೆಳವುವುಸುವರ್ಣಡಲ್ಲಿ
ಗುರುವಿನಲ್ಲಿ ಲಿಂಗ ಜಂಗಮಾದಿಗಳೊಳು ಮಾಡಿತಲ್ಲಿ
ಅತ್ಯತೀತ ಪಾಪವೆಂಬುದವನಿಯುಳ್ಳನಿಪ್ಪರಲ್ಲಿ
ಉಳಿದ ಪಂಚಮಹಾಪಾಪಕೊಂದು ಕಲ್ಪವಿಪ್ಪರಣ್ಣ
ಪಾತಕರ್ಗಳರ್ಧಕಲ್ಪವರಲು ನಿರಯದೊಳಗೆಯಣ್ಣ
ಇನ್ನುವ್ಯೊಪ ಪಾಪರೆಲ್ಲ ಪಾಪಕಲ್ಪವರಲಿಕಿಂತು
ಕಾಲಸಂಖ್ಯೆಯಲ್ಲಿಯೆಲ್ಲ ನಿರಯ ವಧೆಯನುಂಬರಂತು
ತನಗೆ ತಾನೆ ಹಗೆವನಾಗಲೆಂತು ನಿದ್ರೆ ಬರ್ಪುದಿರುಳು
ನಿತ್ಯಜೀವನಕ್ಕೆ ಪಾಪವೆಸಗುತಿರ್ಪರೋವ್ಯೊ ಮರುಳ
ರಕಟವಖಿಳ ನಿರಯ ಯಾತನೆಗಳನುಂಬರಲ್ಲಿ ಸಂದು
ಕ್ಲೇಶಪಾರವೆಯ್ದುವನ್ನ ಉಂಡು ಬಳಿಕ ಕ್ಷಿತಿಗೆ ಬಂದು

ಮಗ್ಗುಳಾಗಿ ಕಲ್ಗಳಾಗಿ ಬರನು ಬಳ್ಳಿಗಿಡುಗಳಾಗಿ
ಕ್ರಮದಿ ಸ್ಥಾವರಂಗಳೆನಿಪ ಭೇದವೆನಿತವನಿತವಾಗಿ
ಬಳಿಕ ಕ್ರಿಮಿಗಳೆನಿಪ ಯೋನಿಭೇದವನಿತವನಿತವಾಗಿ
ಹದ್ದು ಕಾಗೆ ಗೂಗೆ ಕೋಳಿಯಾದಿಯಾದ ಪಕ್ಷಿಯಾಗಿ
ವಕಟವಕ್ಕವೆನಿತು ದುಃಖ ಮೊಳವವನಿತನುಂಡು ನೀಗಿ
ಬಳಿಕ ಬೆಂದ ಹಂದಿ ನಾಯಿ ಕತ್ತೆ ಕೋಡ ನರಿಗಳಾಗಿ
ಕ್ರಮದೆ ಮೃಗವವೆನಿತು ಯೋನಿಭೇದಮೊಳವವನಿತನೆಯ್ದಿ
ಬಳಿಕ ಪಶುವವೆನಿತುವನಿತು ಭೇದವ್ಪೊಗೆದು ಕಡೆಯನೆಯ್ದಿ

ಇಂತು ಚೌರಸೀತಿ ಲಕ್ಷಯೋನಿಯೊಳಗೆ ತಿರುಗುವಲ್ಲಿ
ಕಾಕತಾಳನ್ಯಾಯದಿಂದೆ ಮನುಜಜನ್ಮವಪ್ಪುದಲ್ಲಿ
ಅರಿಯ ಜನ್ಮವಡೆದು ಸ್ವರ್ಗ ಮೋಕ್ಷವಡೆಯುದಳಿವರಯ್ಯ
ದೇವ ದಾನವರೊಳು ದುರ್ಲಭತ್ವ ಮನುಜಭವವಿದಯ್ಯ
ಸರ್ವಧರ್ಮಲಾಭವೀವ ಮೂಲಧನವಿದೆನಿಪುದಣ್ಣ
ವ್ಯರ್ಥ ವ್ಯಯವದಾಗದಂತು ಕಾಯ್ದು ಲಾಭವಡೆಯಿರಣ್ಣ
ಸ್ವಸ್ಥನಾಗಿ ನಿಂದ ದಿನದೊಳಾರ್ಜಿಸುವುದು ಭಕ್ತಿಧನವ
ಕಾಯಭಾಂಡದಿಂದೆ ಪಡೆದುಕೊಂಬುದೀಶ ಭಕ್ತಿಧನವ
ನಂದಿ ಕೆಡುವವ್ನೊಡಲಿನಿಂದೆಯೆಂದು ಕೆಡದ ಧನವನೊಲ್ಲ
ರಕಟ ಆಯು ನೋಡೆ ನೋಡೆ ಕೊಱಿದು ಕೊಱಿದು ಪೋಗಲೆಲ್ಲ

ಪಗಲಿರುಳ್ಗಳೆಂಬ ನೆವದಿ ಕಂಡು ಕಂಡುವಱಿಯರಕಟ
ಆವಕಾಲದಾವ ಪೊತ್ತು ಮರಣವೆಂಬುದಱಿಯರಕಟ
ಇತ್ತಲಾ ಕಳತ್ರ ಪುತ್ರ ವಿತ್ತವತ್ತಲೊರ್ವನಾಗಿ
ಪೋಪಮಾರ್ಗ ಸಂಬಳಕ್ಕದೇನು ಧರ್ಮವಲ್ಲದಾಗ
ಕ್ಷೇಮಯಾತ್ರೆಯಹುದದೆಂತು ಬಳಿಕ ಸ್ವಸ್ಥವಿಹುದದೆಲ್ಲಿ
ಅಲ್ಲದಂದು ಕುಪಥ ಮಾರ್ಗ ಕ್ಲೇಶವೆಯ್ದಿ ಸಾವರಲ್ಲಿ
ಇತರ ಧರ್ಮವಮರ ಪುರಕೆ ಸಲುವುದತ್ತ ಸಲ್ಲದಣ್ಣ
ಶೈವಧರ್ಮನರಕಧೀಶ ಪುರದೊಳಿಕ್ಕಿ ಸಲುವುದಣ್ಣ
ಇಂತಿವೆಲ್ಲವಱಿದು ಪಾಪ ಉಳಿಯೆ ನರರು ಬಾಳ್ವರಪ್ಪ
ಪುಣ್ಯದಿಂದವಖಿಳಸುಖಮವಿತರಕಖಿಳನರಕವಪ್ಪ

ಮಱಿದು ಶಿವನನೊಮ್ಮೆ ನೆನೆದ ಭವಿಯೆ ನರಕವೆಯ್ದನಯ್ಯ
ಪಿರಿಯಪಾಪವೆನಿತವಿರ್ದಡವನೊಳಂಜಿ ಧರ್ಮನಯ್ಯ

ಈಶನಾಜ್ಞೆವಿಡಿದು ಬೇಗ ಶುದ್ಧಿಗೆಯ್ದು ಶಿವನ ಪುರವ
ನೆಯ್ದಿ ಸುಖಿಪನೆನಲಿಕಣ್ಣ ಅಱಿದು ನೆನೆವ ನರನ ಘನವ
ನಾವನೆಯ್ದೆ ಪೊಗೞಲಱಿವನೆಂದಡಿನ್ನು ಭಕ್ತನೞಿವ
ನಱಿವಡಱಿವನಗಜೆಯಾಣ್ಮನೆನಲದಿನ್ನದಾವನಱಿವ
ನೆನಲು ನೋಡಿ ತಿಳಿದು ಕಳೆದು ಭವವನುಳಿದು ಶಿವನನಱಿದು
ಶೈವಧರ್ಮ ಸುಧೆಯನೀಂಟಿ ಸುಖಿಸಲಾರ್ಗೆಯರಿದುವರಿದು
ಶೈವಧರ್ಮ ಸೂಱೆವಡೆದದುಂಡು ಉಂಡು ಬರ್ದುಕಿ ಬಿಡದೆ
ಬೇಡ ಕುಪಥವಿಡಿದು ಕೆಡದೆ ಬರ್ದುಕಿ ಶಿವನ ಭಕ್ತಿವಿಡಿದು

ಅಖಿಳ ದೋಷವ್ರೊರೆದನೀವೆನೆನ್ನಡೊಮ್ಮೆ ಶಿವನ ನಿಂದು
ನೆನೆಯಲವನನೆಯ್ದದುದಕವಬ್ಜದಳವನೆಯ್ದದಂತೆ
ಎಂದೆ ಮಹಿಮೆಯಱಿದು ಬೆರಸುತಿರ್ಪುದೀಶ್ವರಾಂಘ್ರಿಯುಗದ
ಭಕ್ತಿಯಿಂದ ಸಂಸೃತಿಗಳನೊದವುದುಕ್ತ ಬುಧರು ಪವೆದು
ಎಂದು ಶಾಸ್ತ್ರದೊಳಗೆ ಪೇಳ್ದ ನಿರಯವರ್ಣನಮುಮನೆಯ್ದೆ
ಕೇಳ್ದು ತಾಳ್ದ ಜೀವತತಿಯ ನೋವನೆಯ್ದೆ ಕಂಡು ಸುಯ್ದು
ಅಕ್ಕಟಜ್ಞ ಜಂತುಗಳಿಗೆಯೆನಿತವಸ್ಥೆ ಗಡವಪೆಂತು
ಮೃದುಗಳಪ್ಪ ಪ್ರಾಣವಾಯುವಿನಿತವಸ್ಥೆಗಾರ್ಪವೆಂತು
ನೋಳ್ಪೆನೆಂದಸಂದು ನರಕದೊಂದು ಗುರ್ವಿನುರ್ವಿನುಕ್ಕ
ಸಂದು ಮನವನಲೆಯಲಿಂದುಜೂಟಸವನ ಬಗೆಯದುಕ್ಕಿ

ಪ್ರಾಣಿತತಿಯ ಮೇಲಣೋದು ಕರುಣವಿರದೆಯೆಳೆಯುಲೆಯ್ದೆ
ನರಕಲೋಕವಿರ್ಪ ತೆಱನ ನೋಳ್ಪೆನೆಂದು ಶರಣನೆಯ್ದೆ
ಬಪ್ಪುತಿರ್ದನಮುಮ ನಿರಯವನಧಿವಡಬನಂದು ಬಂದು
ನೆರೆದು ಪ್ರಮಥರೊಗ್ಗಿನೊಳಗೆ ವ್ರೊಪ್ಪುತಿರ್ದನಮುಮ ಸಂದು
ಇದುವೆ ನಂದಿನಾಥ ರಚಿತ ಕಥೆಯೊಳಮರ್ದು ಪದ್ಮದೇವ
ನೊದವಿ ಪದೆದು ಧರೆಯೊಳೆಂದು ಪೇಳ್ದ ಕನ್ನಡದೊಳು ಮೆಱೆವ
ರಗಳೆಯಾಱನೆಯದಿದೆನಿಪ ನರಕಸೂನ ವರ್ಣನವಿದು
ದೋಷಕಾಸೆಗೆಯ್ಯಲೀಯದಾಪ್ತಕಾರಿ ಧರೆಗೆ ಪದೆದು

ಕಂದ॥ ನರಕಗಿರಿವಜ್ರನುರುತರ
ನರಕಾರ್ಣವ ವಡಬನಮುಮ ಸಾನಂದೇಶಂ
ಗುರುರೂಪ ವಿಶ್ವನಾಥನ
ಚರಣದ ಭಕ್ತಿಯನು ಕೊಡುತಲಿರ್ಕೆಮಗೆಂದುಂ ೨

ಏಳನೆಯ ಸಂಧಿ

ಮಾರ್ಕಂಡೇಯೋಪಾಖ್ಯಾನಂ—
ರಾಗ-ವರಾಳಿ॥

ಪಲ್ಲವ॥ ನೆರೆದು ಪಿರಿದುತ್ಸವದಿನಿದಿರ್ಗೊಳ
ಲರರೆ ಪುರವದನೆಯ್ದಿ ಯಮುನಿಂ
ಪರಮ ಮಾರ್ಕಂಡೇಯಚರಿತೆಯನಾಲಿಸಿದನೊಪ್ಪಿ

ವಚನ॥ ಹರ ಹರ ಹರ ಕುವರನಂದು॥

ಪದ॥ ಶ್ರೀಮದಗಜಾವರ ಪರಾತ್ಪರ
ಧಾಮ ಕರುಣಾವರಣ ಶರಣ
ಪ್ರೇಮಿ ಮೃಡ ನಿಸ್ಸೀಮಭೀಮ ಮುರಾರಿ ದೃಕ್ಚರಣ
ಸೋಮ ಸೋಮಾಭರಣ ನಿಗಮ
ಸ್ತೋಮ ಗಂಗಾಧರ ಪುರಾರಿ
ಶ್ರೀಮಹಾಗುರುರೂಪ ವಿಶ್ವೇಶ್ವರ ಕರುಣಿಸೆನಗೆ ೧

ಶರಣ ಕೇಳ್ ಸಾನಂದನಂತಾ
ನರಕದಾಖ್ಯಾನವದನಾಲಿಸಿ
ನೆರೆದ ಜೀವರ ನೋವನಾಙಿಸಲೊಗೆದ ಕೃಪೆಯವನಂ
ಇರದೆಯಂಡಲೆಯಲು ಪರೀಕ್ಷಿಪ
ಭರದಿ ನರಕಾಂತಕ ಮಹತ್ತರ
ಕರುಣಿ ನೆರೆದೊಡ್ಡೋಲಗಂ ಬೆರಸೇಳಲಾ ಪೊತ್ತು ೨

ತೊಳತೊಳಪ ಬೆಳ್ಗೊಡೆಗಳ[1]ಲಿ[1] ಸಲೆ
ನಳನಳಿಪ ಝಲ್ಲರಿಗೆಳೆಸದಿರೆ
ಹಳಹಳಿಪ ಮುತ್ತಿನ ವಿಲಾಸದ ಕೊಡೆಗಳೆಡೆಗೆಡೆಯಂ
ದಳದಳನೆ ಪೊನಲ್ಪರಿವ ಕಾಂತಿಯ
ಕಳಕಳಸ್ವನವೊಗೆವ ರನ್ನದ
ಹೊಳೆಹೊಳೆವ ಚಿತ್ರದ ವಿಚಿತ್ರದ ಕೊಡೆಗಳೊಪ್ಪುತಿರೆ ೩

---

[1] ತಿ (ಕ) ವಿ (ಗ)

ಮಿಳಿರ್ವ ವೃಷಭಧ್ವಜ ಪತಾಕೋ
ಜ್ವಲದ ರನ್ನದ ಲಂಬಳದ ಕುಡಿ
ಗಳೊಳು ತೊಡರ್ದ ಠಣತ್ಕೃತಿಯ ಘಂಟಾಳಿಯುಲುಪುಗಳ
ಥಳಥಳಿಪ ಕಳಶಂಗಳೆಡೆಯೊಳು
ನಳನಳಿಪ ಪುತ್ಥಳಿಗಳೆಸೆದಿರೆ
ಗಳಬಳಿಪ ಶುಕಪಿಕ ಮರಾಳ ಕಪೋತ ಶಿಖಿತತಿಯಿಂ ೪

ಗಗನದೊಳು ಚರಿಯಿಸುವ ಮಂದರ
ನಗವೊ ತುಹಿನಾಚಲವೊ ಮೇಗ
ಣ್ಗೊಗೆದ ಕಾಂಚನಗಿರಿಯೊ ಕೈಲಾಸಾದ್ರಿಯೋಯೆನಲು
ಮ[1]ಗಮಗಿ[1]ಪ ಪರಿಮಳದಿ ಶೈತ್ಯದಿ
ಮಿಗುವ ರತ್ನ ಸುವರ್ಣ ಕಾಂತಿಯ
ನೆಗಳ್ದಮಲ ಶುಭ್ರತೆಯಿನೊಪ್ಪಂಬಡೆದ ಪುಷ್ಪಕವಂ ೫

ಏಱಿದಂ ಮೃಡಕುವರನಂದೊಡ
ನೇಱಿ ರುದ್ರಾಂಗನೆಯರವರೊಡ
ನೇಱಿ ರುದ್ರರು ಪ್ರಮಥರಗ್ರೇಶ್ವರರು ಗಣವರರು
ಏಱಿದರು ಶಿಷ್ಯಪ್ರಶಿಷ್ಯರು
ವೇಱಿ ಮನು ಮುನಿ ಋಷಿಗಳೊಡನೊಡ
ನೇಱಿಯುಘೆಯುಘೆ ಜಯಜಯಧ್ವನಿ ದಶದಿಗಂತಮವಂ ೬

ಮಣಿಮಯೋನ್ನತ ಸಿಂಹಪೀಠದ
ಗಣವರನ ಕೆಲದಣುಕೆಯರ ಕಂ
ಕಣ ನಿನಾದೋತ್ಕರ ಝಣ ಝಣತ್ಕಾರವೊದವಿಪವು
ಪ್ರಣಯಕಲಹದ ಹಂಸಮಿಥುನಮ
ನಣಿಯ[2]ರದಿ[2] ವ್ಯಾಜಿಸುವ ವೊಲು ಕುಣಿ
ಕುಣಿ[3]ವ[3] ಚಾಮರವೆಸೆದವಾ ಸಾನಂದನೆಡಬಲದ ೭

ಇರದೆ ಸನಕ ಸನಂದನಾದಿಯಿ
ನುರವಣಿಪ ಹರ ಹರ ನಿನಾದದೆ
ಪರಮ ಶಿವಶಾಸ್ತ್ರಾಗಮಾಲೋಚನೆಯ ಸವಿನುಡಿಯಿಂ

---

1 ಘಮಘಿ (ಕ) 2 ರಂ (ಖಗ) 3 ದ (ಖಗ)

ಶರಣ ಭೃಗು ಜಾಬಾಲ ಗೌತಮ
ವರದಧೀಚ್ಯುಪಮ[1]ನ್ಯಗಸ್ತ್ಯರ[1]
ನಿರುತ ಬೋಧಾಯನ ವಸಿಷ್ಠಾದಿಯ ಸುಗೋಷ್ಠಿಗಳಿಂ ೮

ಅರರೆ ತುಂಬುರ ನಾರದರ ಪರಿ
ಪರಿಯ ಮಂಗಳಗೇಯರವದಿಂ
ಪರಮ ಚಂಡಪ್ರತತಿ ಕೀರ್ತಿಪ ಪಟುತರಧ್ವನಿಯಿಂ
ಸುರರ ತೂರ್ಯಾಸ್ವನದಿ ಗಂಧ
ರ್ವರಿನೊಗೆವ ಪೂಮಳೆಯ ಪರಿಮಳ
ವಿರದೆಳೆಯಲೊಡನೊಡನೆ ಮೊರೆವಳಿವಳಗದಿನಿದನಿಯಿಂ ೯

ಪೊಡೆವ ನಿಸ್ಸಾಳದ ದಳಂಕೃತಿ
ನುಡಿವ ಗಣಸಂತತಿಯ ಸಂಭ್ರಮ
ವೆಡೆಗೆಡೆಗೆ ಸಂಗೀತ ವಾದ್ಯಾಳಾಪದೊಳು ಗತಿಗೆ
ಬಿಡದೆ ರಂಭಾದ್ಯಪ್ಸರೆಯರೊಡ
ನೊಡನೆಯಾಡುವ ನೂಪುರಾರವ
ವಡಿಗಡಿಗೆಯೊಪ್ಪಿದುದು ಸಾನಂದಪ್ರಯಾಣದೊಳು ೧೦

ಪರಮಸಿದ್ಧರ ಚಾರಣರ ಕಿಂ
ಪುರುಷರಪ್ಸರಸಿಯರ ಗಂಧ
ರ್ವರ ಗರುಡರರ್ಕಾದಿ ಸುರರೊಪ್ಪುವ ವಿಮಾನಮವು
ಪರಿವರಿಸಿ ಬರುತಿರ್ದವುಚಿತಂ
ಬೊರೆದು [2]ಹಿಮ್ಮುನ್ನೆ[2]ಡಬಲಂಗಳೊ
ಳರರೆವೋಲಗಿಸುತ್ತವಾ ಪುಷ್ಪಕನೃಪಾಗ್ರಣಿಯ ೧೧

ಇಂತನಂತ ಸುಖಾವಗಾಹದ
ನಂತ ಶಿವಕಥನದ ಸುಗೋಷ್ಠಿಯೊ
ಳಂತ್ರಕಾಂತಕನವರ್ಗಳೊಡನಮರ್ದೋಲಗದೊಳೊಪ್ಪಿ
ಕಂತುಮದಹರ ಗಮನದಂತಿರ
ಲಂತುವಾ ಪಟ್ಟಣದ ಪೊಱವನ
ದಂತವದನವನೆಯ್ದುವಲ್ಲಿಂ ಮುನ್ನ ಯಮನಱಿದು ೧೨

---

1 ನ್ಯ ಕುಂಭಜ (ಖಗ) 2 ಹಿಂ ಮುಂದೆ (ಖಗ)

ಪೊಡೆಯಿಸಿದನಡಿಗಡಿಗೆ ಭೇರಿಯ
ನೊಡನೊಡನೆ ಮಂಗಳದ ತೂರ್ಯದ
ಗಡಣವೆಸೆಯಲು ಬರಿಸಿದಂ ಚಾತುರ್ವಿಧದ ಬಲವಂ
ಗುಡಿಗಳಿಂ ತೋರಣದಿ ಪುರದಂ
ಗಡಿಗ[1]ಳಿಂ[1] ಕನ್ನಡಿ[2]ಕ[2]ಳಸದಿಂ
ದೆಡೆವಿಡದೆ ಕೈಗೆಯ್ದು ಬರಿಸಿದ ವಾರನಾರಿಯರಂ ೧೩

ನೆರೆದರಂತಃಪುರದ [3]ರಾಣಿ[3]ಯ
ರರರೆ ನೂಪುರ ವರ ನಿನಾದಂ
ಕರಮೆ ದಿಗ್ವನಿತೆಯರ್ಗೆ ಕರ್ಣಾಭರಣವಾದವೆನೆ
ಪುರಜನಂ ಪರಿಜನವೆರಸಿ ತಾ
ನುರವಣಿಪ ಸಂಭ್ರಮದಿನಿದಿರ್ಗೊಳೆ
ಹರನಣುಗನಾ ಯಮನ ಮನೆಯೊಳೋಲಗದೊಳೊಪ್ಪಿರಲು ೧೪

ಹರ ಶರಣ ಸಾನಂದಗಣವರ
ಚರಣಯುಗಳವ ನಿನ್ನ ಮಗನಾ
ದರಿಸಿ ತೊಳದಮಳಾಂಬುಗಳನಾಂತವಯವಂಗಳೊಳು
ಕರಮೆಸೆಯಲರ್ಚಿಸಿ ಮಹೋತ್ಸವ
ಪರವಶದೊಳಡಿಗೆಱಗಿ ಮೈಯಿ
ಕ್ಕಿರದೆ ಶಿರದೊಳು ಕರವನಿಟ್ಟುಚಿತಜ್ಞನಿಂತೆಂದಂ ೧೫

ಪೂತನಾದೆಂ ಪುಣ್ಯಕೃತ್ಸಂ
ಪೂತಮಧ್ಯದೊಳೆಣಿಕೆವಡೆದೆಂ
ಭೂತಿ ಭೂಷಣ ನಿನ್ನ ಕಾರುಣ್ಯಾವಲೋಕನದಿಂ
ಶೀತಕರಧರನೊಲ್ಮೆಯುಂಟೆಂ
ದಾತುರಿಸಿ ಹೇಳುತಿದೆ ಪಿರಿದಂ
ತಾತ ನಿನ್ನಾಗಮನವೆತ್ತಾನೆತ್ತಲೆಲೆ ಮಹಿಮ ೧೬

ಗಡಣಿಸಿದ ದೋಷಗಳಿಗೆಂದುಂ
ನುಡಿಯಲೇತುಂ ನೋಡಲರಿದೆನೆ
ಮೃಡಶರಣನಾಂ ಪುಣ್ಯಕೃದ್ವರನೆಂದಱಿದೆನಿಂದು

---

[1] ಳಂ (ಖಗ) [2] ಗ (ಕ) [3] ನಾರಿ (ಗ)

ಒಡೆಯರೊಡಮಾತಾಡಲೀಕ್ಷಿಸ
ಪಡೆದೆನಾಹಾ ಭಾಗ್ಯವೇಯಿಾ
ಪೊಡಲಿದಳಿಯದೆ ಮರಳಿ ಪುಟ್ಟದೆ ಮುಟ್ಟಿದೆಂ ಪದವಂ ೧೭

ಜಿತ[1]ಪು[1]ರನವೊಲು ಬಂದಿರೆನ್ನಯ
ಹಿತ ಯಮತ್ವದೊಳಿರಿಸಿಯಿನ್ನೇಂ
ಹತವಿಹೀನಾಶ್ರಯದೊಳೆಲೆ ನಿಮ್ಮಿಚ್ಛೆಯೊಳು ಸುಳಿವೆಂ
ಪತಿಯೆ ನೀಂ ಕಿಂಕರನೆನಿಸಿ ನಾಂ
ಕೃತವಕೃತವೆಂದಱಿಯೆನಗಜಾ
ಪತಿಯಣುಗ ಬೆಸನಾವುದದ ಬೆಸಸೆಂದೆನಲು ಕಂಡು ೧೮

ಶರಣಕುಲ[2]ಕಾ[2]ನಂದದಾಯಕ
ಪರಮ ಸಾನಂದಾಂಕ ಗಣವರ
ನಿರದೆಯಿಾಷದ್ದರಹಸಿತವದನಾರವಿಂದದೊಳು
ನಿರುತನುಚಿತಜ್ಞಂ ಪ್ರಿಯೋಕ್ತಿಗ
ಳರಸನಖಿಳಾಗಮವಿದಾಂವರ
ಕರುಣಿ ನರಕಂಗಳುಮನೀಕ್ಷಿಸ[3]ವೇ[3]ಡಿಬಂದೆವೆನೆ ೧೯

ದೇವರಱಿವಿರಿ ವೇದ ವೇದಾಂ
ತಾವಳಿಯ ಶಾಸ್ತ್ರಾಗಮಂಗಳ
ನಾವನಱಿವಂ ನಿಮ್ಮವೊಲು ಶಿವಶಿವ ಮಹಾಮಹಿಮ
ದೇವ ಶಿವನಿಂದಕರು ದುಃಖಾ
ತ್ಮಾವಬೋಧರು ಶ್ರೀವಿಭೂತಿಯ
ಭಾವ[4]ಹೀನರು[4] ನೋಡಲುಂ ಕೂಡಲ್ಕವಹವೆನುತುಂ ೨೦

ಮನದೊಳಸವಸದಿಂದೆ ಮಱಿದೆಲೆ
ಮನಸಿಜಾರಿಯನೊಮ್ಮೆ ನೆನೆದವ
ನನುನಯದಿ ನೋಡಿದವನೆಂದುಂ ನೋಡನಿವನೆನಲು
ಅನವರತ ಲಿಂಗಾರ್ಚನಾಪರ
ರನವರತ ಜಂಗಮ ಸುಪ್ರೇಮಿಗ
ಳಿನಿತು ನಿರಯವನೀಕ್ಷಿಪಾಗ್ರಹವೇಕೆ ಬೆಸಸಿಮೆನೆ ೨೧

---

1 ಹ (ಕ) 2 ಸಾ (ಖಗ) 3 ಜೇ (ಗ) 4 ಕರ್ಣೀವು (ಖ)

ಕಾರಣವದೊಂದಿಲ್ಲ ಮನದೊಳು
ಸೇರಿದಾ ಕೌತುಕವೆ ನೋಡಿದು
ಕಾರಣಂ ಗೋಪ್ಯಂಗಳತಿದುಷ್ಕರಮವಾದೊಡವಂ
ಬಾರಿಸಲು ತೋಱಿಸಲು ವೀಕ್ಷಿಸ
ಲಾರಯಲು ನಿನಗೆನಗವರಿದದು
ಬಾರದೆಂದುಸುರುತ್ತಮಿರದೇಳೇಳು ಬೇಗಮೆನೆ ೨೨

ಕರುಣಿ ನೀವೇನೆಂದು ಬೆಸಸಿತು
ವರವಲಂಘ್ಯವದೆನಗೆ ಹರಿಯಜ
ಸುರಸಮಿತಿಗಾ ವಿಶ್ವನಾಥಾಜ್ಞೇಯಲೆಂತಂತು
ಪರಮಮಾರ್ಕಂಡೇಯನವಜ್ಞೆಯಿ
ನುರಿದೆನಂದಿಂದಾ ಮಹಾತ್ಮರು
ಶರಣರೆಂದುದನೆಂದು ಜೀವಿಪೆನೆನಲದೆಂತೆನಲು ೨೩

ಶರಣರಱಿಯಿರೆ ಸುರರ ಪದವಿದು
ನರಕಿಗಳ ಪದದಿಂದೆ ಕೀಳ್ ಚಿಃ
ಪರಿಕಿಸಲು ನಗೆಯಾದಪುದು ರುದ್ರನ ನಿಮೇಷದಲಿ
ಹರಿಯ ನಾರಾಯಣರನಂತುರು
ಮರಣ ಧರ್ಮವನೆಯ್ದುವರುವಾ
ಹರಿಯ ದಿನವೊಂದಱೊಳುವಜನೊರ್ವಂ ಮಡಿವನಿರದೆ ೨೪

ಸರಸಿಜೋದ್ಭವನೊಂದುದಿನದೊಳ
ಗುರುಳ್ವವಿನಶಶಿಯುಮರರಮರಪ
ರಿರದೆ ಮನುವೊಳಗಾದರೀರೇಳ್ಪೊಳುಗಳನೆನಲು
ಪರಿಕಿಸುವೊಡೆಮಗಮರವೆಸರಿನ
ಕರಕರೆಯ ನಾಂಚಿಕೆಯುವೊಳಗಿದು
ಶರಣ ನೀವಱಿಯದುದೆಯೆಮ್ಮಯನಿತ್ಯತೆಯ ಹದನಂ ೨೫

ಹರಿಯಜರ್ ಸುರಪಾದಿಗಳಿಗೆಯು
ನೆರೆದ ದಾನವ ಮಾನವರ್ಗೆಯು
ಸರಿ ನೂಱು ನೂಱಿವರುಷದಾಯುಷ್ಯಸಂಖ್ಯೆಗಳು
ಪರಿಕಿಸಲು ಪದವಳಿಯಲಳಿವೆವು
ನಿರುತವಿದಱೊಳು ಮರ್ತ್ಯನೊರ್ವಂ
ಹರನ ಕರುಣದಿ ತನುವದಳಿಯದೆ ನಿತ್ಯತೆಯೊಳಿರ್ದಂ ೨೬

ಚಂದವಡೆದಾ ಪದ್ಮಕಲ್ಪದೊ
ಳೊಂದನೆಯ ಕೃತಯುಗದೊಳಬ್ಜಜ
ನಿಂದಲೊಗೆದೈದನೆಯ ಋಷಿಯುಪ್ಪಾ ಮೃಕಂಡ್ವಂಗೆ
ಬಂದ ಗುಣವತಿನಾಮ ಲಲನೆಗೆ
ವೊಂದು ಮಕ್ಕಳುವಿಲ್ಲದುಬ್ಬೆಗ
ವೊಂದಿನೊಂದುವಪಾರಕಾಲಮವಳಿಯುಲಗಿದವರು ೨೭

ಉಳಿದ ನದಿಲಲನೆಸುರನಂಬುಧಿ
ಕಳವಿನಿಂ ಧರಣೀತಳವನೀ
ಳ್ಪಳಸಿ ಮಱಯಿಸಿ ಸುತ್ತಿಬರೆ ಕಾವೇರಿಯಾಣ್ಮನೊಳು
ಹೊಳೆಹೊಳೆವ ನಂದನದೊಳೊಪ್ಪು
ತ್ತಿಳೆಗೆ ಮಂಡನವಪ್ಪ ಚೋಳನ
ಬಳವದುರ್ವೀತಳಪುಳಿನದೊಳು ಕೂಡುವಳು ನಿಚ್ಚಂ ೨೮

ದೋಷತತಿಗಳನುಳಿಯಲಂಬುಧಿ
ದೇಶವೆಲ್ಲವನೆಯ್ದಿ ಸುತ್ತಿ ಸ
ದಾಶಿವಂ ಬಿಡದಲ್ಲಿ ನರ್ತಿಪ ದೇಶವದನೆಯ್ದಿ
ಕ್ಲೇಶವೆಲ್ಲವನುಳಿವ ನಿಚ್ಚ
ಕ್ಕಾ ಸುದತಿಗೂಡಿರ್ಕೆಲಂಬಿಡ
ದಾಸೆಯಿಂ ಬಿಲ್ವೋಪವನವದನೋಲಗಿರ್ಪರೆನೆ ೨೯

ತಾನೆ ವನಧಿಯ ಪಡುವತೀರದೊ
ಳಾ ನದಿಯ ತೆಂಕಣ ತಡಿಯೊಳ
ನೂನದುರುತರ ಪಾವನದ ಬಿಲ್ವದ್ರುಮದ ನಡುವೆ
ಶ್ರೀನಗೇಂದ್ರಸುತಾವರಂ ವರ
ದಾನಿ ಮದ್ಗುರು ಲಿಂಗವುದಯಿಸಿ
ಯಾನತರ್ಗಭಿಮತ ಫಲಂಗಳನೆಸಗುತಿರ್ಪುದೆನೆ ೩೦

ಆ ಮಹಾಲಿಂಗದೊಳು [1]ಭಕ್ತ[1]
ಪ್ರೇಮಿ ಗುಣವತಿದೇವಿವೆರಸು
ದ್ದಾಮನನುದಿನವರ್ಚಿಸುತ್ತಿರಲಾ ಮೃಕಂಡುವಿನ

[1] ಜಂಗಮ (ಕ)

ಸೀಮೆಗೆಟ್ಟಗಣಿತದ ನೇಮ
ಕ್ಕಾಮಹಾ ವರದಾನಿ ಕರುಣಿಸಿ
ಕಾಮಹರನವರಿಚ್ಛೆಯಱಂದಿಂತೆಂದನೀಕ್ಷಿಸುತಂ ೩೧

ಪರಿಕಿಸಲು ಸುತಮಾತ್ರರೆನಿಪರ
ನಿರದೆ ದಶಶತರುರುತರಾಯು
ಷ್ಯರನನಘ ನಿನಗೀವೆನೊ ಮೇಣ್ ಷೋಡಶಾಬ್ದದೊಳು
ಮರಣವಶಗತನಖಿಳ ವಿದ್ಯಾ
ಕರ ಕರುಣಿ ಶಿವಶಾಸ್ತ್ರ ಕೋವಿದ
ವರಗುಣಾರ್ಣವನೊರ್ವ ಸುತನಾಗಲಿಯೊ ಪೇಳೆನಲು ೩೨

ನಳನಳಿಸೆ ರೋಮೋದ್ಗಮಾಳಿಗ
ಳೊಳಗೊಳಗೆ ಥಳಥಳಿಪ ಸೌಧಮ
ನಿಳಿದಿಳಿದು ದಳದಳನುಗುವ ಬಾಷ್ಪಂಗಳಮರ್ದೊಪ್ಪೆ
ಕಳಕಳಸ್ವನವೆಸೆಯೆ ನುತಿಯಿಂ
ಗಳಗಳನೆ ವೈದಿಕ[1]ದ ತುತಿಯಿಂ[1]
ಕಳೆದು ಕಳೆದಡಿಗಡಿಗೆಱಗಿ ಮೈಯಿಕ್ಕಿಯಿಂತೆಂದಂ ೩೩

ಇಂದುಶೇಖರ ಬಳಿಕ ನೀವೆಂ
ದಂದವನನೇ ಕರುಣಿಸಿ ನಗುವ
ನಿಂದುನಿಭವದನಾರವಿಂದವನೀಕ್ಷಿಸಲು ಸಫಲಂ
ಒಂದುದಿನವಿರ್ದಳಿದಡಳಿಯಲಿ
ಬೆಂದ ಪುತ್ರಿಕನೆನಿಸಿಕೊಂಬುದೆ
ಱಂದೆ ನರಕದೊಳಿರ್ಪುದದುವೆ ಶ್ಲಾಘ್ಯವದು ಸೌಖ್ಯಂ ೩೪

ಎತ್ತಣದು ಪರಲೋಕವಕಟಕ
ಟೆತ್ತಣದು ಸುಖವಿಹದೊಳವರ್ಗಿ
ನ್ನೆತ್ತಣದು ಪಿತೃಋಣವನಯ್ಯೋ ನೀಗುವಾ ತೆಱನು
ಅತ್ತ ಪುತ್ತೆಂಬಾ ನಿರಯದೊಳು
ಸುತ್ತುವರನುದ್ಧರಿಪನಿಂದಾ
ಉತ್ತಮದ ಪುತ್ರಾಭಿಧಾನವನೊರೆದರಾರ್ ನೀನೆ ೩೫

---

1 ಸ್ತೋತ್ರದಿ (ಕ)

ಧರೆಯೊಳಗೆ ನಿಜಕುಲದೊಳೊರ್ವಂ
ಹರ[1]ಶರಣ[1]ನುದಯಿಸುಗುಪೆಂದೆಂ
ಬೊರೆದು ಪಿತೃಗಳು ಪಿಚ್ಚಿಪರು ಮಳೆಗಿಚ್ಚಿಪೊಲ್ ಕುಡಿಯಂ
ಗುರುವೆ ಅಜಿಂದೆನು ರಕ್ಷಿಸೆನಲಾ
ಪುರಹರು ಕೃಪೆಮಾಡಲೊಗೆದಂ
ಶರಣ ಮಾರ್ಕಂಡೇಯನುದ್ಯತ್ತ್ರೀಜನಪ್ರತಿಮಂ ೩೬

ಗುರುಕರುಣವೊಳಗಾದ ವಿದ್ಯಾ
ಪರಿಚಿತಂಗುರು ನಿಷ್ಮನಭಯುಂ
ಗುರುಚರಣ ಪರಿಣಾಮುವೊರೆದಂತಃಕರಣನಚಲಂ
ಹರಹರಖಿಳಾಗಮ ವಿಶಾರದ
ನಿರದೆ ಭವಿದೂರಂ ಸುಚರಿತಂ
ಕರುಣಿ ಶರಣಾಗ್ರಣಿ ಶಿವಾರ್ಚಕನಮಳಗುಣನಿಳಯುಂ ೩೭

ಪೊಗಳ್ವವನ ಬಗೆಗರಿದನಂತಂ
ಗಗಣಿತಂ ವಾಕ್ಪತಿ ಬೃಹಸ್ಪತಿ
ನಗಧರರ್ಕಳಿಗೆನಲು ಮಾರ್ಕಂಡೇಯನುನ್ನತಿಯಂ
ಪೊಗಳಲಹುದಿಂತೆಂದು ಹರಹರ
ಅಗಜೆಯಾಣ್ಮ ವರಪ್ರಸಾದಜ
ವಿಗತಕಲ್ಮಷನೆಂದು ಶ್ರೀಗುರುಭಕ್ತಿರತನೆಂದು ೩೮

ಉದಯುಡೊಳು ಲಿಂಗಾರ್ಚನೆಯುಮಂ
ಪಡೆದು ಹಗಲಿರುಳ್ಗಳೊಳು ನಿಚ್ಚಂ
ಸದಮಲಂ ಗುರುಪೂಜೆಗಳುಮಂ ಮಾಳ್ಪನೊಡನೊಡನೆ
ಪದಪದುಮಕರ್ಘ್ಯಾಂಬುವಿತ್ತಾ
ಹೃದಯುವನಜಕ್ಕತಿವಿಕಾಸವ
ನೊದವಿದನುರಾಗದಿ ಮುಖಾಂಬುರುಹಮನಲರ್ಚಿಸುವಂ ೩೯

ವಿನಯುರತ್ನಾಕರನೊಡರ್ಚುವ
ವಿನಯುವಾ ಪಿತಮಾತೆಗಳಿಗನು
ದಿನವತೀವ ಸುಖಾವಗಾಹವನಿರಿಸುವುದು ಕೇಳಾ

---

[1]ಭಕ್ತ (ಕ)

ಅನವರತ ಶುಶ್ರೂಷೆಗೆಯ್ದುಂ
ಮನದಣಿಯದಾರ್ತತೆಯನೀಕ್ಷಿಸಿ
ಘನಮಹಿಮರೊಮ್ಮಿಂಗೆವೊಮ್ಮಿಂಗುಬ್ಬುವರ್ಗಂದು ೪೦

ಎಂದಿನಂದದಿ ಪೂಜಿಸಲ್ಕೆ
ಯ್ತಂದ ಕಂದನ ಮೊಗವನೀಕ್ಷಿಸಿ
ಮುಂದುಗೆಟ್ಟವರೊರ್ವರೊರ್ವರನಿರದೆ ನಡೆನೋಡಿ
ಅಂದವಳಿದರು ನೊಂದರಯ್ಯೋ
ಕಂದಿದರು ಕುಂದಿದರು ಬೆಂದರು
ಸಂದ ಪುತ್ರಸ್ನೇಹಿಗಳು ವೃದ್ಧರುವನಾಥಕರು ೪೧

ಉಱುವ ಕಾಳ್ಗಿಚ್ಚಿನೊಳು ಸಿಲ್ಕಿದ
ಗೆಱಿ ನೆಱೆತಯದಂಚೆಯವೊಲಾದರು
ಮಱಗೆಡಸಿದೆಳೆವುಲ್ಲೆಯಂತಕಟಕಟ ದೆಸೆಗೆಟ್ಟು
ಮಱುಗಿದರು ಹಿಗ್ಗಿದರು ಬಿಕ್ಕನೆ
ವೆಱೆ ಬಿರಿದರಱಚಿದರು ಬಾ
ಯ್ದೆಱೆದೊಱಲಿದರು ಮೈಮಱೆದು ಶೋಕೋದ್ರೇಕಪರವಶರು ೪೨

ಸಿಡಿಲು ಪೊಡೆದತ್ತೋ ನಗಂ ಬೇರ್
ಸಡಿಲಿ ಕೆಡೆದಪ್ಪಳಿಸಿತೋ [1]ಮೇ[1]
ಲಡಸಿ ಗಗನಂ [2]ಬಿಳ್ದು[2]ದೊಮ್ಮೆನಲಾದುದವರ್ಗಳಿಗೆ
ಒಡಲೊಳೆಡೆಗಟ್ಟಿರ್ದ ದುಃಖವ
[3]ತೊ[3]ಡೆದು ಜಲಮಯವಾಗೆ ಕಡಲಿ
ಟ್ಟೆಡೆವಿಡದೆ ಪರಿವಶ್ರುಧಾರಾಪೂರದೊಳಗದ್ದು ೪೩

ಬಿಡದಳುವರಂಘ್ರಿಯೊಳು ನಡನಡ
ನಡುಗಿ ಕೆಡದೊಡನೊಡನೆಯಳುತಂ
ತಡಿಗಡಿಗೆ ಮೈಯಿಕ್ಕಿ ಭಯ ವಿಹ್ವಳ ಕುತೂಹಲನು
ಕಡೆಗಣಿಸರೊಮ್ಮಿಂಗೆ ಸಲೆ ಸು
ಯ್ದೊಡೆಯರೆನ್ನಯ ಬಿನ್ನಪವನೆಂ
ದೆಡೆಯುಡುಗದಿಂತೇಕಿದನೆನುತ್ತಂ ಹೊಸತೆನುತ್ತಂ ೪೪

---

1 ಮೊಸ (ಖಗ) 2 ಬಿದ್ದು (ಕ) 3 ದೊ (ಖಗ)

ಅಡಿಗೆಱಗೆ ಮೈಯಿಕ್ಕಲಿಕ್ಕಲು
ಪಿಡಿದು ನೆಗಪಿದರಪ್ಪಿ ಲಾಲಿಸಿ
ತೊಡೆಯ ಮೇಲಿಟ್ಟಕ್ಕಱೊಳು ದೀರ್ಘಾಯುಮೆಂದೆನ್ನ
ತಡೆಯದೆ[1]ನ್ನಂ[1] ಮೃಡನುಮಂ ನಿ
ಮ್ಮಡಿಯುಮುಮನೊಡನೊಡನೆ ಹರಸು
ತ್ತಡಿಗಡಿಗೆ [2]ಪೆರ್ಚು[2]ವರ್ಗಿನಿತನೊಡರಿಸಿದೆನಿಂದೆನುತಂ ೪೫

ಒಡೆಯರಿಚ್ಛೆಯನಱಿದುಚಿತದೊಳು
ನಡೆಯಲಱಿಯದ ಭಕ್ತಿಹೀನಂ
ಕೊಡಲಿಯಂದದ ಪಾತಕನೊಳೇಂ ಗುಣವಱಸಲುಂಟೆ
ಕೆಡುಕನೊಳು ನಿರ್ಮೋಹಿ ಕ್ರೂರನೊ
ಕಡರ್ದು ತಪ್ಪುಗಳಿಡಿದ ಹೃದಯನೊ
ಕೆಡೆವಿಡದ ನಿರ್ದಯನೊಳಿನಿತೇಕುಳಿವುದಿದನೆನಲು ೪೬

ಬಱಿದುರಿವ ಕಿಚ್ಚಿನೊಳು ತುಪ್ಪವ
ನೆಱೆದ ತೆಱನಾಯ್ತುವರ್ಗೆ ದುಃಖಂ
ಮಱುಕಣಿಸಿ ನೋಯಿಸಿತು ವಿನಯಾರ್ಣವನಮಳವಚನಂ
ಅಱಿದೆಯಿಲ್ಲಲೆ ಕಂದ ನಿನ್ನೀ
ಮೆಱೆವ ಗುಣನಿಚಯಂಗಳೆಮ್ಮುವ
ನಿಱಿದು ಮಱುಗಿಸಿದಪ್ಪುವಿನ್ನಿದನುಳಿವ ತೆಱನೆಂತು ೪೭

ಬಡವನರ್ಥವನಂಧಕಂ ಕ
ಣ್ಪಡೆದವೊಲು ಮುಪ್ಪಿನೊಳಗಾವುಂ
ಪಡೆದು ಮೋಹವದಿಂದುವರಲಱುವಂ ಮುಸುಂಕಿರ್ದು
ಹಡೆದೆಱೆಯುಲಿಂದಱಿಯಲಾಯ್ತೆನು
ತಡಿಗೆ ಮೈಯಿಕ್ಕಿರ್ದ ಮಗನಂ
ತೊಡೆಯೊಳಿಟ್ಟಮರ್ದಪ್ಪಿ ಮೊಗವಂ ನೋಡಿ ಮಗುಳ್ದವರು ೪೮

ಮಗನೆ ನಿನ್ನೊಳು ಗುರು[3]ಬಕುತ[3]ನೊಳು
ವಗಜೆಯಾಣ್ಮ ಪದೈಕರತನೊಳು
ವೊಗೆಯಲಱುವುದೆ ಮತ್ಕೃತಕ ದುಷ್ಕರ್ಮಫಲವೆನುತುಂ

---

[1] ನ್ನಯ (ಕ) [2] ಹೆಚ್ಚು (ಕ) [3] ಭಕ್ತ (ಕ)

ತೆಗಳಿ ತಮ್ಮಂ ಬೈವುತಿಂದಿನ
ಪಗಲು ಹದಿನಾರ್ವರುಷದಂತ್ಯದ
ಪಗಲು ಪುತ್ರವಿಯೋಗಕೆಣಿಸಿರಿಸಿಟ್ಟು ಪಗಲಿದೆನೆ ೪೯

ಗುರುವೆ ಅಲ್ಪಾಯುಷ್ಯನೆಂಬಿದ
ನೊರೆದು ಪರಿಗಣಿಸಿಟ್ಟರಾ[1]ರೆನೆ[1]
ಹರನೆಮಗೆ[2]ಯೆಂ[2]ದಜುಪಿ ನಿನ್ನಂ ಕರುಣಿಸಿದನೆನಲು
ಪರಮ ಗಿರಿಜಾವರ ಕೃಪಾಕರ
ಕರುಣೆ ಶರಣಪ್ರೇಮಿ ಪಿರಿದುಂ
ನಿರುತವಿಂದೊಳಗಾಗಲೆನಗೆಯು ನಿತ್ಯವಿದು ತಥ್ಯಂ ೫೦

ಗುರುಕರುಣವಿರಲಾನಿರಲ್ಕೆಮ
ಮರಣಬಾಧೆಯದೆತ್ತಣದುವಿ
ನ್ನೆರಡು ಘಳಿಗೆಡೆಯುಂಟು ಶಿವನಿನಿತು ನಿರ್ದಯನೆ
ಗುರುವೆ ನಿಚ್ಚಂ ದೀರ್ಘಾಯುಮೆಂ
ದೊರೆವ ಹರಕೆಯದೌಪಚಾರವೆ
ಗುರುವೆವುಮ್ಮಳವೇವುದುಳಿವುದು ಕರುಣಿಸುವುದೆನುತಂ ೫೧

ಗುಣವತಿಯು ಕಣ್ಣೀರ್ಗಳಂ ಗುಣ
ಮಣಿ ನಿಲಿಸಿ ಗುರುಚರಣಯುಗಳ
ಕ್ಕಣಿಯುರದಿ ಮೈಯಿಕ್ಕಿ [3]ಧೀರ[3]ನುದಾರನತಿನಿಷ್ಠಂ
ತ್ರಿಣಯನನನಾಗಮಶಿರೋನ್ನತ
ಮಣಿಯುನಮರಾಗ್ರಣಿಯನಾರ್ತರ
ರುಣಿಯುನಗಜಾವರ ಪರಾತ್ಪರ ಶಂಕರನ ಶಿವನಂ ೫೨

ಶ್ರೀ ವಿಭೂತಿಯು ಗಾತ್ರ ರುದ್ರಾ
ಕ್ಷಾ ವಿರಾಜಿತ ಪೂತ ಶೈವ ವಿ
ಭಾವಿತಾಂತಃಕರಣ ಶ್ರೀಪಂಚಾಕ್ಷರೀನಿ[4]ರ[4]ತಂ
ಓವಿ ಪಂಚಬ್ರಹ್ಮಮೃತಸಂ
ಜೀವನೀ ವಿದ್ಯಾದಿಯಿಂ ನಾ
ನಾವಿಧದೊಳರ್ಚಿಸಿ ಮಗುಳೆ ಮಧ್ಯಾಹ್ನ ಯಜನಕ್ಕೆ ೫೩

[1] ರೀ (ಕ) [2] ಅಂ (ಖಗ) [3] ದೀತ (ಕ) [4] ರು (ಕ)

ಶರಣನೀಕ್ಷಿಸಿದಂ ಹೊಱಗನಂ
ದಿರದೆ ಮಾಧ್ಯಂದಿನವದಾಗಲು
ಕರುಣ ಶುದ್ಧಿಯನುಜ್ವಲಾಂಬುಗಳಿಂದೆಸಗಿ ಧೀರಂ
ಮರಳಿ [1]ಪೊ[1]ಗುವಲ್ಲಿಂದ ಮುನ್ನವೆ
ಕೊರಲನೊತ್ತುವೆನೆಂದು ಚರಿತದಿ
ಹರಿಗಿರಿಗಳವದಿರುಗಿಪದಿರೆಂಬಂತೆಯಂತಕನು ೫೪

ಗುರುವೆ ಸಾನಂದೇಶ ಕೇಳೀ
ನೆರೆದಕಾಲ ಕರಾಳಿವೆರಸಾ
ಸುರದ ರೂಪಂ ತಳೆದು ಹರಿದುರವಣಿಸಿ ಮುತ್ತಲಿಕೆ
ಕರಮೆ ಭಯವಿಹ್ವಳಿತ ಶಿಶುಗಳು
ಹರಿದು ತಾಯ್ತಂದೆಗಳನಳುತಂ
ಕೊರಲನಪ್ಪುವವೊಲು ಮೃಕಂಡುವಿನಣುಗನೊಳಪೊಕ್ಕು ೫೫

ಲಿಂಗ ರಕ್ಷಿಸು ರಕ್ಷಿಸೆನುತಾ
ಲಿಂಗಿಸಿದನಾ ಲಿಂಗವಂ ಬಿಡ
ದಂಗವಮರ್ದಿರೆ ಜಂಗಮಾರ್ತಿ ಕೃಪಾಕರನ ಶಿವನಂ
ಅಂಗವಿಸಿ ಕಾಲಾಖ್ಯನೆಯ್ದಿದ
ನಂಗವೈರಿಯ ಹವಣವಱಿಯದೆ
ಭಂಗ ಜ್ಯೋತಿಯನಿಳಿಪಲೆಯ್ದುವ ಕತ್ತಲೆಯವೋಲು ೫೬

ತರುಣ ಬಿಡು ಬಿಡು ತರಳ ಬಿಡು ಬಿಡು
ದುರುಳ ಬಿಡು ಬಿಡು ಮರುಳೆ ಲಿಂಗವ
ನಿರವಿನೆಲ್ಲಿಗೆ ಸಲ್ಲದೇಳೇಳೆನುತೆ ನಿಂದಿಸುತಂ
ಕೊರಲ್ಗೆ ಬೀಸಿದನುಱದಿ ಪಾಶವ
ನುರವಣಿಸಿ ಬರತೆಗೆಯೆ ಬಿಡದವ
ನುರಗಕುಂಡಲ ಏವೆನಿನ್ನೇಗೆಯ್ವೆನೆಂದಱಚಿ ೫೭

ಪಿಡಿದು ಗಂಟಲನೊತ್ತುತೀ ಧರೆ
ಪ್ರೊಡೆಯ ನಿನ್ನಯ ಮುಂದೆಯಿನ್ನಿದ
ನೊಡವೆವಾರ್ಗಾನಾರನಱವೆಂ ಗುರುವೆ ಮದ್ಗುರುವೆ

---

1 ಹೊ (ಖ)

ಉಡುಪಶೇಖರ ಮೊಱೆಯೊ ಪಾರ್ವತಿ
ಯೊಡೆಯ ಮೊಱೆಯೋ ಮೊಱೆಯೊ ಶಿವನೇ
ಮೃಡನೆ ಮೊಱೆಯೋ ಹರನೆ ಮೊಱೆಯೋಯೆಂಬ ರೋದನವಂ ೫೮

ಕೇಳಿದಂ ಕಾಳೀಧವಂಗೆಲೆ
ತಾಳಿದಂ ಕ್ರೋಧವನು ಶೂಲಿ ಕ
ಪಾಲಿ ನೀಲಗ್ರೀವ ಬಾಳಾಂಬಕನಿದೇಗಹನಂ
ಕಾಲ ಕಾಲಂ ನೋಡಲುರಿ[1]ವುದು[1]
ತೂಲಮಾತ್ರದಿ ನೀಲನಗನಿಭ
ಕಾಲ ಕಾಯಮುಮಾನುಮೆನ್ನೀಪುರವೆನಲ್ಕರಿದೆಂ ೫೯

ಅಂದು ಲಿಂಗವದುಲಿದು ಹರಹರ
ನೊಂದನೊಂದಾ ಕಂದ ಬಂದೆಂ
ಬಂದೆನೆನ್ನಯ ತಂದೆಯಂಜದಿರಂಜದಿರುಮೆನುತಂ
ಸಂದ ಮಾರ್ಕಂಡೆಯಗೆ ನಿತ್ಯವ
ನೋದಿಸೆಲೆ ನಿರ್ದೋಷರಪ್ಪೆ
ಮ್ಮಂದಿಗರನುರುಪಿದನನಾಥರನೊಲವರವಿದಲ್ಲಾ ೬೦

ನೆರೆದ ಜೀವರ ಕಲ್ಪನೆಗಳಂ
ತರಿಸಲೋಯೆಂದೆಮ್ಮನದಕೆಂ
ಬಿರಿಸಿದವರಾರ್ ತಾನೆ ಮಾರ್ಕಂಡೇಯನಾಯುವದಂ
ಪರಿಗಣಿಸಿದೀರೆಂಟು ವರುಷಂ
ಬರವಿರದೆಯುರುಪಿದೆವೆಯಾವೇಂ
ನೆರಪಿದಪರಾಧಮನದಾವುದು ಕರುಣಿಸುವುದೆನುತಂ ೬೧

ಹಲವನಾಡಲಿಕಿಲ್ಲಯೆಮ್ಮಯ
ಕೊಲೆಯು ತಿಳಿಪಿತ್ತೆಲ್ಲವಂ ಶಿವ
ನೊಲಿದನೇ ಪುಣ್ಯಾತ್ಮನೊಲವಿಲ್ಲದನೆ ಪಾಪಾತ್ಮಂ
ಎಲೆ ಶರಣಯಿದನಱಿದು ಶಿವನವ
ರೊಲಿದ ಕಾಲೊಳು ನೂಂಕಿತಂ
ತಲೆಯೊಳಗೆ ತಳೆದಾಂ ಬಾಳ್ವೆನಂದಿಂದಿಂದುವರಮೆನುತುಂ ೬೨

1 ದುವು (ಖ)

ದೇವ ಮಾರ್ಕಂಡೇಯಚರಿತಂ
ದೇವಯಿದು ಅಸ್ಮತ್ಪ್ರಸಂಗಂ
ದೇವ ಅದು ತನ್ನವರೊಳೀಶನ ಪಕ್ಷೈಕಪಾತಂ
ದೇವಯಿದುದಲು ಕಾರಣಂ ನಿನ
ಗಾವತೆಱದೊಳಗಂಜುವೆಂ ಮುಂ
ಗಾವಿಲತ್ವಡೊಳಂದು ಪಡೆದಾ ಲಾಭವದೆ ಸಾಲ್ದುಂ ೬೩

ಅನುದಿನಂ ಪುಲ್ವಿಡಿದು ಸಾಱುವೆ
ನನವರತವೀ ಕಾಲಮೃತ್ಯುಗೆ
ಯನಘರೀಶನ ಶರಣರಂತಿಂತಿರ್ದರೆನಲರಿದು
ಘನಮಹಿಮನಗಜೇಶನವರ್ಗಳ
ಮನದ ಬೆಂಬಳಿವಿಡಿದು ತಿರುಗುವ
ವಿನಿತನಱಂದವರೇಳು ನೆರೆಯೊಳು ಸುೞಯದಿರಿಮೆಂದುಂ ೬೪

ಭಸಿತ ವಿಲಸಿತ ಗಾತ್ರಗುಮನಂ
ತೆಸೆವ ರುದ್ರಾಕ್ಷಾ ವಿರಾಜಿ ತ
ವಸುಧೆ ಪಾವನವರ್ಗಳಂ ಕಂಡಲ್ಲಿ ಮೈಯಿಕ್ಕಿ
ಅಸಮ [1]ದೃಗನಂ[1] ಕಂಡವ್ರೋಲ್ ಕುಸಿ
ಕುಸಿದು ಮೆಲ್ಲನೆ ಸರಿವುದೆಂದಾ
ನುಸು[2]ರ್ವೆ[2]ನಗಜಾವಸಥಲಾಂಛನಮಾತ್ರರೆನಲ[3]ಱ[3]ದಂ[3] ೬೫

ಇಂತನಂತೋತ್ಸವದಿನಿದಿರ್ಗೊಂ
ಡಂತಕಂ ಪೂಜಿಸಲು ಸಮಯವ
ನಂತಕಾಂತಕನಣುಗನೊಲ್ದೊಡ್ಡೋಲಗದೊಳಿತ್ತು
ಕಂತುಹರನವರೊಡನೆ ಹರ ಹರ
ಮಂತಣದ ತಿಂಥಿಣಿಯೊಳತಿ ನಿ
ಶ್ಚಿಂತನಾನಂದದೊಳು ಸಾನಂದೇಶನೊಪ್ಪಿರ್ದು ೬೬

ಇದು ಪರಮನಂದೀಶರೊರೆಯಿಂ
ಪುದಿದದಿದು ಸಾನಂದಚರಿತದೊ
ಳಿದು ದಲುಪಕಥೆಯಾದ ಮಾರ್ಕಂಡೇ[4]ಯಲುಪಕಥ[4]ನಂ
ಇದು ಶರಣಕವಿರಚಿತ ಕನ್ನಡ
ವಿದುವೆ ಸಪ್ತಮಸಂಧಿ ಪ್ರಮಥರ
ಪದ ಮಹತ್ವಕ್ಕಾದ ಸಂಧಿಯಿದಘಟಿತದ ಸಂಧಿ ೬೭

---

[1] ನೇತ್ರನ (ಖಗ) [2] ರ್ದೆ (ಗ) [3] ದಱಂ (ಕ) [4] ಯುಪಾಖ್ಯಾ (ಕ)

ಸಾನಂದ ನಾರಕಿಗಳನ್ನು ಶಿವಲೋಕಕ್ಕೆ ಕರೆದೊಯ್ದುದು—

ರಾಗ-ನಾಟಿ । ತಾಳ-ಪಜಿನುಟ್ಟೆ

ಪಲ್ಲವ॥ ಘೋರತರ ಯಾತನೆಯೊಳಳುರ್ವ ಸು
ದಾರುಣರ್ ನಾರಕಿಗಳಂ ಮಾ
ರಾರಿಪುರದೊಳು ನೆರಪಿದಂ ಸಾನಂದಗಣವರನು

ಪದ॥ ಶ್ರೀಭವಾನೀಧವ ಸರೋರುಹ
ನಾಭ ನಯನಾರ್ಚಿತ ಪದಾಬ್ಜನಿ
ಜಾಭಿರಾಮ ಸುನಾಮ ಸೋಮಾಭರಣ ಕಾಮಹರ
ಶ್ರೀಭಸಿತ ವಿಲಸಿತ ಸಿತಾಂಗಮ
ಹಾಭವಾಂಬುಧಿ ಬಾಡಬಾಖ್ಯವ
ರಾಭಯದ ಕರ ಕರುಣಿ ಶಂಕರ ಕರುಣಿಸುವುದೆನಗೆ ೧

ದೇವಯಿದು ಶರಣರ ಘನತ್ವಂ
ದೇವಯಿದು ಭಕ್ತರ ಮಹತ್ವಂ
ದೇವಯಿದು ನಿಮ್ಮವರ ನಿತ್ಯತ್ವದ ಸಿರಿಯು ಕೊರ್ಬು
ದೇವಯಿದು ಕಾಲನ ಮರಣಗತಿ
ದೇವಯಿದುಯೆನಗಾದ ಪರಿಭವ
ದೇವಯಿದು ಶಿವನೊಲವರದ [1]ಪ[1]ವಣೊಡೆಯ ಚಿತ್ತೈಸು ೨

ಗುರುವಿನಾಜ್ಞೆಯೊಳೆಂತು ಶಿಷ್ಯರು
ಪರಮನಾಜ್ಞೆಯೊಳಜಹರೀಂದ್ರರ
ನೆರವಿ ವರ್ತಿಪುದೆಂತು ನಿಮ್ಮಾಜ್ಞೆಯೊಳಮರವೃಂದಂ
ಪರಿಕಿಸಲು ಸುಳಿವುದುಮೆನಲ್ಕಾಂ
ಪರಮಣುನಿಭನೊಳಗಿನಿತೆನಿತಂ
ಕರ ಶರಣ ಚಿತ್ತೈಸು ಚಿತ್ತದೊಳಿರ್ದುದೆಸಗುವುದು ೩

---

1 ಹ (ಕ)

ಎಂದು ಧರ್ಮನ ಭಯರಸಾರ್ದ್ರವ
ದಿಂದೆ ತೋದೆಸವಮಳಭಕ್ತಿಯೊ
ಳೊಂದಿದುಚಿತದ ಬಿನ್ನಪವನಾಲಿಸಿ ಮನಂಗೊಂಡು
ಇಂದುಶೇಖರನವರೊಳಮರ್ದಿ
ರ್ದೊಂದು ಸಂದಣಿಯೋಲಗಕ್ಕಾ
ನಂದಮೊದವಲ್ಕಂದು ಸಾನಂದಾಂಕನಮಳಗುಣಂ ೪

ಸರಸಿರುಹಸಖನಣುಗ ಕೇಳಾ
ಪರಮಶಿವಧರ್ಮೋತ್ತರದೊಳಾಂ
ಪರಿವಿಡಿಯೊಳಾಲಿಸಿದ ಮಾಳ್ಕೆಯನಱಿ ಕ್ರಮದಿಂದೆ
ಅರಸು ನರಕಗಳಿವು ಚಮೂವರ
ನರಕಮಿವು ನಾಯಕನರಕಮಿವು
ಪರಿವಾರ ನರಕಮಿವುಮಿವಱೊಳು ನವೆವರಿವರೆಂದು ೫

ಎನೆ ಕರುಣಿಸನುಪಮ ಹಸಾದಂ
ಎನಲನಘನೊಡ್ಡೋಲಗಂ ಬೆರ
ಸನಿಮಿಷರು [1]ಪೂ[1]ಮಳೆಗಱೆಯಲಿರ್ದಂ ಮಹಾಕರುಣಿ
ತನತನಗೆ ಯಮಲೋಕವಂಜು
ತ್ತನುನಯದೆ ಕೌತುಕವಿದೇನೇ
ನೆನುತ ದೂತರು ಭೀತರಾಗುತಲೋಡಲಾ ಪೊತ್ತು ೬

ಗುರುಭಕತ ಕೇಳಣ್ಣ ಶಂಕರ
ಶರಣನೆಳ್ತರವೆತ್ತ ನಿರಯಾ
ಕರಮವೆತ್ತಾ ನರಕಿಗಳ ಮೇಲೊಗೆದ ಕೃಪೆಯೆತ್ತ
ಪರಮಶೈವಾಗಮವದೆತ್ತಾ
ನರಕವರ್ಣನವೆತ್ತ ಹರಹರ
ಪರಿಕಿಸುವ ಭರವೊಗೆದುದೆತ್ತ ಘಟಿತವಘಟಿತವಿದು ೭

ಮಂತ್ರ ಪೂತರನಂತಶೀಲರು
ತಂತ್ರನಿಷ್ಠಾಪರರತಿ ಸ್ವಾ
ತಂತ್ರರತ್ಯಾಶ್ರಮಿಗಳಮಳಾಗಮವಿಶಾರದರು

---

1 ಹೂ (ಖಗ)

ಯಂತ್ರವಾಹಕರಮಮ ತಾವೆ ನಿ
ಯಂತ್ರಗಳು ವಿಷ್ಣ್ವಾದಿಗೆಲೆ ಸಲೆ
ಸಂತ್ರಾಸಜನಕರುವಿನಿಂದಕನೆ ರವಿಗಿವರಱಿಯ ೮

ಕರುಣಿಗಳು ಕಾರುಣ್ಯನಿಧಿಗಳು
ಪರಹಿತೋದ್ಯೋಗಿಗಳು ಶಂಕರ
ಶರಣರಮಳರು ನಿತ್ಯರಪ್ರತಿಮರು ದಯಾಳುಗಳು
ವರ ಗುಣಾರ್ಣವರಚಲರೆಂದುದ
ನರವರಿಸದದನೇ ಪ್ರತಿಷ್ಠಿಪ
ರುರು ಮಹಿಮರೆಮ್ಮಪರ್ಗಳಿವರ್ಗಳನಱಿವುದದಱಿಂದೆ ೯

ತರಣಿಯಣುಗಂ ತೋಱಿದಂ ಹರ
ಶರಣನೊರೆದಾ ಮಾಳ್ಕೆಯಿಂ ಹರ
ಹರ ಸುಘೋರಂ ರೌರವಂ ಮೊದಲಾದವೆನಿತನಿತಂ
ಪರಿವಿಡಿ[1]ಯಲೊಂ[1]ದೊಂದನೊಂದಂ
ಪರಿಕಿಸಲು ಕಾಳ್ಗಿಚ್ಚಿನಂದದ
ಲಿರದೆ ಮಾಡುವ ಸೂನವಂ ಪಾತಕರ ಹಾನಿಗಳಂ ೧೦

ಶಿರವನರಿವರು ಕರುಳನುಗಿವರು
ಬರಿಯೆಲುವನುಚ್ಚುವರು ಕೊರಲ್ಗಳ
ನಿರದೆ ಬಿಗಿವರು ತೊರಳೆಯುಂ ಸುಗಿದೊಟ್ಟುವರು ತೆಗೆದು
ನರವನೆತ್ತುವರಿಡಿವರಡಿಗಡಿ
ಗುಃರ[2] ಕಪೋಲ ಕಪಾಲ ಕಟಿಕೂ
ರ್ಪರ ತ್ರಿಕಾದಿಯನಲ್ಲಿ ದೂತರು ಪಾತಕಾದಿಗಳು ೧೧

ಕೊಱೆವ ಕುತ್ತುವ ಮುತ್ತುವೊತ್ತುವ
ಹಱಿವ ಹಿಕ್ಕುವ ಮುಕ್ಕುವೊಕ್ಕುವ
ಮುಱಿವ ಪೋದುವ ಸೇದುವೈದುವ [3]ಬಯ್ದು[3] ಬಗ್ಗಿಸುವ
ತಱಿವ ಕೆತ್ತುವ [4]ತ[4]ತ್ತುವೆತ್ತುವ
ವೊಱಿವ ವುಚ್ಚುವ ಚುಚ್ಚುವೆಚ್ಚುವ
ಜಱಿವ ಹಱಿದುಱಿ[3] ಕಿಱಿಕಿಱಿದನರಿದರಿದು ಸಣ್ಣಿಸುವ ೧೨

---

[1] ಯೊಳೊಂ (ಗ) [2] ರು (ಕ) [3] ಬೈದ (ಖ) [4] ತು (ಖಗ)

ಛಿಳಿ ಛಿಮಿದ್ಧಿಮಿ ಘುಳ್ಕು ನೆಳ್ಕುಂ
ಘಣಲು ಘಣ್ ಘಣ್ ಧಂ ಧಗಂ ಘುಳು
ಘುಳು ಛಟಿಲ್ ಛಟಿಲೆಂಬ ಕಟಿಪಟಿ ನಿಟಿಲು ನಿಱಿಲೆಂಬ
ಧುಳುಧು[1]ಳಂ ತೊ[1]ಪ್ಪೆಂಬ ಗುಱುಗುಱು
ಧಳ ಧಳಂ ಜೋಱೆಂಬುದೆಱದಱ
ದೊಳದೊಳೆಂಬೀ ಧ್ವನಿಗಳವನಿಗೆ ಭಯವನೀವುತಿರೆ ೧೩

ಖಣಿ ಖಣಿಲು ನಟಿ ನಱಲು ಛಟ ಛಟ
ಧಣಿ ಪಿಣಿಕು ಜಣಕಣಿನು ಕೃಣು ಪಟ
ಧಣ ದುಳದ ವೇಳ್ಗೆಗಳ ಕೈದುವದ[2][ನೆ][2] ಮಹೋನ್ನತವು
ಕುಣಿಕುಣಿದು ವೇತಾಳ ಶಾಕಿನಿ
ಝುಣಕರಿಸಿಯೆ ವಸಂತದಂದದಿ
ಮುಣುಗುತಿಹ ಯಾತನೆಯ ನೋಡುತ ನಡೆದ ಮುನಿವರನು ೧೪

ತರತರದ ಯಾತನೆಗಳೊಂದೆಸೆ
ನೆರೆದ ರೋಗದ ಪೀಡೆಯೊಂದೆಸೆ
ಉರಿವರಿವ ತೃಷೆ ಹಸಿವು ಕಾಮಾದಿಗಳವೊಂದೆಸೆಯು
ಅರಿದೊಡಟ್ಟೊಡೆ ಸುಟ್ಟೊಡಂ ಪರಿ
ಪರಿಯ ವಧೆಗಳಿಗಳಿಯದುಳಿದಿಹ
ಹರಣವೊಂದೆಸೆಯಲ್ಲಿಯಿನಿತಂಡಲೆಗೆ ಪಕ್ಕಾಗಿ ೧೫

ಕಳಕಳಿಪ ಹೆಪ್ಪಳಿಪ ಶೋಕಿಪ
ಹಳವಿಸುವ ಬಾಷ್ಪಂಗಳಲ್ಲುಗೆ
ಯಳುವ ನಿಜಕರ್ಮಂಗಳಂ ಬಯ್ದುಳವಳಿಪ ಸೆಡೆವ
ಬಳಲ್ವ ಹಾಹಾಕ್ರಂದನಂಗೆ
ಯ್ದುಳಲ್ವ ಜೀವಿಗಳೆಲ್ಲ ದುಃಖಂ
ಕಳಲ್ವವೋಲೀಕ್ಷಿಸಲಿಕೆಯ್ತಂದಾ ಮಹಾಕರುಣಿ ೧೬

ಕಾಣಲಾಗಿವನೆಂದನಖಿಳ
ತ್ರಾಣಕರುಣಾಕರ ಮಹಂತಂ
ಪ್ರಾಣಿಗಳ ನೋವಿಂಗಗಿದು ಕಡುನೊಂದು ಕೃಪೆಯಿಂದಂ

---

1 ಳುಂದೊ (ಖ) 2 ನಿ (ಕಖಗ)

ಸ್ಥಾಣುಗತ್ಯಂತಾಪ್ತನಮಳಂ
ಗಾಣಪತ್ಯವನೊಲಿದು ಕ್ಷೋಣೀ
ಪ್ರೀಣನವನೀಪಾಲಸಾರ್ಥಂ ಕಂಡನವನಂದು ೧೭

ಅತಳ ವಿತಳ ಸುತಳ ರಸಾತಳ
ವಿತತಿಯಡಿಯೊಳು ನೆರೆದ ನಿರಯ
ಪ್ರತತಿಯಂ ತೋಱಿಸಿದನೆಲ್ಲವನೊಂದದುಳಿದಿರಲು
ನುತವೆನಿಪ ವಿಲಯಾಗ್ನಿಯೊಲು ಸಂ
ತತವಧಾರ್ಮಿಕರೆನಿಪ ಕಾಷ್ಠವ
ನತಿಶಯದಲಳುರ್ದುರಿವರಿದು ಸುಡುತಿರ್ಪುದೊಂದೆಸೆಯಂ ೧೮

ಮಸೆದು ಮುಮ್ಮೊನೆಯಾದ ಲೋಹದ
ದಸಿಯನಗ್ನಿಯೊಳಿಕ್ಕಿ ಕಾಯಿಸಿ
ಮಸಗಿ ಪಾಪರ ಕಿವಿಯೊಳಿರ್ವೊನೆ ಮೊಳೆಯಲುಱೆ ನಾಂಟಿ
ಅಸದಳಂ ಕೊಡತಿಯೊಳಡಸಿ ಕುಸಿ
ಕುಸಿದು ಮೋದುತ್ತುಸುರದಿರಿಪೆಂ
ದೊಸರ್ವ ಲೋಹಾದಿಗಳ ರಸವೆಱೆದೆಱೆದು ಬಿಡದಲ್ಲಿ ೧೯

ಕರಮೆಸೆಯೆ ಮಸೆದಿಕ್ಕಿ ಕಿಚ್ಚಿಂ
ಕರಗುವಂತಿರೆ ಕಾಸಿದುಕ್ಕಿನ
ಕರಗಸಂ ನೇಗಿಲುಗಳಿಂ ಕೂರಿಹ ಕುರುಜೆಗೆಗಳಿಂ
ಗಱಗಱನೆ ಕೊಱೆಕೊಱೆವುತುಳ್ತು
ಳ್ತೊಱಲಲೊಱಲಲು ಸಱಸಱನೆ ಸೀ
ಳ್ದಱವಗೆಗಳಾ ನಾಲಗೆಗಳಂತಲ್ಲಿ ಸುತ್ತಿರಲು ೨೦

ಅಟ್ಟಡಿಯಲೆಲ್ಲಾ ನಿರಯದಿಂ
ತಟ್ಟತಳದೊಳು ಕಟ್ಟಕಡೆಯಲಿ
ದುಟ್ಟನೀತೆಱದಿಂದೆಯೆಕ್ಕಲನಾಗಿರಲು ಕಂಡು
ಮುಟ್ಟೆ ನರಕಮಿವೆಲ್ಲಮುಮನೀ
ಕಟ್ಟಪಾತಕತತಿಯೆಸಗಿತಂ
ನೆಟ್ಟನೊರೆದಿದನೇನುಕಾರಣವುಳುಪಿದ್ದೈಯೆನಲು ೨೧

ನರಕಮಿವಱಂತಲ್ತುಮಿವಱೊಳು
ಪೊರೆದರೆಂದುಂ ಪೊಱಮಡರು ಪರಿ
ಪರಿಯ ವಧೆಗಾಸ್ಪದರು ನಿತ್ಯರು ಪರಿಕಿಸುವಡಿವರು

ಉರಿವರಿವ ಯಾತನೆಯನುಂಬರು
ಕರಮೆ ದ್ರೋಹಾತ್ಮಕರನೀಕ್ಷಿಸ
ಲರಿದು ದೇವರ್ಗಾಗದೆಂದಿದನುಳಿದೆನೆಂದೆನಲು ೨೨

ಹೇಳಿದೆಲ್ಲಾ ನರಕತತಿಯೊಳು
ಜಾಳಿಸಿದ ಜೀವಾಳಿದೋಷಂ
ಜಾಳಿಸಲು ಪೊಱಮಡುವರೆಂದೆನಗೊರೆದೆ ಕೇಳ್ಪೋಗು
ಹೇಳಬೇಕೀ ಪಾತಕರ್ಕಳ
ನಾಳುತಿರ್ಪಾ ಪಾಪವೆಂತುಟು
ಕೇಳಲೆನ್ನೀ ಮನವಿದಂಡಲೆದಪ್ಪುದಚ್ಚರಿಯುಂ ೨೩

ಎನಲೊರೆಯಲರಿದರಿದು ಪಾಪವಿ
ದನಿರ್ವಚನಂ ರುದ್ರಸನ್ನಿಭ
ಘನಮಹಿಮಯಿದನುಳುಯಿಮೆನಲಗಜಾವಸಥಸೂನು
ಇನತನೂಭವ ಚೋದ್ಯ ಚೋದ್ಯಂ
ಮನಸಿಜಾರ್ದನನಾಣೆ ಹರ ಹರ
ಘನವದಾವುದು ಹೇಳಬೇಕೆನೆ ಚಿತ್ತದೊಳ್ ನೊಂದು ೨೪

ಹರನ ರಾಜಾದೇಶವೋ ಮೇಣ್
ಶರಣನುದ್ಯತ್ತೇಜವೆನ್ನೀ
ನಿರಯಲೋಕವನಳುರ್ದುರಿಪಲೋ ಮೇಣ್ ಕೃಪಾಕರನ
ಕರು[1]ಣಾ[1]ಮೃತಸಂಜೀವನೀನದಿ
ನರಕಿಗಳ ಮೇಲ್ಪರಿದಮರ[2]ರೆಂ[2]
ದಿರಿಸಲೋ ಮೇಣಾಗ್ರಹವಿದೇನೆನುತಲವರ್ಗೆಂದಂ ೨೫

ದೇವಯಿವರ್ಗಳ ಪಾಪವಿಂತೆಂ
ದಾವನುಸುರ್ದಾ ಪೆಸರ್ಗೊಳಲ್ಕೆ
ಜೀವಿಗಳಿಗದೆ ನೋಡ ಪ್ರಾಯಶ್ಚಿತ್ತವೇನೆಂಬೆ
ದೇವಯಿದು ಕಾರಣವಿನಿತುಪೊ
ಳ್ತಾವ ತೆಱನೆಂದುಸುರಲಱಿಯದೆ
ದೇವ ಅಂಜಿದೆನೇವೆನಾವುದು ಬೆಸಸೆನಲ್ಕೆಂದಂ ೨೬

---

1 ಣಾ (ಗ) 2 ಲೆಂ (ಖಗ)

ಅರರೆ ಲೇಸಾಯ್ತುದುವೆ ಕಾರ್ಯಂ
ನೆರೆದ ಜೀವರ ನೋವನಾಜಿಸ
ಲುರವಣಿಸಿ ಬಂದ ಪ್ರಯೋಜನಕದುವೆ ನೆರವಣ್ಣ
ಒರೆಯದಾವುದು ಧರ್ಮಮತ್ತಿಯ
ನಿರತ[1]ಮಧ್ಯ[1]ಸ್ಥಿಕವರ ಚೆ
ಚ್ಚರವುಸುರುಮೆನ್ನಾಣೆ ಕೌತುಕವೆನಲು ನಡನಡುಗಿ ೨೭

ಗುರುವೆ ಕೇಳೀ ಪಾತಕರ್ಕಳ
ನೆರೆದ ಜನ್ಮವನಂತದೊಳಗೊಂ
ದಱೊಳಗೊಮ್ಮೆ ನಮಶ್ಶಿವಾಯಾಯೆಂದಱಿಯುರಯ್ಯೊ
ಪರರ ನುಡಿಯುಂ ಕೇಳಿಯಱಿಯದ
ರುರುತರದ ಪಾಪಾತ್ಮರೆನಿಪೀ
ನರರ ದುಷ್ಕೃತ ಕರ್ಮವೃತ್ತಾಂತರ[2]ವಿ[2]ದೆಂದೆನುತಂ ೨೮

ತಡೆಯದಾ ಪಾತಕಮಿವರ್ಗಳ
ನೆಡೆವಿಡದೆ [3]ಪಿ[3]ಡಿದೆಳ್ದು ತಂದೀ
ಯೆಡೆಯಲಿಕ್ಕಿತ್ತಡಸಿ ನಿರಯಾರ್ಣವಮುಖಾಗ್ನಿಯಲಿ
ಒಡೆಯ ಸಾನಂದೇಶ ಬಿನ್ನಪ
ವೊಡರಿಸುವುದಿನ್ನಾವುದೇಂ ನೀಂ
ನುಡಿವುದೆಂದಡಿಗೆಱಗಿ ಮೈಯಿಕ್ಕಿರ್ದನಿರಲಣ್ಣ ೨೯

ಮಾಡಲಕ್ಕಿಲ್ಲುಳಿದ ಧರ್ಮಂ
ಮಾಡದೊಡೆ ಪಾಪಂಗಳಿಲ್ಲತಿ
ಗೂಢವಿದು ಶಿವಧರ್ಮವೆಲೆ ಕೌತುಕವಿಚಿತ್ರತರಂ
ನೋಡು ಮಗನೆ ಸನತ್ಕುಮಾರಕ
ರೂಢಿಯೊಳು ಶ್ರುತಿ ರಸನೆವಡೆದಂ
ನೀಡೆಯಲ್ಲ ಶಿವಾಣು ವಿಧಿಯೆಂದಱಿವುದಿದಱಿಂದೆ ೩೦

ಕೆಲರ್ಗೆ ಕೆಳೆ ಗಡ ಕೆಲರ್ಗೆ ಹಗೆ ಗಡ
ಕೆಲರ್ಗುದಾಸೀನಂ ಗಡಕ್ಕಟ
ಕೆಲರ್ಗೆ ಬಲವಿಲ್ಲಂ ಗಡೆನಿಸಲು ಜನ್ಮನಾಮಕ್ಕೆ

1 ಮದ್ಯ (ಖ) 2 ವ (ಖಗ) 3 ಹಿ (ಕ).

ನೆಲದೊಳಿವು ಮೊದಲಾದ ದ್ರೋಹಗ
ಳುಲಿದು ಪಂಚಾಕ್ಷರಿಯನೆಳಸಿ
ಗೆಲೆ ನರಕದೊಳಗಾಳ್ವ ಶಾಪೋಪೇತರೆತ್ತಱಂಗುಂ ೩೦

ಧರೆಯೊಳುಳ್ಳ ಮಖೌಘವಂತರ
ತರದ ಕ್ಷೇತ್ರಸುತೀರ್ಥನಿಚಯವ
ನಿರದಖಿಳ ಧರ್ಮಮುಮನೆಸಗಿದನುಳಿಯಲಳಿಯಲವು
ನೆರೆದಜಾಂಡ ಪ್ರಾಣಿವರ್ಗದ
ಕರಣದೊಳು ದಶವಿಧದಿ ಪುಟ್ಟುವ
ಪಿರಿದು ಪಾಪವಿದಳಿಯಲರಿದಿರವಣ್ಣ ಚಿತ್ರತರಂ ೩೧

ಹುಲಿಸಿಲಿಯಕ್ಷೇತ್ರಂಗಳೊಳು ಸಲೆ
ನಿಲೆ ನೆರೆದ ಬೀಜಂಗಳಿಂ ಕೋ
ಟಲೆಗುದಿದು ತಮಗುಳಿವುದಿಲ್ಲದೆ ಮಱುಗುವರು ನರರು
ತಲೆವೊಲದೊಳೀ ಐದೆ ಬೀಜದೆ
ನೆಲೆ ನೊಸಲ ಕಣ್ ಚೆಲುವ ಮುಖವೈ
ದಲೆವ ಜೆಡೆ ದಶಭುಜವೆನಿಪ ಹೆಸ್ಬೆಳಸಱಿಯರಕಟ ೩೨

ಅರಿದನಾಮಿಕ ವಿಪ್ರನೆಂದೆನ
ಲರಿದು ನಾರಕೀಸ್ವರ್ಗಿ ವಿವರಣೆ
ಯರಿದು ಪಾತಕಪೂತನದ ಮೊತ್ತಮವಿವೇಕಮವು
ಅರಿದು ಅಱಿಯುವೆಯಿಂದೆ ಪಂಚಾ
ಕ್ಷರಿಯನುಚ್ಚರಿಸಿದ ಬಳಿಕ್ಕಂ
ಪರಿಕಿಸುವೊಡಲ್ಲಿಂದೆ ಮುನ್ನವರಿವರೆನಿಪರೆಲ್ಲಂ ೩೪

ತರದ ಸಪ್ತಕ ಕೋಟಿಯೊಳಗಿದ
ನೊರೆಯದಿರಸಾಧಾರಣಂ ಗ್ರಹ
ನೆರವಿಯೊಳಗಿರ್ದಂತಿನಂ ಲೋಕಕ್ಕೆ ಕಣ್ಣಾದಂ
ಪರಿಕಿಸಲು ಶ್ರುತಿಯೊಳಗೆ ಸಾಮವ
ದುರು ಮಕಾರವದಕ್ಷರದೊಳು
ತ್ಕರುಷ ಪ್ರಣವದೊಳುಂ ತೃತೀಯಾಕ್ಷರವದೆಂತಂತೆ ೩೫

ನೆರೆದ ಶಾಸ್ತ್ರ ಮಹಾಜಗತಿಯಾ
ಗಿರೆ ಪ್ರಣವಮಣಿಗಳಸವೆಸೆಯಲು
ವರ ಸುವರ್ಣಂಬೊರೆದ ವೇದ ಶಿವಾಲಯದ ನಡುವೆ

ಹರ ಹೆರುಷ ನಿಷದುನ್ನತೋನ್ನತ
ಪರಮಪೀಠದೊಳೊಪ್ಪಿ ಪಂಚಾ
ಕ್ಷರಿ ಸ್ವಯಂಭುಜ್ವಲದ ಲಿಂಗವದೊಲಿದು ನೆಲಸಿಹುದು ೩೬

ಧರೆಯೊಳುದಯಿಸಿದದಱ ಲಿಂಗಕೆ
ಧರಣಿ ಕಾರಣವೆ ಸ್ವಯಂಭುಗೆ
ವರ ಪರಂಜ್ಯೋತಿಗೆ ನಿರಂಜನ ನಿಷ್ಪ್ರಪಂಚಕ್ಕೆ
ಪರಿಕಿಸಲ್ಕೆಂತಂತೆ ಪಂಚಾ
ಕ್ಷರಿಗೆ ಶ್ರುತಿ ಮಾತೆಗೆಯನಾದಿಗೆ
ನಿರುತ ವೇದಮಿವಲ್ತು ಕಾರಣವೆಂದಱಿವುದಿಂದೆ ೩೭

ನಿರವಯುವ ನಿರ್ನಾಮಿ ಲಿಂಗವ
ನರರೆ ಈ ಪೆಸರಿಂದೆ ಕರೆಯಲು
ಚರಿತದಿಂದೋಯೆನಿಪುದಘಟಿತಘಟನ ವಿಧಿಮಂತ್ರಂ
ಶರಣ ಕೇಳಿಮ್ಮಂದಿಗರ್ಗೀ
ಪರಮ ಪಂಚಾಕ್ಷರಿಯ ವರ್ಣನ
ವರಿದು ಗಿರಿಜಾವರನುಳಿಯಲೆಡಬಡಕರೆಂದೆನಿಪ ೩೮

ಪದೆದು ಪ್ರಾಸಂಗೀಕವಾಗೀ
ಸದಮಲಾಣುವಿನುನ್ನತಾಧಿ
ಕ್ಯದ ಮಹಿಮೆಯೊಳಗಣುವಿನನಿತಱಿಕೂಳಯುತ ಭಾಗೆಯೊಳು
ಒದವಿದೀ ಪಲ್ಲವ ಸಹಸ್ರಾಂ
ಶದನಿತೆನ್ನಿಂದಱಿಯಲಾಯ್ತಂ
ತದನುಸುರ್ದನೆಲೆ ಮಗನೆ ಮೇಲೊಗವಚ್ಚರಿಯಸೊರೆವೆಂ ೩೯

ಅಂದು ಪಂಚಾಕ್ಷರಿಯ ಕತದಿಂ
ಬೆಂದರೀ ನಿರಯದೊಳುಮಿವರೆಂ
ದಿಂದುಜೂಟನ ಸೂನುಗಿನಸೂನೊರೆದೊರೆಗಳಣ್ಣ
ಸಂದವಾ ಪ್ರಾಣಿಗಳ ಕಿವಿಯೊಳು
ನಂದಿಸಿದವಾ ನೋವನಾಗಳೆ
ಪೊಂದಿಸಿದವೀಶ್ವರಗಣತ್ವವನವರ್ಗೆನಲ್ಕಮಮ ೪೦

ಮನದೊಳಿರ್ದುದು ತಾನುವಲ್ಲಿಗೆ
ನೆನದು ಬಂದುದುವದು ಸಮಾಹಿತ
ವೆನಿಪಲಂಕಾರಾರ್ಥವೆನಿಸಿರ್ದುದುವೆನಲ್ಕಾಹಾ

ವಿನುತನಂತಾರ್ಕದ್ಯುತನ ನಿಯ
ತನ ನಿರಾಶನ ನಿರ್ಮಮನ ಜಿತ
ಮನಸಿಜನ ಘನತರವಿಲಾಸನ ನಿಷ್ಕಪಟ ಮನನ ೪೧

ಸರಿದಲಗು ತಾಂ ಮರಳೆ ಕರದೊಳು
ನೆರೆದ ಮಾಳ್ಕೆಯೊಳರ್ಕನಂದನ
ನೊರೆದ ಮಾತದು ತನ್ನ ಪ್ರೈ ತನ್ನಚ್ಚಿದೆನಲಣ್ಣ
ಪರಿಕಿಸಲ್ ತಾಂ ಮುನ್ನವೇಂ ಮರು
ಳರಸರಾಳಿವನಲ್ಲನೋ ಮೇಣ್
ಮರುಳೆ ಸಾನಂದಾಂಕನಲ್ಲನೊವೆನಲಳಿದು ಕಳಿದು ೪೨

ಹರನೆ ಶಿವನೇ ಶಂಭುವೇ ಶಂ
ಕರನೆ ಶಾಂತನೆ ಶರ್ವನೇ ಪುರ
ಹರನೆ ಕಲ್ಯಾಣದನೆ ಕಲ್ಯಾಣಾಂಕನೇ ವರನೆ
ಗುರುವೆ ಸರ್ವಜ್ಞನೆ ಸದಾರನೆ
ಕರುಣಿಯೇ ಕರುಣಾವರಣನೇ
ಶರಣು ಶರ್ವಾಣೀಧವನೆ ಕರುಣಿಸು ಕರುಣಿಸೆನುತಂ ೪೩

ಗುರುವನಾಥರ ನಾಥ ಗುರುವಂ
ಗುರುವನಾಥರ ಬಂಧು ಗುರುವಂ
ಗುರುವನಾನತಪಕ್ಷ ಗುರುವಂ ಗುರುವನವನಂದು
ಗುರುವನಮರನಿಧಾನಗುರುವಂ
ಗುರುವನಮಳ ಗುಣಾಂಕಗುರುವಂ
ಗುರುವನೆಮ್ಮಯ ಪರಮಗುರುವಂ ನಮಿಸಿ ಗಣನಾಥಂ ೪೪

ಪರಮ ಪಂಚಾಕ್ಷರಿಯನೆಮ್ಮಂ
ಪೊರೆವ ಪಂಚಾಕ್ಷರಿಯನಖಿಳ
ಕ್ಕರಸು ಪಂಚಾಕ್ಷರಿಯನಾ ಪಂಚಾಕ್ಷರಿಯನಾಗಂ
ಕರೆದು ಪಂಚಾಕ್ಷರಿಯನವನೆರ
ದೆರದು ಪಂಚಾಕ್ಷರಿಯನದನೊರೆ
ದೊರೆದು ಶ್ರೀಪಂಚಾಕ್ಷರಿಯನವನಮಳವಾಕ್ಯಗಳಿಂ ೪೫

ನಮಶ್ಶಿವಾಯ ನಮಶ್ಶಿವಾಯ
ನಮಶ್ಶಿವಾಯ ನಮಶ್ಶಿವಾಯ
ನಮಶ್ಶಿವಾಯ ನಮಶ್ಶಿವಾಯ ನಮ ಶಿವಾಯ ನಮಃ

ನಮಶ್ಶಿವಾಯ ನಮಶ್ಶಿವಾಯ
ನಮಶ್ಶಿವಾಯ ನಮಶ್ಶಿವಾಯ
ನಮಶ್ಶಿವಾಯ ನಮಶ್ಶಿವಾಯ ನಮಶಿವಾಯೆನುತೆ ೪೬

ವರಶಿವಾಣುವಿನಾದಿಯೊಳು ಹದಿ
ದೆರಡು ಹರನಾಮಂಗಳಿರಲು
ಚ್ಚರಿಸುತೀ ಕ್ರಮದಿಂದೆ ವಿಧಿವಿಧಿಯೊಳು ಕರುಣೆಯ
ಮರಳಿ ಮರಳುಚ್ಚರಿಸಿಯುಬ್ಬು
ಬ್ಬೊರೆದ ಪಾತಕ ರೂಪುಗಳುಮಂ
ನರಕಿ ಜೀವಿಗಳೆನಿಪ ಪೆಸರಂ ತೊಡೆತೊಡೆದು ಮಹಿಮಂ ೪೭

ಅರಸುನರಕದೊಳಾ ಪ್ರಧಾನಕ
ನರಕದೊಳು ನಾಯಕನರಕದೊಳು
ಪರಿವಾರನರಕದೊಳು ಬಿನುಗುಗಳೆನಿಪ ನರಕದೊಳು
ನೆರದವರ್ಗೆ ಗಣನಾಮ ಉರಗಾ
ಭರಣನಿಭತನುವಾಗೆ ಹರಹರ
ಯಿರದೆ ಪ್ಪೈಯಿಕ್ಕಿಕ್ಕಿ ತನ್ನಡಿಗಡಿಗಡಿಗೆ ಮೆಱೆಯೆ ೪೮

ಕೂಡೆ ದಶಭುಜರಾದರೆಲ್ಲರು
ಕೂಡೆ ಪಂಚಾನನರೆನಿಸಿದರು
ಕೂಡೆ ನೋಡ ತ್ರಿಪಂಚಲೋಚನರೆನಿಸಿದರುಮವರೆ
ಕೂಡೆ ಶೂಲಾಯುಧರು ಶಿವಶಿವ
ಕೂಡೆ ಹರಿನಯನಾಂಘ್ರಿಯುಗಳರು
ಕೂಡೆಯಜಶಿರಕರರೆನಿಸಿಯಿರೆ ಯಮನಿದಿರೊಳವರಂ ೪೯

ನೋಡಿ ಯಮನಲ್ಲಳ್ಕಿರಲು ನಡೆ
ನೋಡಿ ಮೃತ್ಯುಸಮೇತರಲ್ಲಿರ
ದೋಡೆ ದೂತರ್ಗೀತರಂತಕ ಬೊಂತಕ ಪ್ರತತಿ
ನೋಡೆ ನರಕವದೃಶ್ಯವಾಯ್ತುರೆ
ಕೂಡೆ ಶಿವಮಯವಾಗಲಿಳೆ ನಲಿ
ದಾಡೆ ರುದ್ರರು ರುದ್ರಕನ್ನೆಯರಲ್ಲದಿಲ್ಲೆನಿಸಿ ೫೦

ನಡನಡುಗಿ ದೂತರುಗಳೆಲ್ಲರು
ಪಿಡಿದ ಕೈದುವ ಮಱೆದು ಬಿಡುತಲಿ
ಮೃಡನ ರೂಪನೆ ತಳೆದು ರುದ್ರರ ಕಂಡು ಭಯಗೊಂಡು

ಕೆಡದು ಬೀಳುತ್ತೇಳುತೋಡುತ
ಬಿಡುತ ಬಾಯ್ಗಳನಂತಕರುಗಳು
ಕಡೆಯದಿನವಾಯ್ತೆಮಗೆನುತ್ತಡಿಗಡಿಗೆ ದೆಸೆಗೆಡೆದು ೫೧

ಬಗಿದು ಬಗಿದಾಗಸವದೊರ್ಮೆಯೆ
ಮಿಗೆ ಬಯಲ ಬೞಿದಾಗೆ ಪುಷ್ಪಕ
ವೊಗೆದವಾ ರುದ್ರಾಂಗನಾ ಚೋದಿತವಸಂಖ್ಯಾತಂ
ನೆಗೆವ ಪಂಚಮಹಾಸ್ವನವನುೞಿ
ತೆಗೆವ ವೃಷೆವೃಷೆ ಶಬ್ದವಂತ
ಲ್ಲುಗುವ ಪೂಮಳೆವೆರಸು ಗಳಗಳನಿಳಿದಿಳಿದು ಬಂದು ೫೨

ಎನಗೆ ತನಗೆಂದೋರ್ವರೋರ್ವರ
ನನಘೆಯರು ಕೈವಿಡಿದು ತೆಗೆತೆಗೆ
ದನುಮಿಷರು ಯೆವೆಯಿಕ್ಕದೀಕ್ಷಿಸೆ ತೊಡೆಯೊಳಳವಡಿಸಿ
ಇನಿಯಮಧುರಾಳಾಪೆಯರು ಸಲೆ
ಮನಸಿಜಾಂತಕನಾಜ್ಞೆ[1]ಯಿಂ[1] ಪಾ
ಲನೆಯುರಲಘು ನಿತಂಬೆಯರು ಕೋಮಳೆಯರಮಳೆಯರು ೫೩

ಮುಗುಳ್ದು ಮುಗುಳ್ದೊಯ್ದಲ್ಲಿ ನೆರೆದರು
ಜಗವನತಿಗಳೆದಿರ್ಪ ಲೋಕದೊ
ಳಗಜೆಯಾಣ್ಮನ ಸುಖನಿವಾಸವೆನಿಪ್ಪ ಲೋಕದೊಳು
ನಿಗಮ ವಾಕ್ಯಾರಂಭಣಕ್ಕಗ
ದಗಣಿತಂ ಹರಿಯಜಸುರಾದ್ಯಾ
ದಿಗೆಯೆನಿಪ ನಮ್ಮವರ್ಗೆ ತಾನೆ ತವರ್ಮನೆಯುಮೆನಿಪ ೫೪

ಕೂಡಿದರು ಸಾಮೀಪ್ಯ ಪದವಿಯೊ
ಳಾಡಿದರು ಗಣನಾಥರೊಳು ಸಲೆ
ಹಾಡಿದರು ಸಾನಂದನಂಕಿತದಂಕಮಾಲೆಯುಮಂ
ನೋ[2]ಡು[2] ರುದ್ರಾಂಗ[3]ನೆ[3]ವೆಸರುಮಿವು
ರೂಢಿ ಮೋಕ್ಷಾಂಗನೆಯರೆಂದೞಿ
ಗಾಡಿಕಾರ್ತಿಯರೊಳು ಶಿವಾನಂದಾತ್ಮರೆನಿಸಿರಲು ೫೫

---

[1] ಯಂ (ಕ) [2] ಡ (ಖ) [3] ನೆಯ (ಖ)

ಗರುಡರಾದಿತ್ಯರು ಮುನೀಶ್ವರ
ರುರಗರಪ್ಸರಿಯರು ಮರುದ್ಗಣ
ವರರು ಸಿದ್ಧರು ಖೇಚರರು ಕಿಂಪುರುಷರೆನಿಪವರು
ಸುರರು ಸುರಪ ಸುರೇಜ್ಯರಬ್ಜಜ
ಹರಿಯೆನಿಪರೊಳಗಾದರೆಲ್ಲರು
ನೆರೆದು ತಮ್ಮೊಳು ವಾದಿಸುತ್ತಂ ನುತಿಯಿಸಿದರೊಲಿದು ೪೮

ನರಕಗಳಿಗಿಂತೀಶ್ವರೋಪಮ
ದಿರವು ದಶಭುಜ ಪಂಚವಕ್ತ್ರಂ
ಸುರಕರೋಟಿಯು ನೊಸಲ ಕಣ್ಜಡೆ ಚಂದ್ರಕಳೆಯೆನಿಪ
ಪರಮಮಂಗಳ ವೇಷದೊಪ್ಪಂ
ಬೊರೆ[1]ಮು[1] ಗಣಪದವಕಟ ದೀಕ್ಷಾ
ವಿರಹಿ ಭವಿಗಳ ನೆರವಿಗಘಟಿತವೆನಲಜಿಂವರಲ್ಲಿ ೪೯

ಇವರ ನೆನಹಿನೊಳಿರಲು ಮಾನಸ
ವಿವರ ನೋಟದೊಳಿರಲು ಚಾಕ್ಷುಷ
ಮಿವರ ನುಡಿಯೊಳಗಿರಲು ವಾಚಿಕವೆಸಗಿತೇ ಸಮಯಂ
ಇವರ ವೇಧೆಯೆ ವೇಧೆ ದೀಕ್ಷಾ
ಗವಿಯೆ ಸದ್ಗುರುಕರುಣದಿಂದೊಗೆ
ದಿವರ್ಗಸಾಧ್ಯಮದಿಹಪರಂಗಳೊಳಾವುದಿಲ್ಲಱಿಯ ೫೦

ಖರಕರನೊಳೇ ತಮವದಕ್ಕಟ
ಉರಿಯೊಳೇ ಬೂರಂಗಳೆಲೆಯಿ್ಾ
ಶರಣರೊಳು ನಿರಯಂಗಳೇ ಹುಃ ಘಡಯಿದೇನಣ್ಣ
ಉರಗಕುಂಡಲನಣುಗರೊಳು ಶಂ
ಕರ ಶರಣಸೇವಕರೊಳಮಳರೊ
ಳರಸುಗಳೊಳನುಪಮರೊಳೀ ಪಂಚಾಕ್ಷರಾತ್ಮರೊಳು ೫೧

ಸುರನಗಂ ಚಂದನಮು ತಮ್ಮಂ
ತಿರವನೆಸಗಲ್ಕರಿಯವಾ ಮುಂ
ಬೊರೆದ ಸಾಜಮನಾ ಸ್ವರೂಪಮನಳಿಯುವಂತಲ್ತು

1 ದ (ಕ)

ನಿರಯದೊಳಗೋರಂತೆ ನವೆದುಂ
ಬರನಿವಂ ಸಾನಂದ ಶರಣಂ
ಪರಿಕಿಸಲ್ ತನ್ನಂತೆ ಮಾಡಿದನಱಿದು ಗಳಪದಿರು ೬೦

ಕೆಮ್ಮನೊರ್ವರ್ಭಕನಜಾಂಡವ
ನೊಮ್ಮೆ ಸರವೆಸಗಿಕ್ಕಿಯಾಡಲು
ನಮ್ಮ ಗೋಷ್ಠಿಯೊಳಂದು ಅಂಡಾಭರಣನೆನಿಸಿರನೆ
ಸುಮ್ಮನಿರ್ದಂತಿರ್ಪರೊಲ್ಲದೆ
ಬೊಮ್ಮನಂ ತೃಣವಂ ತೃಣವನೀ
ಬೊಮ್ಮನಂ ಮಾಡುಪರೊಲಿದೊಡೆಲೆ ನಾತಿಭಾರವಱಿ ೬೧

ಕೆಲರು ಕರ್ಮದಿನೆಂಬರಕ್ಕಟ
ಕೆಲರು ಬೊಮ್ಮದಿನೆಂಬರಯ್ಯೋ
ಕೆಲರು ಭೋಗಾದೇವ ಮೋಕ್ಷವದೆಂಬ ಡೊಂಬುಗಳು
ಗೆಲಲು ನಿರಯ ಮಹಾಸಮರವಂ
ಸಲಲು ಮುಕ್ತಿಯೊಳಣ್ಣ ವೊಗ್ಗೇ
ತೊಲಗು ನಿಂಬಿಯ ಸೂಱೆಯೇ ಗಣಿಸದಿರುಮವ[1]ನಿ[1]ಲ್ಲಿ ೬೨

ಕ್ರಮದೆಯೂಡದೆ ಬಿಡಧು ಕರ್ಮಂ
ಸಮನದೆಲ್ಲರ್ಗೆಂಬ ಶಾಸ್ತ್ರ
ಭ್ರಮೆಯನಾಡದಿರಯ್ಯ ಶಿವಧರ್ಮಪ್ರಸಂಗದೊಳು
ಕ್ರಮದೆ ತ್ರೈಕಾಲದೊಳು ನಿರಯದೊ
ಳಮರ್ದುಣಲು ಬೇಡಿದರನೆಲ್ಲರ
ನಮರಗಣರೆನಿಸಿಟ್ಟನಿನ್ನಾ ಕಥೆಗಳೇಕಿಲ್ಲಿ ೬೩

ಮರುಳೆ ನಿಗಮಾಗಮ ಪುರಾಣಂ
ಮರಳಿ ಶಾಸ್ತ್ರ ಸಘೋತವಖಿಳ
ಕ್ಕಿರದೆ ಕರ್ಮಮವಶ್ಯಮನುಭೋಕ್ತವ್ಯಮೆಂದೆಂದು
ಒರೆದ ಚರ್ವಿತ ಚರ್ವಣಂಗಳು
ನೆರೆದು ಮತ್ತಿನ ನಮಗೆಯುಲ್ಲದೆ
ಪುರಹರನ ಮದಕರಿಗಳಿದಿರೊಳು ಸಲ್ಲದಿವೆ ನೋಡ ೬೪

---

1 ನ (ಖ)

ಧರಣಿ ದಿವಿಜನದೋರ್ವವೈಷ್ಣವ
ನೊರೆದ ಶಾಂಡಿಲ್ಯಾಂಕ ಸಂಹಿತೆ
ಗಿರದೆ ನರಕಕ್ಕಿಳಿದ ನರನಂ ತೆಗದನೇಯಿಾತಂ
ನರಕವೀರೈದುಗಳು ಭೃಗುವಿಂ
ಬರೆ ಶನಗೆ ಪರಿಹರಿಸಿದನೆ ಹರಿ
ಗಿರಿಗಳಳವೇ ನರಕವಂ ಮಂ ಮಸ್ಮದಾದಿಗಿದಂ ೬೫

ಬೇಕು ಬೇಕು ಸಮಾನ ಉರುಡು ಪಿ
ನಾಕಿಯೊಡನೊಪ್ಪದೆ ನಮಗೆ ಬೆಂ
ದೀಕರಿದ ಮೊಜಿತಗಳೀಗಕಟ ವಿಚಾರಿಸಲು ಮತ್ತೆ
ಸಾಕು ಬಕ್ಕಟ ಬಯಲ ಹೆಮ್ಮೆ ಕೃ
ಪಾಕರನನಘನಿದಿರ ಲಿಂಗದ
ನೇಕೆ ಬಿಡೆ ತುತಿಯಿಸಿ ಕೃತಾರ್ಥತೆವಡೆಯಿಮೆಂದೆನುತಂ ೬೬

ದಯದ ಚಿಂತಾರತ್ನವೆನಿಸುವ
ದಯದ ಸುರಭೂಜಾತವೆನಿಸುವ
ದಯದ ಕಾಂಚನ ಕುಧರವೆನಿಸುವ ದಯದ ನಿಧಿಯೆನಿಪ
ದಯದ ಸಿರಿಯುಂ ದಯದ ತವರುಂ
ದಯದೊಜಿತೆಯುಂ ದಯದ ಮಡುವುಂ
ದಯದ ಬಾಂದೊಜಿಯುಂ ದಯದ ವನನಿಧಿಯುಮೆಂದೆನಿಪ ೬೭

ಕರುಣಿ ಜಯ ಕರುಣಾತ್ಮವರ ಜಯ
ಕರುಣಿ ಜಯ ಕರುಣಾವಸಥ ಜಯ
ಕರುಣಿ ಜಯ ಕರುಣಾಳು ಜಯ ಶಂಕರಶರಣು ಜಯತು
ಕರುಣಿ ಜಯ ಕರುಣಾಭರಣ ಜಯ
ಕರುಣಿ ಜಯ ಕರುಣಾವರಣ ಜಯ
ಕರುಣಿ ಜಯ ಕರುಣಾವಕುಂಠನಮೂರ್ತಿ ಜಯ ಜಯತು ೬೮

ನರಕ ಶಾರ್ದೂಲಾರಿಯುಘೆಯುಘೆ
ನರಕ ಕರಿಪಂಚಾಸ್ಯವುಘೆಯುಘೆ
ನರಕ ಬಲವ ನೃಹರಿ ಶಿರಜಿತ್ ಶರಭವುಘೆಯುಘೆಯ್ಯೆ
ನರಕ ಕಂದರ್ಪಾರಿಯುಘೆಯುಘೆ
ನರಕ ಮೃತ್ಯೋ ಮೃತ್ಯು ವುಘೆ ವುಘೆ
ನರಕ ವಿಷಸಂಹರಣವುಘೆಯುಘೆ ನಿತ್ಯ ವುಘೆ ವುಘೆಯ್ಯೆ ೬೯

ಶರಣಮಳ ಶರಣ ಭವಸನ್ನಿಭ
ಶರಣಮಳಗುಣ ನಿಳಯ ಶಂಕರ
ಶರಣು ಶರಣ ಸಮಿಾಪಶರಣಾಗ್ರಣಿ ಶರಣು ಶರಣು
ಶರಣು ಶರಣು ಪಿತಾಮಹಾರ್ಚಿತ
ಶರಣು ಶರಣು ಮುರಾರಿಸೇವಿತ
ಶರಣು ಶರಣಖಿಳಾರ್ತಿಹರ ನಿರುಪಮ ಶರಣು ಶರಣು ೭೦

ಎಂದು ತಮ್ಮಂ ತೆಗಳಿ ನಿಂದಿಸಿ
ಸಂದು ಪೊಗಳ್ದು ಪರಾರ್ಥನಿಧಿಯುಂ
ಚಂದದಿಂ ವಚನಾರಚಿತಪುಷ್ಪೋಪಹಾರದೊಳು
ನಂದನೋದ್ಭವಕುಸುಮವರುಷವ
ನೊಂದೆಯರ್ಚಿಸಲೊಪ್ಪಿರಲು ಸಾ
ನಂದ ಶೈವಾನಂದ ಸಂದೋಹಾಂಕನವನಂದು ೭೧

ವಸುಧೆ ಗುಡಿಯುಂ ಕಟ್ಟಿಯಂತನು
ಮಿಷಜ[1]ನಂ[1] ಗುಡಿಗಟ್ಟಿಯುರಗರ
ಮಿಸುಗುವವನೀ ಚಕ್ರವುಮ್ಮಹದಿಂದೆ ಗುಡಿಗಟ್ಟಿ
ಒಸಗೆವಱತಿಯುಂ ಪೊಯ್ಯ್ದು ಮಂಗಳ
ವಸದನಂಗೊಂಡವುಮೆನಲು ಮಿಗೆ
ಪಶುಪತಿಯ ಕುವರನ ಮಹೋತ್ಸವವೇನೆಸಗದಂದು ೭೨

ಧರೆಯೊಳುಳ್ಳ ಮಹಾಗಣಂಗಳು
ಉರವಣಿಪ ಉತ್ಸವಕೆ ಮರುಳ್ಗೊಂ
ಡಿರದೆ ಮಂಗಳತೂರ್ಯವಾವುಪ್ಪರಗುಡಿಗಳೆಸೆಯೆ
ವರ ವಿಭೂತಿಯ ವೀಳೆಯವನಾ
ದರಿಸಿ ಕೇಳಿಕೆಮಾಡಿ ಹರ ಹರ
ಪರಮ ಸೀಮೆಯ ಸುಖದೊಳೋಲಾಡುತ್ತಮಿರಲೆಲ್ಲಂ ೭೩

ಪರಮ ಸಾನಂದಾಂಕ ಚರಿತೆಯು
ವರಮಹಾರ್ಥಾಳಾಪನದೊಳು
ಬ್ಬರಿಪ ಶೈವಾನಂದ ಸಂದೋಹಾವಗಾಹದೊಳು

---

1 ಗಂ (ಕ)

ನೆರೆದು ನೆರೆದಲ್ಲಲ್ಲಿ ಹರ ಹರ
ಕರೆದು ಕರೆದಲ್ಲಲ್ಲಿ ಹರ ಹರ
ಪೊರೆದು ಪೊರೆದಲ್ಲಲ್ಲಿ ಹರಹರಯೆನುತಿರಲು ಮೆಱೆದಂ ೭೪
ಕುಸಿದು ನಿಲ್ಲದ ಜಯ ಜಯಸ್ವನ
ವಸದಳದ ವೃಷೆಯುಘೇರವಂ ಪಸ
ರಿಸಿದ ಹರ ಹರ ರಾವಮುಂ ಮುಪ್ಪುರಿಸಿಯೆಡೆಬಿಡದೆ
ರಸಿಯನಾಚ್ಛಾದಿಸಿದವಾಹಾ
ಗಸವನಾಚ್ಛಾದಿಸಿದವಾಹೆ
ಣ್ದೆಸೆಯನಾಚ್ಛಾದಿಸಿದವಾಹೆನೆ ದಶದಿಗಂತಮವಂ ೭೫
ಸುರಿದ ಪೂಮಳೆವೆಳಗಿನಿಂ ಶಂ
ಕರ ಶರಣರೊಳು ನಗೆವೆಳಗಿನಿಂ
ಕರುಣೆಯುನ್ನತಕೀರ್ತಿವೆಳಗುಗಳಿಂದೆ ಜಗವನಿತುಂ
ನೆರೆದ ಚಂದ್ರಾತಪದ ಘಟ್ಟಿಯ
ನಿರದೆ ಖಂಡಣೆಸಿಟ್ಟ ನಯನದ
ನೆರವಿಯೆಂಬೋಲ್ ಧವಳದಿಂದೊಪ್ಪಿರ್ದವೆನೆ ಮೆಱೆದಂ ೭೬
ಸತ್ಯ ಶರಣನ ಕೀರ್ತಿಲತೆ ಮೊದ
ಲಿತ್ತ ಕಾಲಾಗ್ನೀಶಭುವನದೊ
ಳತ್ತಲಾ ಕುಡಿ ಫರ್ವಿ ಸಾಂಬಪುರೋಪವನವೆನಿಸಿ
ಸುತ್ತಿ ದಿನ ಸಸಿ ಪತ್ರವನುಮಿಷ
ಮೊತ್ತಿ ಗರಪುಷ್ಪಕವೆ ಪುಷ್ಪಮ
ದೊತ್ತರದಜಾಂಡಾಳಿ ಫಲವದಕೆಸದವೆನೆ ಮೆಱೆಯೆ ೭೭
ಬಾಡಿದಂ ಬಾಯಾಱೆ ಮುಖವಿ
ಪ್ಪೋಡಿದಂ ಯಮನಂದು ಶಿವ ಶಿವ
ಪಾಡಳಿದು ನಿಜಸಿರಿಯ ಹಾನಿಗೆ ಮಲಮಲನೆ ಮಱುಗಿ
ರೂಡಿಯಂ ಸಾನಂದದೇವನ
ಗಾಡಿಯಂ ಸಂಪದವನೆಲೆ ನಡೆ
ನೋಡಿಯಿಂತೆಂದಂ ಮಹಾತ್ಮ್ಯಯಿದೇನನೆಸಗಿದಿರಿ ೭೮
ಪಾರದಾರಿಕರಾರ್ಯನಿಂದಕ
ರಾರುಮಾಘಾತಕರು ಮಾನಕ
ರೂರುಗಿಚ್ಚಿಟ್ಟವರ್ಗಳಾಚಾರಾತಿ ಗುರುಖಳರು

ಚೋರರವಿಚಾರರು ದುರಾತ್ಮರು
ಮಾರಣಾದಿ ವಿನಿಂದ್ಯಕರ್ಮರು
ಮಾರಮಥನಾಚಾರ ವಂಚಕರಾಸವಪ್ರಿಯರು ೭೯

ದೇವಪಿತೃ ಮಾತಾಭಿಘಾತರು
ದೇವಸತಿಸುತ ಮಿತ್ರಘಾತರು
ದೇವಪತಿ ಶರಣಾಗತಾರ್ಥರು ಗುರುವಿಘಾತಕರು
ದೇವ ಶೈವಾಚಾರಘಾತರು
ದೇವ ಶ್ರೀಭಸಿತಾಂಗಘಾತರು
ದೇವ ಶಿಶುಗೋಬ್ರಹ್ಮಹಾ ಮಾತಾಗಮನರತರು ೮೦

ನೋಡಲಿವರ್ಗೆ ಗಣತ್ವಮಂ ಸಲೆ
ರೂಡಿಯೊಳು ಸಲಿಸಿದಿರಿ ಶಿವ ಶಿವ
ನೋಡಿದಡೆ ಮರುಳರವೊಲಿದಿರೆ ಪುರಹರಂಗರಿದು
ಕೂಡಿ ಮಂಗಲವೆಸಗಿದಿರಿ ನಿ
ರ್ಜೋಡನೆನ್ನಧಿಕಾರಕಕ್ಕಟ
ಮಾಡಿದಿರಿ ಕೂಡಿದಿರಿ ಪ್ರಳಯವನೇವೆನೆನಗೆನುತಂ ೮೧

ನಿರಯಕೆರಡೇ ಪಗೆಗಳೆಂದುಂ
ಶರಣರುಂ ಪಂಚಾಕ್ಷರಿಯುಮೆಂ
ದೊರೆದ ವೃದ್ಧಾಪ್ತಾಖ್ಯವಾಕ್ಯವನೆಣಿಸಿರುಳುಪಗಲುಂ
ಎರಡುಯೆರಡೆಂದಂಜಲಂಜಲು
ಯೆರಡಱಿಂ ಕೇಡಾಯ್ತು ತಪ್ಪದೆ
ಪರಿಕಿಸಲುವಾನಾರ್ಗೆ ಬಾಳ್ತೆಗವಿನ್ನೆನು[1]ತ[1] ಮತ್ತೆ ೮೨

ಸುರದನುಜ ಮನುಜಾದಿಗಳಿಗೀ
ನಿರಯುದಬುವಂ ತೋಱಿಯಂಜಿಸಿ
ಕರಮೆ ದೋಷಕ್ಕೆಱಗಲೀಯದೆ ನಡಯಿಸುತ್ತಿರ್ದೆಂ
ಆರಸು ಮಾರ್ಗದಿ ದಾಳಿಯಾಗಿರ
ದುರವಣಿಸಿ ಬಂದೀ ವಿಧವನೆ
ಗಿರಿಸಿದಿರಿ ಹರನಾಜ್ಞೆಯಿಂದವನಱಿಯಿರೇ ಮುನ್ನ ೮೩

---

1 ತೆ (ಖ)

ಹರನಿರಿಸಲಾಗಿರ್ದನುಳಿದ
ಗ ೯ರಿದು ಹರಿಮುಖ್ಯಾದಿಯೆಂದುಂ
ಹರಿದು ಬಹುದಾಪದವಳಿಯಲಿಲ್ಲಿಗೆ ಮದಾಜ್ಞೆಯಲಿ
ಪರಮನಾಧಿಕ್ಯಂದವಿಂತುಟು
ಕರುಣಿ ನೀವಱಿಯದುದೆಮೆನಲಱಿ
ವಿರಿಯೆನಗೆ ಹದನೇನು ಬೆಸಸೆ[1]ನಲುತ್ತರಂ[1]ಗುಡದೆ ೮೪

ಮುಗುಳುನಗೆಯುಂ ನಗು[2]ತುವೊ[2]ಯ್ಯನೆ
ಜಗಳ್ದು ಮಗುಳ್ದುಸುರ್ದೊಂದು ನುಡಿಯಂ
ಮಗನೆ [3]ಪೋಪೆ[3]ವೆ ಧರ್ಮನೆ ನೀಂ ಸುಖದೊಳಿರಿಮೆಂದು
ಪೊಗಳ್ದು ಬೀಳ್ಕೊಟ್ಟಿರಿಸಿ ಮಗುಳ್ದಾ
ಮ[4]ಗಮುಗಿ[4]ಪ ಪುಷ್ಪಕವನೇಱಿದ
ನಗಜೆಯಾಣ್ಮನ ಶ್ರೀಪದಾಲೋಕನ ರತೇಪ್ಸಿತನು ೮೫

ಒಡನೆ ನೆರದಿರ್ದೊಪ್ಪಿದೋಲಗ
ದೊಡನೆ ಪುಷ್ಪಕದೊಳು ವಿರಾಜಿಸಿ
ಪೊಡೆವ ನಿಸ್ಸಾಳಾದಿ ಗಮನೋಚಿತವಱಿಗೆ ನಾಣ್ಚಿ
ಒಡೆಯನವರೊಳಗಾನದೆಸಱಿ
ನೊಡರಿಸಿದಮಾ ಕಜ್ಜವಾವುದು
ಬಿಡಿಮಿದನುಚಿತವೆಂದು ಮಾಣಿಸಿ ಮಾನನಿಧಿ ಮಹಿಮಂ ೮೬

ಉಲುಪನಾಱಿಸಿ ಮೆಲ್ಲನಲ್ಲಿಂ
ತಳರ್ದು ಗೆಲೆಯಭಿಮಾನಿ ಜಂಗಮ
ದೊಲವದುಳ್ಳಂ ಭಯುರಸಾರ್ದ್ರೀಕೃತಸುಭಕ್ತಿಯುತಂ
ಸಲೆ ಪದಾರ್ಥ ನಿಧಾನನುದ್ಯ
ನ್ಮಲೆವ ದೂಷಕಕುಲವಿಭಾಡನ
ನೆಲೆಲೆ ಭಕ್ತಜನಾರ್ತಿ ಹರ ಶಂಕರ ಶರಣಮಿತ್ರಂ ೮೭

ಒರ್ವನೇ ಶಿವಧರ್ಮದುಳುಮೆಯ
ನುರ್ವಿಯುಜೀಯೆ ನಿಮಿರ್ಚಿನೋಡಲ
ಗುರ್ವು ಸರ್ವಂಗರಿದೆನಿಪ ಕಾರ್ಯವಿವನೆಸಗಿದವಂ

---

[1] ನೆ ಮಱುಮಾತು (ಕ) [2] ತವೊ (ಕ) [3] ಹೋಹೆ (ಕ) [4] ಘುಮುಘ (ಕ)

ಉರ್ವಿದನೆ ಕೊ[1]ರ್ವಿ[1]ದನೆ ಜಗದೊಳು
ಜರ್ವಿದನೆ ಸುರ್ವಿದನೆ ಚರ್ವಿತ
ಚರ್ವಣವನೊರ್ವರೊಳು ಗರ್ವಿಸಿದನೆ ನಿಗರ್ವಿತನು ೮೮

ತಡೆಯದಾ ಮಾರ್ಗದೊಳು ಶರಣಂ
ನಡೆದು ಉಚಿತಜ್ಞಂ ಭವಾನೀ
ವ್ರೊಡೆಯನಂಘ್ರಿಯ ನೆಯ್ದಿ ಕಂಡೋಲಗದೊಳಮರ್ದಪ್ಪಿ
ಗಡಣವಮರಗಣಂಗಳೊಳು ಸಲೆ
ಮೃಡಶರಣನೆಸದಿರಲ್ಕತ್ತಲು
ಪೊಡವಿಯೊಳು ಮಾ[2]ರ್ತಂ[2]ಡನಣುಗಂ ನೋಡಿ ಬೆಱಗಾಗೆ ೮೯

ನೋಡಿ ತನ್ನಯ ಕಾರ್ಯವಂ ನೆಱೆ
ಕೂಡಿಯಾಂ ಬೆಸಗೊಂಡಡೇನುವ
ನಾಟದೆಲೆ ಚದುರಿಂದೆ ಸಾನಂದಂ ಮರುಳುಮಾಡಿ
ನೋಡ ಬಂದೆನೆನುತ್ತೆ ನಮಗೀ
ಕೇಡನೆಯ್ದಿಸಿ ಹೋದನಿದಕಿ
ನ್ನಾಡ ಬೇಹುದದೇನು ತಿಳಿಹೀ ವಿಸ್ಮಯವನೆನುತಂ ೯೦

ಶರಣನೀಕ್ಷಣೆಯಿಂದೆ ಮುನ್ನವೆ
ನಿರುತವಲ್ಲಿಂದಂ ಬಳಿಕ್ಕವೊ
ನರಕಿಗಳು ಪ್ರಮಥರ್ಕಳಾಗಿರ್ದೊಂದು ಚಿತ್ರವಿದು
ಹರವಿಮಾನಾಗಮನವುಂ ಪುರ
ಹರನಪುರ ವ್ರೊಗೆವಂದು ಬೇಗಮು
ಮರರೆ ಠಾಳಿಯ ವಿದ್ಯೆಯೋ ಮಾಹೇಂದ್ರಜಾಲವಿದೊ ೯೧

ಚಿತ್ರಗುಪ್ತಯಿದೇನು ಕೌತುಕ
ವತ್ತ ಸಾನಂದೇಶನೆಸಗಿತು
ಕೃತ್ರಿಮವ್ರೊ ವಿದಕೃತ್ರಿಮವ್ರೊ ಕಣ್ಮಾಯವ್ರೋ ಮೇಣು
ಚಿತ್ರವ್ರೋಯೆಂಬೊಂದು ಭ್ರಮೆಯುತಿ
ಚಿತ್ರಯಿನ್ನೂ ಮನದೊಳಿದೆಯೆಲೇ
ಕೃತ್ಯವೀಘನವಾರ್ಗೆ ಮತ್ತಿನ್ನೆಣೆಪೊಡಿನ್ನಾರ್ಗೆ ೯೨

---

1 ಖರ್ (ಕ) 2 ತಾರ್ಂ (ಗ)

ಎಂದು ಯೀವೃತ್ತಾಂತವೆಲ್ಲವ
ನಿಂದೆವೊಡೆಯಂಗಱಪದಿರ್ದೊಡೆ
ಸಂದರಾಜದ್ರೋಹಸಂಭವಿಸಿರ್ಪುದದನುಳಿಯಿಂ
ಇಂದು ಸಾನಂದಂಗಸಹ್ಯವಿ
ದೆಂದುಳಿದ ಟಕ್ಕಕ್ಕು ಶಿವಶಿವ
ಮುಂದೆ ಬರ್ಪುದನಱಿವರಾರೆಂದಿರದೆ ತ್ವರಿತಮನಂ ೯೩

ಪುರದ ಬಾಗಿಲ ಬೀಯಗಂಗಳ
ನಿರದೆ ನಿರಯದ ದಂಡಮುದ್ರೆಯ
ನಿರಿಸದೆಲ್ಲಾಸೀವಡಿಯಂ ತ್ರಿಕರಣ ಮೊದಲಿಗರಂ
ಬರಲು ತನ್ನೊಡವೇಳಿ ಮಿಕ್ಕಿನ
ಪರಿಜನವನಾಪುರಕೆ ಕಾಪಾ
ಗಿರಿಸಿ ಪಯಣಮೋದ್ಯೋಗಿಯಲ್ಲಿಂ ತಳರ್ದು ಪೊಱಮಟ್ಟು ೯೪

ಇದು ಪರಮ ನಂದೀಶರೊರೆಯಿಂ
ಪುದಿದ ಸಾನಂದೇಶಚರಿತದೊ
ಳಿದು ನರಕ ವಿಧ್ವಸ್ತಸಂಭವ ಸೂಚನಾಸಂಧಿ
ಪದೆದು ಪದ್ಮರ[1]ಸಾಂಕನಿಂ[1]ದಂ
ಗದಿಸಿದೊಳುಗನ್ನಡದೊಳೆಂಟನೆ
ಯದಿದೆ ಸಂದಿಯಿದಾರ್ತರಾರ್ತಿಹರವೆನಿಪ ಸುಸಂಧಿ ೯೫.

---

1 ಸಾರ್ಯರಿಂ (ಕ)

ಒಂಬತ್ತನೆಯ ಸಂಧಿ

ಮಹೇಶಾಸ್ಥಾನವರ್ಣನಂ

ಭಾಮಿನಿ ಷಟ್ಪದಿ

ರಾಗ—ಮಾಳವಗೌಳ॥ ತಾಳ—ಪಡಿಮತೆ

ಪಲ್ಲವ ॥ ಕರುಣಿ ಶ್ರೀಸಾನಂದನೊಡೆಯಂ
ಗಿರಿಜೆವರ ಗುರುರೂಪ ವಿಶ್ವೇ
ಶ್ವರನೆನಗೆ ಗುರುಭಕ್ತಿಯಂ ಕೊಡುಗಾದ್ಯರೊಲ್ಮೆಯನು

ಪದ ॥ ಶ್ರೀಶರಣಸಿಂಧುಪತಿಹಿಮಕೃ
ಚ್ಛ್ರೀಶರಣಸರಸಿರುಹದಿನಕೃ
ಚ್ಛ್ರೀಶರಣಕುಮುದೇಂದು ಶ್ರೀಶರಣೋಪವನಚೈತ್ರ
ಶ್ರೀಶರಣಸರಸಿಜಮರಾಳಂ
ಶ್ರೀಶರಣಗಂಗಾಸರಿತ್ಪತಿ
ಶ್ರೀಶರಣಕೈಲಾಸವಾಸಿ ಸದಾ ಕರುಣಿಸೆನಗೆ ೧

ಶರಣ ಕೇಳು ಸನತ್ಕುಮಾರಕ
ಎರಡೆ ಮಾತಿನೊಳೊರೆವೆನೆಲ್ಲರೊ
ಳಿರದೆ ನೆರೆದಂಡಾಳಿಯೊಳು ಪ್ರತ್ಯೇಕಪ್ರತ್ಯೇಕಂ
ಪರಿವಿಡಿಯೊಳೀರೇಳುಭುವನದ
ನೆರೆಯ ವಿಪ್ಣುವಲೋಕವ್ಪೊಟ್ಟಿಯ
ಲೊರೆ[1]ವ[1] ಮಾಳ್ಕೆಯೆನಿಪ್ಪನಂಡದೊಳಜೀವುದಖಿಳದೊಳು ೨

ನರರು ಸಮಜಾತಿಗಳುವೊಳಗಾ
ಗೆರಡುಮನೆಗವಿರಳದ ಬೆಮ್ಮರ
ನಿರ[2]ಿಕಾಗೆಂಬರು ಶುಭಾಶುಭದಾದಿ ಫಲಕ[2]ಗಿ[2]ದು
ಹರಿಪ್ರಮುಖ ಹದಿನೆಂಟುಜಾತಿಯು
ಸುರಸಮಾಜಕರೊಗ್ಗಿ ತಮ್ಮೊಳು
ನೆರೆದು ನೆಲಸಿರ್ಪಖಿಳಬೊಮ್ಮಾಂಡಂಗಳಿಂ ಮೇಲೆ ೩

[1] ದ (ಕ) [2] (ಬಿ) ಗ

ನೆರೆಯುವಾದಪ[1]ವೆಂಬ ಶಂಕೆ[1]ಯೊ
ಳಿರಿಸಿ ದಶಸಾಹಸ್ರಯೋಜನ
ಪರಿಮಿತದ ಬಿಡವಾಂತರಾಳವನುಳುಪಿರದೆ ಮತ್ತೆ
ವರತ್ರಿಕೋಟಿಯೊಳೊಂದಿಗೂಡಿ
ರ್ದಱುವತುಂ ಲಕ್ಷಗಳ ಯೋಜನ
ವೊರೆದುದಾಗಮವಜೀಂದನಿತನದನಜೀಯಲದಱಳವೆ ೪

ಕೀಳುಜಾತಿಗಳೆಂಬುದಂ ಶಾ
ಸ್ತ್ರಾಳಿ ಹೇಳುವ ಮಾತವಂ ಬುಧ
ಜಾಳವಜೀವಂತಂಡವೆನಿತನಿತೆಲ್ಲವಡಿಯಾಗಿ
ಬಾಲಹರಿಣಾಂಕಾರ್ಧಮಂಡಿತ
ಮೌಳಿ ಶೂಲಿ ಕಪಾಲಿ ಕಾಳೀ
ಲೋಲ ನೀಲಗ್ರೀವ ವಿಶ್ವಾಧಿಕ ಮಹಾಬುಡಿಯ ೫

ಲೋಕವಾಲೋಕನದಳವೆಯಾ
ಲೋಕ ವಾಙ್ಮನಕೆಲ್ಲಿಯದುವಾ
ಲೋ[2]ಕವತಿ[2]ತಿಷ್ಠದ್ದಶಾಂಗುಲವದುವೆಯಿಂತೆನಲು
ಲೋಕ ವೃಷಭಾಧೀಶನಕ್ಕಱ
ಲೋಕ ಶರಣ ಸಮೀಪನಗಲದ
ಲೋಕ ಭವಿದೂರಾಂಕನಾರ್ತರ ರುಣಿ ಪರಾತ್ಪರನ ೬

ಸ್ಮೃತಿಗೆ ವಿಸ್ಮೃತಿ ವಿಷಯವಾಶ್ರುತಿ
ತತಿಯ ವಾಙ್ಮನಸಕ್ಕಗೋಚರ
ವತಿಶಯಮು ಮೇಣಾ ಪುರಾಣಗಿರಾಣದಱತಕ್ಕೆ
ನುತವದೇನಿತಿಹಾಸವೆತ್ತ
ಪ್ರತಿಮ ಪುನರಾವೃತ್ತಿವರ್ಜಿತ
ಜಿತಪುರನ ಪುರವಿಶ್ವನಾಥಾಂತಃಪುರವನಱಯ ೭

ಉಪನಿಷಚ್ಚಯವೊಲಿದು ಪಾಡುವ
ಉಪನಿಷಚ್ಚಯವೊಲಿದು ಹರಸುವ
ಉಪನಿಷಚ್ಚಯವೊಲಿದುವಾರ್ತದಿ ಕೀರ್ತಿಪಾದರಿಪ
ಉಪನಿಷಚ್ಚಯವುಣ್ಮೆವೋದುವ
ಉಪನಿಷಚ್ಚಯವುಣ್ಮೆ ವಾದಿಪ
ಉಪನಿಷಚ್ಚಯವುಣ್ಮೆ ಜಾನಿಪ ಸಾಂಬಲೋಕವದು ೮

---

1 ೦ೆಂಬ ಸಂಖ್ಯೆ (ಕ) 2 ಕಾತ್ಯ (ಖಗ)

ಮೃಡಮೃಡಾಣಿ ಕುಮಾರ ಗಣಪತಿ
ಮೃಡಸಮಾನದ ನಂದಿಕೇಶ್ವರ
ಮೃಡನಣುಗ ವೀರೇಶನೊಳಗಾದಖಿಳಸಂಖ್ಯಾತಂ
ಮೃಡನ ರುದ್ರಾಂಗನೆಯರನುಪಮ
ಮೃಡಶರಣರಾ[1]ದ್ಯ[1]ರು ಪುರಾತನ
ರೊಡೆಯರಾಲೋಕಕ್ಕೆಯನ್ಯವನಱಿಯದುನ್ನತರು ೯

ಆದ್ಯರನುಮಿಷಜಾಲಕಿವರಿವ
ರಾದ್ಯರಮರೇಂದ್ರಂಗಮಿವರಿವ
ರಾದ್ಯರಜಹರಿ ಮುಖ್ಯ ಜಗಜುಗಕಿವರಿವರನಱಿಯ
ಆದ್ಯರಾದಿಯೆನಿಪ್ಪ ಕಾಲ
ಕ್ಕಾದ್ಯನಾದಿಯುಮೆಂಬುದಕ್ಕೆಯು
ವಾದ್ಯರಗಜಾವರ ಪರಾತ್ಪರಲಿಂಗಪೂಜಕರು ೧೦

ರಾಣಿವಾಸದೊಳನ್ಯವಾಸದೊ
ಳಾಣತಿಯನುಚಿತಾನುಚಿತಪರ
ಮಾಣುವಱಿಯದೆ ಸಲುವ ಸಜ್ಜನದಾಪ್ತ ಪರಿವಾರಂ
ಸ್ಥಾಣುಗಾದಿಯ ಹಳೆಯರಣಕಿಸೆ
ಪ್ರಾಣವಂ ಬಾಸಣಿಸಲಱಿಯದ
ಹೂಣಿಗರು ಜಾಣರುಗಳಭವನೊಳಗಲದವಿರಳರು ೧೧

ಅವರ್ಗೆ ತಾ[2]ಯ್ವ[2]ನೆಯುವರ್ಗೆ ತವರ್ಮನೆ
ಯುವರ್ಗೆ ಹೊಕ್ಕಿಲಮನೆಯುಮೇಳುಂ
ಗವಿಯ ಬೆಳಗುವನೆಯ್ದೆ ರಕ್ಷಿಪ್ಪರಮನೆಯು ತಾನೆ
ಅವರ್ಗೆ ಸದ್ಗುರು ಮನೆಯುವದೆ ಮ
ತ್ತವರ್ಗೆ ಮ[3]ಹ[3]ಮನೆಯೆನಿಪು[4]ದುಂ[4] ತಾ
ನವರ್ಗೆಯಾಲೋಕವದುವನ್ಯರು ಸಲ್ಲರಂದಿಂ[4]ದುಂ[4] ೧೨

ಶಿವನ ರಾಣೀವಾಸದರಮನೆ
ಶಿವನ ಕಟ್ಟೇಕಾಂತದರಮನೆ
ಶಿವನ ಆಪ್ತಗಣಂಗಳೋಲೈಸಿರ್ಪ ಮನೆ ತಾನೆ

---

1 ರ್ಯ (ಖಗ) 2 ಯಿವು (ಕಖ) 3 ಹಾ (ಗ) 4 ದಂ (ಖಗ)

ಶಿವನ ಅಂತರ್ಗೃಹವೆನಿಪುದದು
ಶಿವನ ಸುಖನಿಳಯವದನಾರತ
ಶಿವನ ಸೆಜ್ಜೆಯ ಗೋಪ್ಯದರಮನೆಯೆನಿಪ ಲೋಕವದು ೧೩

ಅತ್ತ ಮಾಯಿಾ ತಾಮಸಿಗನೇ
ಕತ್ತ ಕಾಮುಕ ಹಾದರಿಗನೇ
ಕತ್ತಧೋಕ್ಷಜ ಶಾಪಹತ ಶ್ರುತಿಬಾಹ್ಯ ಹೆಂಗೊಲೆಗಂ
ಅತ್ತ ಬಂಡಿಯ ಬದಗನೇಕಕ
ಟತ್ತ ಬಲಿಬಂಧನ ಕಪಟಪಟು
ವತ್ತವಾರುಣಿರತನನುಜ ದೂ[1]ಪ್ಯಾಂಗ[1]ನೇಕತ್ತ ೧೪

ಎತ್ತಲಜಗಿಜನೆತ್ತಲಿನಗಿನ
ನೆತ್ತಸಸಿಗಿಸಿಯೆತ್ತ ಶಿಖಿಗಿಖಿ
ಯೆತ್ತಲಮರಪಗಿಮರಪಂ ಯಮಗಿಮ ಸಮಾಜಕರು
ಎತ್ತನೈರುತಿಗೀರುತಿಗಳಿವ
ರೆತ್ತ ಜಲಧಿಪಗಿಲಧಿಪಂ ಫಡ
ಎತ್ತ ಪವನಂಗಿವನ ದೊದ್ದೆಗೆ ಹೊದ್ದಲೇನಲ್ಲಿ ೧೫

ಅಲ್ಲಿ ಸಿದ್ಧರು ಬದ್ಧಕರಿಗೇ
ನಲ್ಲಿ ಚಾರಣ ಚೂರಣರಿಗೇ
ನಲ್ಲಿ ರಂಭಾದ್ಯಪ್ಸರಿಯರ್ಗೆ ನಡ[2]ಕಿವಾ[2]ಯರ್ಗೆ
ಅಲ್ಲಿ ಕಿನ್ನರಗಿನ್ನರಿಗಳೇ
ನಲ್ಲಿ ಯಕ್ಷರು ಭಿಕ್ಷುಗಳಿಗೇ
ನಲ್ಲಿ ಖೇಚರ ಭೂಚರಾದಿಯುವೆಲ್ಲವಿತ್ತಿತ್ತಂ ೧೬

ಮಱಿದುವಾ ಲೋಕದೊಳಗೆಂದುಂ
ತಱಿಸಲಲು ಯೋಗ್ಯತೆಯುದಿಲ್ಲದೆ
[3]ಪೊ[3]ಱಗೆ ವರ್ತಿಪ್ಪಿಪ್ಪತೆರ[4]ಳ್ವಿಧ[4]ದಧಿಕೃತಾದಿ ಜನಂ
ನೆರೆದು ಸೇವಿಸಿ ಬರ್ದುಕಲೆಂದುರು
ಕರುಣಿ ಮಂದರಪರ್ವತಾದಿಯೊ
ಳರಮನೆಯನೊಡ್ಡೋಲಗದ ಶಾಲೆಗಳನಾದಿಯೊಳು ೧೭

---

1 ಪ್ಯಾನಾಸ (ಕ) 2 ವಾರಿ (ಗ) 3 ಹೊ (ಕ) 4 ಳದ (ಗ)

ತರತರದೆ ಬೊಮ್ಮಾಂಡಕೋಟಿಯು
ಕೊಱತೆ ಕೊಂಕುಗಳೊಳಿಗಂಗಳ
ನಿರದೆಯೆಯ್ದಿಸಲೆಂದು ಮಾಡಿದ ಹೆಗ್ಗಡೆಗಳೆನಿಪ
ಹರಿಯಜರ ಬಿನ್ನ[3]ಪವು[3] ಬೀಳ್ಕೊಡೆ
ಗುರುಗ ಮಂಡನನೆಸಗಿ ಧರೆಯೊಳು
ಮೆಱೆವಮರವರ ರಾಜಧಾನಿಗಳೊಳಗೆ ಮೇಲೆನಿಸಿ ೧೮

[4]ಪೊ[4]ಗಳಲುರಗೇಶಂಗತರ್ಕ್ಯಂ
ನಗಧರಂ ವಾಕ್ಪತಿ ಬೃಹಸ್ಪತಿ
ಗಗಣಿತಂ ಶಿವಶಿವ ಅಸಾಧ್ಯವೆನಲ್ಕದೆನ್ನಳವೆ
ಅಗಜೆಯರ ಸೊಸೆದಿರ್ಪವೊಡ್ಡೋ
ಲಗದ ವರಸೌಂದರದ ಮಂದರ
ನಗದ ಚಂದಂಬೆತ್ತ ಮಂದಿರದಂದದುನ್ನತಿಯಂ ೧೯

ಅಂತೆಸೆವ ವೋಲಗದ ಮನೆಗ
ತ್ಯಂತ ಭೂಷಣವಪ್ಪ ಮಣಿಮಯ
ಕಾಂತಿಯಿಂ ಪ್ರಜ್ವಲಿಪ ಸಿಂಹಾಸನ ಸುಖಾಸೀನಂ
ಕಂತುಹರನಮಳೇಂದುಮಂಡಿತ
ನಂತಕಾಂತಕವಂಬಿಕಾಧವ
ನಂತು ಶ್ರೀಗುರುರೂಪ ವಿಶ್ವೇಶ್ವರನೆಸೆದನೊಪ್ಪಿ ೨೦

ನಾರದನ ತುಂಬುರನ ಗಾನ ಸು
ಚಾರು ನಂದೀಶಾದಿಗಳ ವಾ
ದ್ಯಾರವದ ರಂಭಾದಿ ಲಾಸ್ಯ ವಿಲಾಸ ಕುಶಲತೆಯು
ಓರಣದಿ ಚಂಡಪ್ರತತಿ ಕೈ
ವಾರಿಸುವ ಪಾಟವದೆ ಪಾಠಕ
ಸೂರಿಗಳ ಸಂಭ್ರಮದ ಕಳಕಳವೆಸೆವ ವೋಲಗದೆ ೨೧

ಅಲ್ಲಿ ಗೌತಮಮುನಿ ದಧೀಚಿಗ
ಳಲ್ಲಿ ದೂರ್ವಾಸೇಶ ಗಣವರ
ರಲ್ಲಿ ಭೃಗು ಜಾಬಾಲ ಬೋಧಾಯನ ವಸಿಷ್ಠಾಳಿ

---

[3] ಹವ (ಕ) [4] ಹೊ (ಕ)

ಭರದಿನರ್ಚಿಸುವೇಕನಿಷ್ಠಾ
ಪರನ ನೇಮವದೆನಲು ಮೆಱೆವು
ಬ್ಬರದ ಸೊಡ್ಡಳ ಬಾಚತಂದೆಗಳಂದೆಸೆದರಲ್ಲಿ ೩೧

ಲಿಂಗಸುಖಿ ಲಿಂಗಾತ್ಮಲಿಂಗಾ
ಲಿಂಗನೋತ್ಸುಕ ಲಿಂಗರತ ಲಿಂ
ಗಾಂಗಿ ಲಿಂಗ ವಿನೋದಿ ಲಿಂಗಸದರ್ಥಲಿಂಗೈಕ್ಯಂ
ಜಂಗುಳಿಗಳಪ್ಪನ್ಯದೈವದ
ಗೊಂಗ ಜಂಗಮದಾರ್ತಿ ಜಂಗಮ
ಲಿಂಗ ಜಂಗಮದಣುಗನಗಣಿತ ಗೊ[1]ಪೆ[1]ಯ ಶಿವನಲ್ಲಿ ೩೨

ನರಕಲೋಕವದೆನಲು ಹುಲಿಗೆಱೆ[3]
ಯರುಹಮಯವಾಗುಕ್ಕೆ ಜೈನರು
ಹರನವರ ಸುಳಿವಿಂಗೆ ಸೈರಿಸದಿರಲು ಕಡುಮುಳಿದು
ಒರಸಿಯರುಹನ ಬಸದಿಯೊಳು [2] ಶಶಿ [2]
ಧರನನವನಿಗೆ ತೋಱಿದನು ಪರಮ
ಶರಣನಾದಿಗಣೇಶನೀಶನ ಪಕ್ಕದೊಳ್ ಮೆಱೆಯೆ ೩೩

ಹೆರನವಂಗಿಕ್ಕುವರೆ ಗುರುಗಳ
ಚರಿಗೆಗಾದುದನಕಟ ತಪ್ಪೆನು
ತುರವಣಿಸಿ ಗಂಡಂಬಡಿಯೆ ನೊಂದರುಹನಂ ಬಗಿದು
ಉರದ ಮೇಲುದಯಿಸಿದ ಲಿಂಗವ
ನರರೆ ಪರಿವಳಿಗೆಯೊಳು ತೋಱಿಸಿ
ಮೆಱೆ[3]ದ ಜಂಗಮನಿಷ್ಠೆ ವೈಜವ್ವೆಗಳು[2]ವಂತ[3]ಲ್ಲಿ ೩೪

ಜರ್ಬಿದರುಹನವರು ಹರಿದಿರಲ
ಗುರ್ಬಿನಿಂ ತಲೆಯುರಿದು ಪಡೆದುದ
ನುರ್ಬಿಯಾಯೆನಲೊಡೆದು ಜಿನನಂ ಮೆಟ್ಟಿ ಕೆಡೆಯಿಕ್ಕಿ
ಅಬ್ಬಲೂರ ಜಿನಾಲಯದಲತಿ
ಗರ್ಭದಿಂ ಶಿವನಂ ಪ್ರತಿಷ್ಠಿಸಿ
ಸರ್ಬನವನೇಕಾಂತರಾಮಯ್ಯಂಗಳಂತಲ್ಲಿ ೩೫

---

[1] ಪ (ಕ) [2] ಹೆಱೆ (ಕ) [3] ತನ್ನ (ಕ)

ಮಾರಿ ಕೊಟ್ಟಣಗುಟ್ಟಿಯುಂ ಮೈ
ಲಾರ ಕೊಡೆವಿಡಿದುಂ ಬರ್ದುಂಕಿದ
ರಾರುಹತನಾರಾಯಣಾದಿ ಪ್ರತಿಮೆಗಳನೊಡೆದು
ಹಾಱಿಸಿದವು ಈಕ್ಷಿಸಲು ಫಡಯಿ
ನ್ನಾರೊ ಶಂಕರದಾಸನಿದಿರಲಿ
ಧಾರುಣಿಯ ಮೇಲುಳಿದರಿಲ್ಲೆನಲಾ ಮಹಿಮನಲ್ಲಿ ೩೬

ಮಾರುಡಿಗೆಯೆಂಬಾ ಪುರದ ಕಿ
ರ್ಗೇರಿಯೊಳು ಬಿಡೆ ಬೀಸಿ ಬತ್ತಲೆ
ವೂರಮಲಧಾರಿಗಳು ಮಿಗೆ ಧರೆ ಹೇಸಿ ಜಿನತತಿಯಂ
ನೆರೆ ಬಸದಿಯನೊಡದಿಡಿದು ವೇ
ಳ್ನೊಱಱಿೊಳು ಲಿಂಗಪ್ರತಿಷ್ಠೆಯ
ನೋರಣಿಸಿದಾ ನಾಚಿರಾಜಂ ರಾಜಿಸಿದನಲ್ಲಿ ೩೭

ಬಿಡದೆ ಶರಣರ ಚೇಲತತಿಯಂ
ಕಡಹಿಲೊಗೆದಡೆಗೊಡ್ಡಿ ಘಟ್ಟಿಸಿ
ಮಡಿಸಿ ಘುಡಿಸವನೊಡನೊಡನೆ ತಡೆಯದೆ ಕೊಡುವನಿರದೆ
ಪೊಡವಿಗೆನಲಪ್ರತಿಮನುನ್ನತ
ಮಡಿವಳರ ಮಾಚಯ್ಯ ಮಮಕುಲ
ದೊಡೆಯನೋಲಗದೆಡೆಯಲೊಪ್ಪಿದನಮಳಗುಣನಿಳಯಂ ೩೮

ಮಱಿವೊಲೆಯುರಱಗುಲಿಗ ಹಾರುವ
ನೆರವಿಗೀಶಾಲಯದ ಕದವೇಂ
ತೆಱವವೆ ಫಡ ಹರಿಯುಜರ್ಕಳಿಗಗ್ಗಳವದಮಮಾ
ತೆಱದವನೆ ತನ್ನಿಂದೆಯುವನಿಗೆ
ಶರಣರಾಧಿಕ್ಯವನೆ ಮೆಱಿದೆಂ
ಮೆಱಿಯ ದೇವರದಾಸ ದುಗ್ಗಳೆವೆರಸಿಸಿದರಲ್ಲಿ ೩೯

ಹರನ ನಿಂದಾಪರಪುರಾಣದ
ನರಕಿಯುಂ ಕೊಂದಡೆಯಿದನ್ನಯ
ವರಿದವಧ್ಯಂ ವಿಪ್ರನೆನಲೇಱಿಂದು[1]ಗುವ ಹುಳುವಂ[1]

---

1 ಳುವಪುಗುವಂ (ಖ ಗ)

ಧರೆಯೊಳಗೆ ಪ್ರತ್ಯಕ್ಷವಂ ಮಿಗೆ
ನೆಱೆಯೆ ತೋಱಿಸಿದಚ್ಚನಿಚ್ಚಟ
ನೆರದ ದೂಷಕ ಗುಮ್ಮ ತೆಲುಗರ ಜೊಮ್ಮನಂತೊಪ್ಪೆ ೪೦

ಕರಮೆ ತನ್ನಂ ಕುಱಿತು ಫಾಧದ
ನರರು ಕಟ್ಟಿಗೆ ಯೋಗ್ಯರಲ್ಲೆಂ
ದೊರೆದ ಸಾರಕಿ ಸಭೆಗೆ ನಗುತಂ ಜನ್ನಿವರವಿಕ್ಕಿ
ಕರೆದು ನಾಯಿಂದಖಿಳವೇದವ
ನಿರದೆಯೋದಿಸಿಯವರ ಬಾಯಂ
ಕೆರಹಿನಿಂ ಮುದ್ರಿಸಿ ಮೆಱೆದ ಜಂಬೂರ ಮಹಕಾಳಂ ೪೧

ಹಿರಿಯ ಮಾಹೇಶ ಪ್ರಸಾದವ
ದರಿದುವುಂಡಂಗುಂಟೆಯಾತಿಯ
ದಿರದೆನಲು [1]ವಾ॰ಜನವಣಕದಿಂ ನುಡಿಸಿಯುದನೆನಲು
ಕರೆದು ಕಾಗೆಯನುಂಟೆನಿಸಿ ಹರ
ಶರಣರಾಧಿಕ್ಯವನೆ ಮೆಱೆದುರು
ವರಗಣಾರ್ಣವ ಬಳ್ಳಿಗಾವೆಯ ಬ್ರಹ್ಮಚಾರಿಗಳು ೪೨

ನಿಗಮಚಯ ಮಂತ್ರದೊಳೆಸಗಿ ಸಲೆ
ಮಿಗೆ ಮಹಾಸ್ತೋತ್ರದೊಳು ಬಯಲಾಗ
ಭಗವಸಾ ಪ್ರಚ್ಛನ್ನ ಬೌದ್ಧನ ವೇದಾಂತವದನೆ (?)
ತೆಗಳೆ ಸುಗಿದಿಟ್ಟೊರಸಿ ನೀರೊಳ
ಗಗುಳಿಸಿರದಿಲ್ಲೆನಿಸಿಯೊಪ್ಪಿ
ರ್ದಗಜೆಯರಸನ ಶರಣನೊರು ಮುಕ್ಕಾಳುವರುವಲ್ಲಿ ೪೩

ಶ್ರುತಿಗಳಾಣುವನೆತ್ತಿ ದ್ರಾವಿಡ
ಕೃತಿಯ ಬೆಂಬಾವುಗಳನಱುದಶ
ಶತವ ತೊಂಬತ್ತಾಱು ಪ್ರಕರಣವೆಸಗಿ ಮಾಧವನಂ
ಶ್ರುತಿ ಬಹಿಷ್ಕೃತವೆನಿಸಿ ವಾದಿಸಿ
ಜಿತಪುರಾದ್ವೈತ ಪ್ರತಿಷ್ಠೆಯ
ನತಿಶಯದಿನೆಸಗಿದ ಪುಲವಕಪಿಲರುವನಂತಲ್ಲಿ ೪೪

---

1 ಮಹ (ಕ)

ಅಲ್ಲಮಂತರರದ ಪ್ರಪಂಚದೊ
ಳಲ್ಲಮಂ ದಿವಿಜಾದಿ ನೆರವಿಯೊ
ಳಲ್ಲಮಂ ಹರಿಯಜ ಸುರೇಂದ್ರಾದಿಗಳೊಳಂದಿಂದು
ಅಲ್ಲಮಂ ಮೂಜಗದೊಳುನ್ನತ
ದಲ್ಲಮಂ ಗುರುಲಿಂಗದವಿರಳ
ದಲ್ಲಮಂ ಗೊಗ್ಗೇಶವಲ್ಲಭನಲ್ಲಿಯಂತೆಸೆದಂ ೪೫

ಭವಿಯ [1]ಪುರಮಂ[1] ಭವಿಯ ನೆಲನಂ
ಭವಿಯ ಕೆಱೆಯುಂ ಭವಿಯ ಪಶುವಂ
ಭವಿಯ ಧನಧಾನ್ಯಾದಿ ವಸ್ತುಗಳೆನಿತನಿತನುಳಿದು
ತವೆ ಹುರಿದ ಬಿತ್ತಿಕ್ಕಿ ಬೆಳೆದೆಲೆ
ಭುವನದೊಳು ಮೆಱೆದಮಳನುನ್ನತ
ಶಿವಶರಣನೇಲೇಶಕೇತಯ್ಯಂಗಳಂತೊಪ್ಪೆ ೪೬

ತೆಗೆದು ನಾಯುಡಗಡುತವದಱೊಳ್
ಪುಗುಗು ದ್ವಿಜನಂಬರದ ನೆಳಲೆಂ
ದಗಿದು ಕೆರಹಿಂ ಮುಚ್ಚಿಯದಱಿಂದಧಮನವನೆಂದು
ಜಗಕೆ ಶಿವಧರ್ಮದ ಘನತೆಯುಂ
ಮಿಗೆ ಮೆಱೆದ ಶಿವಪಥಿಕ ನಿಚ್ಚಟ
ದಗಣಿತದ ಸುವ್ರತಿಪ ಶ್ವಪಚಯ್ಯಂಗಳಂತಲ್ಲಿ ೪೭

ವರನಿಜಾಸ್ಯ ಸುಭಾಂಡಪಾಕದ
ಪರಮಪೂತತೆವಡೆದಮಲರುಚಿ
ಕರವೆನಿಪ್ಪೋಗರದ ಅಬ್ಬಳಿಗೆಗೆ ಬಯಸಿ ಬಾಯಿ
ಒಱೆತು ಶಿವನೆರೆದುಂಡನೆನೆ ನೆಱೆ
ಮೆಱೆದಯೆನ್ನ ಕುಲಾಭಿಮಾನ
ಕ್ಕೆಱೆಯ ಮಾದರಚನ್ನನುನ್ನತಮಹಿಮನೊಪ್ಪಿರ್ದಂ ೪೮

ಲಿಂಗನಿಷ್ಠನು ಲಿಂಗವಂತನು
ಲಿಂಗದಾರಾಮಂ ಮಹತ್ತರೆ
ಲಿಂಗಸಂಗ ಸುಖಾವಗಾಹ ಪವಿತ್ರ ಸುಕ್ಷೇತ್ರಂ

---

1 ಊರಂ (ಕ)

ಜಂಗಮದ ನೆಲೆ ಜಂಗಮದ ಮನೆ
ಜಂಗಮದ ಸಿರಿ ಜಂಗಮಂಗಳ
ಕಂಗಳಾಭರಣಂ ಬಸವಿರಾಜಂ ಮೆಱೆದನಲ್ಲಿ ೪೯

ಆಸುರದ ನದಿಯೊಳಗೆ ದಾಸಣ
ವಾ ಸುಗಂಧಾಕ್ಷತೆವೆರಸುಮವ
ನೋಸರಿಸದೆಯ್ತರಿಸಿದುಬ್ಬಟೆಯಚ್ಚ ನಿಚ್ಚಟನು
ಈಶಭಕ್ತಾಧೀನನೆಂಬುದ
ನೀ ಸಮಸ್ತಾವನಿಗೆ ತೋಱಿದ
ಕೇಶಿರಾಜಯ್ಯಂ ಮೆಱೆದನೊಡ್ಡೋಲಗದ ನಡುವೆ ೫೦

ಭರತವಿದ್ಯಾಪರಿಚಿತಂ ನಿಜ
ಹರನಿಳಯದೊಳಗಿಪ್ಪ ಮೂವ
ತ್ತೆರಡು ವಿಧ ವೀಣೆಗಳೊಂದೊಂದಾ ಸಮಯವಱಿದು
ಇರದೆ ಯಿಂಚರದೋಱಿದದನೇ
ಕರೆಕರೆದು ಸಕಲೇಶಲಿಂಗವ
ನರರೆ ಕೇಳಿಪ ಮಾದಿರಾಜಯ್ಯಂಗಳಂತೊಪ್ಪೆ ೫೧

ಪರಮ ಮದ್ದುಗ್ಗರು ಕುಲಜನನುಪಮ
ಗುರುವರಂ ಸಕಲೇಶಲಿಂಗದ
ಶರಣಪಥನಿರತಾತ್ಮನುನ್ನತ ಮಾದಿರಾಜರೊಳು
ಕರುಣವಡೆದುರ್ವರೆಯೊಳುಬ್ಬರ
ದುರವಣೆಯ ಗುರುನಿಷ್ಠನೆನಿಸಿ
ರ್ದರರೆ ಶ್ರೀಮ[1]ಹ[1]ಲಿಂಗರಾಮನ ವೀರನಂತಲ್ಲಿ ೫೨

ವಿನುತ ಗುರುಲಿಂಗ ಪ್ರಸಾದದಿ
ತನುವದಾಯ್ತೆಂಡೆನಿಸಿ ತನ್ನಯ
ಮನವ ಭವಚರಣಾರವಿಂದದೊಳೊಂದಿತೆಂದೆನಿಸಿ
ಧನವದಗಜಾವರನ ಜಂಗಮ
ದನುಗೆ ಸಂದುದುವೆನಿಸಿ[2]ದನುಪಮ[2]
ಘನಮಹಾಗುರು ಕೆಱೆಯಪದ್ಮರಸಯ್ಯನಲ್ಲಿರ್ದಂ ೫೩

---

[1] ಹಾ (೩ಗ) [2] ಧರೆಯೊಳು (ಕ)

ಅಕ್ಕ ಮೋಕ್ಷಾಂಗನೆಯು ಮುಂಗಡೆ
ಯಕ್ಕ ಭಕ್ತಿಗೆ ತನಗೆ ಮೇಳವ
ದಿಕ್ಕೆ ಕಳೆಯೆಂದೆನಲು ಈ ಅಗಜಾವರನ ಮನೆಯು
ಅಕ್ಕವೆಸರಾರ್ಗಕ್ಕುವುದುಯೆ
ಮ್ಮಕ ಉಡುತಡಿಯಕ್ಕಗಲ್ಲದೆ
ತಕ್ಕುದಲ್ಲೆಂದೆನಿಸಿ ಗಿರಿಜೆಯ ಪಾದವಿಡಿದಲ್ಲಿ ೫೪

ಗುರುಪರೀಕ್ಷಿಸವೇಳೆ ಹಾ ಸಂ
ಭರದಿನೇಱಿದನಾಹ ಶೂಲವ
ನಿರದೆ ಗುರುಭಕ್ತಂಗೆಯಿಹಪರದೊಳಗಸಾಧ್ಯವದೇಂ
ಗುರು ವಿಮಾನದೊಳೆಯ್ದಲಡ್ಡಂ
ಬರಿದು ತನ್ನರ್ಧಾಯುವಿತ್ತು
ವರ್ಗೆಗೆ ಮೆಱೆದೆಸೆದೆಮ್ಮಗುರುಭಕ್ತಯ್ಯನಂತಲ್ಲಿ ೫೫

ಪರಮಗುರುನಿಷ್ಠಂಗವರಿದೇಂ
ಧರೆಗೆ ನರಿ ಕುದುರೆಗಳವಾಗಲು
ಮೆಱೆದು ಹರನಾಪೊಳ್ತುವುಂ ಗುರುಮೂರ್ತವನೆ ತಳೆದು
ಕರಮೆಸೆದು ತೋರ್ಪಂತೆ ವರವದ
ನೆರೆದು ಪಡೆದಾ ಪ್ರಮಥರಿದಿರೊಳು
ಗುರುಭ[1]ಕತ[1] ಶಿರುವಾಡವೂರೊಡೆಯರುವನಂತಲ್ಲಿ ೫೬

ಶರಣವೇಷದಿ ಪಿಂದೆ ಪುಗೆ ಕ
ಳ್ಳರನಿರಿಸಿಯುವರ್ಗಾಗಿ ಶೂಲ
ಕ್ಕರವರಿಸದಾದುರ್ರವಣೆಪಿ ಮರನಂಕುರಿಸಿ ತಳಿತು
ಕರವೆಸೆಯೆ ಲಿಂಗಂಗಳಾಗೀ
ಧರೆಗೆ ಶರಣರ ಘನವನಾಗಳೆ
ನೆಱೆಮೆಱೆದ ಗುಂಡಯ್ಯ ಬೊಮ್ಮಯ್ಯಂಗಳಂತೋಪ್ಪೆ ೫೭

ಇಂದುಜೂಟನ ಶರಣವೇಷದಿ
ಬಂದು ಸಿಂಧುಮರಾಳ ತಂದೆಯ
ನೊಂದಿಸಿದ ಬಿಜ್ಜಳ ಮಹಾದೂಷಕನ ಘನತನುವಂ

---

೧ ಕ್ತ (ಹ ಗ)

ಕೊಂದು ದೆಸೆಬಲಿಗೆಯ್ದು ಹಂತವ
ನಂದು ಧರೆಯೊಳು ಮೆಱೆದುವಿರದೇ
ಸಂದ ಜಗದೇವಣ್ಣನಾ [1]ಮುಕ್ಕಣ್ಣನೋಲಗದಂ[1] ೫೮

ಹರಭಕ್ತನಿಧಿಯೆನಿಪ ಚೋಳನ
ಧರೆಯೊಳಚ್ಚರಿಯಿಂದೆ ಶಿವನಂ
ಪರಿಪರಿಯಲೊಲ್ದೊಲಿಸಿಯರ್ಚಿಸಿ ಬಂದ ಪರಿವಿಡಿಯು
ತಿರುನೀಲಕಂಠಾಖ್ಯ ಕುಶವರು
ಧರೆಗಿಹಃಪಗೆಯಾಂಡರಚ್ಚರಿ
ವೆರಸಿದಿಳೆಯಾಂಡಗುಡಿಮಾರರು ಸೇದಿರಾಜಯ್ಯಂ ೫೯

ಅಲ್ಲಿ ಮೆಱೆಮಿಂಡರುವೆನಂತರ
ದಲ್ಲಿ ಕುಳ್ಳಿರ್ದಮರನೀತಿಗ
ಳಲ್ಲಿ ದೇವರ ನಂಬಿಯಣ್ಣನುಯಿಱೆಭಕ್ತರಿಂದಂ
ಅಲ್ಲಿ ಅಮರ್ದೇಣಾದಿನಾಥರು
ವಲ್ಲಿ ಶ್ರೀಕಣ್ಣಪ್ಪದೇವರು
ವಲ್ಲಿ ಶರಣಕೊರ್ಂಗುಲಿಯ ಕಲಿಯರುವನಂತರದಿಂ ೬೦

ಮಾನಕಂಜರನಂತರದ ನೆಱೆ
ದಾನಿ ಅರಿವಾಳ್ತಾಂಡರಲ್ಲಿಂ
ದಾನಾಯ್ನಾರ ವೊಲ[2]ಘಾ[2]ಂಡರು ಮುರುಘರಿಂದಂ
ತಾನೆ ನೆಱೆಗಲಿ ರುದ್ರಪಶುಪತಿ
ಯಾ ನೆರೆಯ ತಿ[illegible]ನಾಳುಪೋವರು
ಮಾನನಿಧಿ ತಿರುಕುಱುಪೆ ತೊಂಡರು ತಂಡೇಶರಿಂದಂ ೬೧

ಕರುಣಿ ವಾಗೀಶ್ವರರು ತಿರುಕುಲ
ಚೆಱೆಯರುಂ ಪೆರುಮಳಲಿ ಕುಱುಬರು
ಹರನ ತಾಯೆನಿಪಾ ಕಾರಿಕಾಲಮ್ಮೆಯರು ಮೆಱೆಯೆ
ಶರಣರಃಪೂತಡಿಯರುನ್ನತ
ತಿರುನೀಲನಕ್ಕರುವನಂತರ
ಪರಮ ನಮಿನಂದಿಯಡಿಯರು ತಿರುಜ್ಞಾನಸಂಬಂಧಿ ೬೨

---

1 ಹರನೋಲಗದೊಳೆಸೆದಂ (ಖ ಗ) 2 ಗಾಂ (ಕ)

ಹರನ ತಿರುಕುಲಿ ಕಾಮದೇವನು
ತಿರುಮೂಲದೇವರುವನಂತರ
ದರುಹನಂ ಬಡಿದೆಸೆದ ನಾಟ್ಯನಮಿತಂಡಿಗಳುವಂತಲ್ಲಿ
ನಿರುತವಚ್ಯುತರುಂ [1] ಮದಾಂತಕೆ [1]
ಹರಶರಣ ಸೋಮಾಸಿಮಾರರು
[2] ನಿರುತ [2] ನಿಯಮದ ಸಾಂಖ್ಯನಾರ್ ಚೆಱುಪುಲಿಯಾಂಡರೊಪ್ಪೆ ೬೩

ಕರುಣೆ ತಿರುಚೆಱುತೊಂಡರುಂ ಪರಿ
ವರಿಸಿಯರಸಂ ಚೇರಮಂ ಹ
ತ್ತಿರೆ ಪರಮ ಗಣನಾಥರುಂ ವೆಳ್ಳೂಕತರಂತಲ್ಲಿ
ತಿರುಪಗಲ್ಕೋಳರುವನಂತರ
ನರಸಿಂಗಮೊನೆಯರುವನಂತರ
ನಿರತರತಿಭಕ್ತರು ನಿಯತಕಲಿಕಂಬರಂತಲ್ಲಿ ೬೪

ಕಲಿಯನಾರ್ ಕಳಚಿತ್ತಿಗಳು ವಾಕ್
ಪುಲಿಗಳಯ್ಯಡಿಗಳುವನಂತರ
ತಲೆನವಿರ ಬೆಳಗೆತ್ತಿ ಮೆಱೆದ ಕಣಂಬುಲ್ಲನಂಬಿ
ಸಲುವ ತಿರುಕಡವೂರಕಾರಿಯ
ಕೊಲುವ ಸೌಂದರಪಾಂಡ್ಯದೇವರು
ಕುಲಜ ತಿರುವಾಯಿಲರು ಮೊನೆಯಿಡುವರು ಕಳಚೆಂಗರು ೬೫

ಬಂದೆಡಂಗ[3]ಳೆ[3]ಪೆರುಮಾಳೆಯರು
ಬಂದು ಚೆಱುತೊಣೆಯಾಂಡರಲ್ಲಿಗೆ
ಬಂದ ಪಗಲ್ತೊಣೆಯಾಂಡ ಕೊಳ್ಪುಲಿಯಾಂಡರಂತಲ್ಲಿ
ನಿಂದವೂರಿನ ಪುಶಲೆಯಾಂಡರು
ಬಂದ ಮಂಗಕ್ಕರಸಿಯರು ಸಲೆ
ಬಂದನೈಸರು ಕೊಳ್ಚಿಂಗಪೆರುಮಾಳೆಯರುವೊಪ್ಪೆ ೬೬

ತಿರುನೀಲಕಂಠಾಖ್ಯ ಪಾಣರು
ತಿರುಜೆಡೆಯನಾರುಂ ಮಹತ್ತರ
ಕರುಣೆಯಸ್ಯಜ್ಞಾನದೇವಿ ಪ್ರಮುಖರಂತಲ್ಲಿ

---

[1] ವನಂತರ (ಕ) [2] ಕರಮೆ (ಗ) [3] ಣಿ (ಕ)

ಪರಿವಿಡಿಯಲಱುವತ್ತುಮೂವರು
ತರದೊಳು ಚಿತಾಸನದೊಳೊಪ್ಪಿದ
ರುರಗಕಟಕನ ಪ್ರಮಥರೊಗ್ಗಿನ ವೋಲಗದೊಳಂದು ೬೭

ಹಿರಿಯ ಮೂಱುಂಜಾವದೇವರು
ಬರಗುರಾಜನಿರಂತದೇವರು
ಪರಮನಿರುಗಡು ಮುಲದ ವಿರಳದ ಚಾಕಿರಾಜಯ್ಯ
ಕಱಿಕುಚಿಗ ಬಾಚಯ್ಯನಗ್ಗದ
ಗಿಱುಗಟೆಯ ಶಿವದೇವನೆಮ್ಮಯ
ಕುಱುಗೋಡ ನೃಪ ರಾಚಮಲ್ಲಂ ಸಲ್ಲಲಿತನಲ್ಲಿ ೬೮

ಚೋಳ ಪಲ್ಲವರಾಯರುಂ ಚೇ
ಲಾಳ ಮೈಲನ ಬೊಮ್ಮನವನಿಪ
ಹೊಳಜಿಗೆಯಂ ಮುಗಿಯುತಿರುಮಾಳಿಘದೇವರಮರ್ದು
ಈಳದೊಳು ಕೋಳೂರ ಬಾಲೆ ಸು
ಶೀಲನೋಲೆಯರಾಮನಮಳಂ
ತಾಳಿ ಪಾಱುನ ಮೆಱೆದ ಬೊಲ್ಲಯ್ಯಂಗಳಂತಲ್ಲಿ ೬೯

[1] ಹಿ [1]ರಿಯ ವರದಯ್ಯಂಗಳುಂ ಹರ
ಶರಣ ಮೊರಟದ ಬಂಕ ತಂದೆಗ
ಳರಿಯ ಸುರಗಿಯ ಚೌಡರಾಯುತ್ತುಂಗಚೋಳನೃಪಂ
ಧರೆಯ ಕಲ್ಲಯ್ಯಂಗಳುಂ ಗುರು
ಪರಮನಾದಿಯ ವಿಶ್ವನಾಥನ
ಶರಣ ಮಾಯ್ದೇವರಸನುತ್ತಮ ಗುರುಭಕ್ತ ಕಾಮಂ ೭೦

ಅಗ್ಗಣಿಯ ಹೊನ್ನಯ್ಯ ನೇಮದ
ಅಗ್ಗಣಿಯ ಹಂಪಯ್ಯನಗ್ಗದ
ವಗ್ಗಣಿಯ ದೇವರಸನಗ್ಗ[2]ಳ[2] ಗಣ್ಣ ಧಮ್ಮರಸಂ
ಗುಗ್ಗುಳದ ಧವಳಯ್ಯನೆಮ್ಮಯ
ಕೊಗ್ಗನೂರಿನ ಶರಣನೋಲಗ
ದೊಗ್ಗಿನೊಳು ಮಮಪಿತಾಮಹ ಗುರುನಿಷ್ಠಮಾಯ್ದೇವಂ ೭೧

---

1 ಹಿ (ಓ) ರ (ಖಗ)

ತರಂಗಟೂರಿನ ಮಾರತಂದೆಯು
ಭಂಗನೆಮ್ಮ ಪರಾಕಿದೇವರು
ಚಂಗಳವ್ವೆಗಳುಮ್ಮಚಿಗೆ ಬಂಕಯ್ಯನಪ್ರತಿಮೆಂ
ತೆಂಗುಳಿಯ ಕೂಚಯ್ಯನೀಶನ
ಸಿಂಗಿಬೊಪ್ಪಂ ಮಳೆಯರಾಜರು
ವಂಗರಾಜರು ಲೆಂಕಮಂಚಯ್ಯಂಗಳಂತೆಸೆಯೆ ೭೨

ಸಿದ್ಧನಾಥನ ಮಾದಿರಾಜ ಪ್ರ
ಸಿದ್ಧ ಸದ್ಯೋಜಾತದೇವರು
ಸಿದ್ಧನಾಥೇಶ್ವರನ ರಾಯರಸಯ್ಯ ದಶವರ್ಮಂ
ಸಿದ್ಧರೇವಣತಂದೆಗಳು ನಿಜ
ಸಿದ್ಧಕ[1]ರು[1]ವೂರ್ದೇವನಿರ್ದನ
ನರ್ಧಚಂದ್ರೇಶ್ವರನ ಬಾಯ್ದೇವರಸರಮರ್ದಿರಲು ೭೩

ಸಲೆ ಮೆಱೆದ ಕಲಕೇತಬೊಮ್ಮನು
ಸುಲಭ ಕೆಲೆಯೂಬೊರ್ಮ್ಮ ಶಿವನೊಳು
ಸಲುವ ಪಿಣ್ಯಾಕರುವರಿಯಲೆಲೆ ಸಂಗರೇಚಯ್ಯಂ
ನುಲಿಯ ಚಂದಯ್ಯಂಗಳುಂ ನೃಪ
ಕುಲತಿಲಕ ಕರಿಕಾಲಚೋಳಂ
ಸಲಿಗೆಯ್ಯೆಚಯ್ಯಂಗಳುಂ ಹುಲಿಕಲ್ಲ ಮಾದಯ್ಯಂ ೭೪

ಆಣತಿಯ ಲಕ್ಕರಸತಂದೆಗೆ
ಆಣಬೆಯ ಚಂದಯ್ಯನೀಶನ
ಬಾಣಸಿಗ ಭೀಮಯ್ಯ [2]ಚ[2]ಣಗನ ಬೊಮ್ಮತಂದೆಗಳು
ಜಾಣೆ ಗುಡ್ಡವ್ವೆಗಳು ವೀರಂ
ಹೊಣೆಗಂ ಹಂದಯ್ಯನೋವದೆ
ಕೇಣಿಗನ ಕೊಂದೆಸದ ಸಗರದ ಬೊಮ್ಮಿತಂದೆಗಳುಂ ೭೫

---

[1] ಠ (ಗ) [2] ಜ (ಕ)

ಕನ್ನಗಳವಿನ ಕೇತನೀಶನ
ಕನ್ನೆ ಕನ್ನೆಯ ಬರಿಸಿ ಶಿವಮು
ದ್ದೆನ್ನ ನನ್ನಯ್ಯಂಗಳುಂ ಬಾಹೂರ ಬೊಮ್ಮಯ್ಯಂ
ಮನ್ನೆಯರ ಮಹದೇವನನುಪಮ
ಕಿನ್ನರಿಯ ಬೊಮ್ಮಯ್ಯನವನಿಗೆ
ಚೆನ್ನ ಡೋಹರ ಕಕ್ಕಸಪ್ಪರಸಯ್ಯ ಮೂಕಯ್ಯಂ ೭೬

ಧೂಪದುನ್ನತ ಮಾಚನಂತೆನ
ಗೋಪಹಾವಿನಹಾಳಕಲ್ಲಂ
ಶ್ರೀಪರಮ ಕೇತಾರ ಬಾಚಂ ಬಿಬ್ಬಬಾಚಯ್ಯಂ
ಭೂಪಕುಲವರ ಭೋಜರಾಜರು
ಕೂಪನಾಚಾರ್ಯಯ್ಯನಮಳಂ
ಶ್ರೀಪುರಾಂತಕನಾಳು ರುದ್ಧರಸಯ್ಯನಂತಲ್ಲಿ ೭೭

ವೀರಶಂಕರತಂದೆಗಳು ಸರ
ಗೂರ ಬಂಕಯ್ಯಂಗಳುಱಿ ಬಡಿ
ಹೋರಿ ಬೊಮ್ಮಯ್ಯಂಗಳುರಿಲಿಂಗೇಶಪೆದ್ದಿಗಳು
ವೀರಚೋಳವ್ವೆಗಳು ತೊಳಲಿಯ
ಮಾರತಂಡೆಗಳಮೃತನಾಥನ
ಸಾರಿದಪ್ಪರಸಯ್ಯನೋಹಿಲತಂದೆಗಳುವಲ್ಲಿ ೭೮

ಪುಲ್ಲಡಿ[1]ಗ[1] ರೇಚಯ್ಯ ಮಲ್ಲಣ
ಮೊಲ್ಲೆಯರ ಬೊಮ್ಮಯ್ಯ ಮಲ್ಲಣಿ
ತೆಲ್ಲಿಗೇಶನ ಮಸಣಹುಳ್ಳಿಯ ಮಾರತಂದೆಗಳು
ಮಲ್ಲಬೊಮ್ಮಯ್ಯಂಗಳುನ್ನತ
ಬಿಲ್ಲಣಂ ಬಳ್ಳೇಶಮಲ್ಲಂ
ಪಲ್ಲೇಶ ಸೋಮಯ್ಯನಾಹವಮಲ್ಲನುಪ್ಪಳನುಂ ೭೯

---

1 ಗೆ (ಗ)

ಅಂಬಲಿಯ [1]ಬೈ[1]ರಯ್ಯ ಗೊಲ್ಲಳ
ಟೆಂಬರಾಣಿಯು ನನ್ನಮರಸಂ
ಕೆಂಬಾವಿ ಭೋಗರಸ ವಿಶ್ವೇಶ್ವರರ ಪೆದ್ದಿಗಳುಂ
ಕುಂ[2]ಬಳಿ[2]ರ ಗುಂಡಯ್ಯ ನಂಬಿ ತ್ರಿ
ಯಂಬಕಂ ನಿಂಬವ್ವೆ ನಿಂಬಂ
ಕಂಬಿ[3]ಯಲಿ[3] ಭೈರಯ್ಯನುದ್ಭಟದೇವರಂತಲ್ಲಿ ೮೦

ಮೃಡನವೊಕ್ಕಲ ಮುದ್ದನೊಡನಮ
ರ್ದೊಡೆಯ ಹಡಪದ ರೇಚ ಬಡಿಗನ
ಬಡಿದ ಕಲ್ಲಯ್ಯಂಗಳೆಡೆ ಪುರುನಾಗತಂದೆಗಳು
ಇಡುಬನಾಥನ ತಿಪ್ಪನೊಪ್ಪುವ
ಕಡಲವಾಡದ ಚಾಯಿದೇವರು
ಕಡುಪೆಯೊಳು ಪಾಲವ್ಮೆ ಹೇರೂರೆಮ್ಮ ಕೊಡಗೂಸು ೮೧

ಆ ಮುಸುಂಟೆಯ ಚೌಡ ಕಂಥೆಯ
ಸೋಮ ಕದಿರೆಯ ರೇಮನೆಮ್ಮೆಯ
ವಾಮರಾಸಿ ಪ್ರಸನ್ನಸೋಮನ ಬಸವಿರಾಜಯ್ಯಂ
ಆ ಮಹಾಮೊಗವಡದ ಮಾದನ
ಕಾಮಿ ಶ್ರೀಪರವೆಯರು ನೆಱೆ ಶಿವ
ಕಾಮಸೌಂದರಿಯರುವನಂತರ ಚಿಱುಪರವೆಯುಲ್ಲಿ ೮೨

ಭೋಗ ಬಾಚಯ್ಯಂಗಳುಂ ಶಿವ
ಯೋಗಿ ಸಾಂತಯ್ಯಂಗಳುನ್ನತ
ಬಾಗುಳಿಯಲುರು ಕೇಶಿರಾಜರು ಜಕ್ಕಿಯರ ಬೊಮ್ಮಂ
ಭೋಗಿ ವರಸಿರಿಶೈಲಮಲ್ಲಂ
ಚಾಗಿ ಗೋವೆಯ ವಜ್ರರಾಯ ವಿ
ರಾಗಿ ಗಜೇಶನ ಮಸಣಂ ನಿಜಲಿಂಗಚಿಕ್ಕಯ್ಯಂ ೮೩

---

[1] ಬೋ (ಗ) [2] ಬಾ (ಗ) [3] ಯಾ (ಕ)

ದಂಡನಾಯಕ ಚಿಕ್ಕಬಸವಂ
ಪಂಡಿತಾರಾಧ್ಯಯ್ಯನುಂ ಕಾ
ಕಂಡಿಕೆಯ ಶಿವಮುದ್ದು ನಿರ್ವಾಣಿಯು ಹಲಾಯುಧನುಂ
ಇಂಡೆಯಲಿ ಭಾಸ್ಕರನನಾರತ
ದಿಂಡೆಯಲಿ ರೇಕವ್ವೆತಾಯುಂ
ಗಂಡುಗಲಿ ತಂಡೇಶಚಾಮಂ ಸಿಂಧುಬಲ್ಲಾಳಂ ೮೪

*ವೀರಸೋಯಿಗನಾಗಸಂಗಂ
ವೀರಮಾ[1]ರ್ತಂ[1]ಡಯ್ಯ ಭಗಣಂ
ವೀರಭೋಗರಸಯ್ಯ ರಾಜನ ಬೊಮ್ಮನೊಳಗಾದ
ವೀರಮಾಯ್ದೇವಿಯರು ಕೇತವೆ
ವೀರಬಾಚವ್ವೆಗಳು ಕಾಳವೆ
ದೋರಿದೇವ ಪ್ರಮುಖ ವೀರರನೇಕರಂತಲ್ಲಿ ೮೫

ವಿಷಧರನ ಹೇರೂರ ನಾಗಂ
ಹಸಿಯ ತಲೆಯಿಂದೆಸೆವ ಮಾದಂ
ವಿಷಮನಯನನ ತೆನೆಯ ಹಳ್ಳಿಯ ಬಾಚಿರಾಜಯ್ಯಂ
ಅಸಮನವಿಮುಕ್ತಯ್ಯನಗಜಾ
ವಸಥನವ ರವಿಯಣ್ಣನೊಡನನು
ಮಿಷ ಕೇಶಿರಾಜಾದ್ಯರಗಣಿತರಪ್ರತಿಮರೊಪ್ಪೆ ೮೬

ನೀಲಲೋಹಿತ ಲೋಹಿತಾಂಗ ಕ
ಪಾಲಿ ಹಾಲಾಹಲ ತ್ರಿಲೋಚನ
ಶೂಲಧರ ಸುಸ್ಥೂಲ ಶಿರಸಪ್ತ ಶಿರಸಾನಂದಂ
ಕಾಲಧರರಧಿಕಂ ಕರಾಳಿಕ
ನೀಲ ನೀಲಗ್ರೀವ ಕಾಲನ
ಸ್ಥೂಲ ದಂಷ್ಟ್ರಜ್ವಾಲಕೇಶ ಸುಕೇಶ ಹರಿಕೇಶಂ ೮೭

---

1 ರ್ತಾಂ(ಖ ಗ) * ಖ ಗ ಪ್ರತಿಗಳಲ್ಲಿ ೮೫ ನೆಯ ಪದ್ಯ ೮೬ ನೆಯ ಪದ್ಯವಾದ ಮೇಲೆ ಬಂದಿದೆ.

ಚಂಡದೃಢದ[1]ರುಶ[1]ನದನಾಹವ
ಭಿಂಡಿಯಾಯುಧಿಯಾ ಭವೋದ್ಭವ
ಮುಂಡಿ ಖಡ್ಗಿ ಸುಘೋಷಮಣಿಭೂಷಣಕರಣ ವೃಷಭಂ
ಕುಂಡಕೋಕಿಲ ವಿಶಿಖಿ ತ್ರಿಶಿಖಿ ಶಿ
ಖಂಡಿ ಕುಂಭೋದರ ಪ್ರಕಂಪನ
ದಂಡಿಯುಂಡಾಭರಣ ಫಣಿಭೂಷಣ ಗಣಾಧೀಶಂ ೮೮

ವೀರಕಾರ್ಗ್ರೀ ಶೇಷಶಂಕರೆ
ದಾರುಕೋಗ್ರ ವರೂಥಿ ಭೌತಿಕ
ಭಾರ ಭೂತಿ ಕಪರ್ದಿ ಜಟಿ ಧೂರ್ಜಟಿ ಹಯಗ್ರೀವಂ
ಪಾರಿಯಾತ್ರ ಸುರೂಪ ಪುಷ್ಕಳ
ಮಾರಹರ ನಿಧಿಯೋಗ ಶಿಖಿಯ
ಕ್ರೂರ ಕ್ರೋಧೀಶ ಸ್ಥಿತೀಶ ವಿಶಾಖ ವಿಷ್ಟಂಭಂ ೮೯

ಪಂಚವಕ್ತ್ರ ಸಹಸ್ರಬಾಹುಕ
ಪಂಚಶಿಖಿ ನಿಶ್ಶಂಕ ದುಂದುಭಿ
ಪಂಚಜಟಿಯಾಸೀನ ಕುಂಭಕ ಚರ್ಮಿ ವರ್ಮಿಕುಥಂ
ಪಂಚಶಿರಸಂ ಹರುಷಣ ಪ್ರಭು
ಪಂಚದೃಕ್ ಪಿಪ್ಪಲ ಶಿಥಿಲಭವ
ಪಂಚಭೂತಪ ಬಲ್ಬು ಶುಭ ಸನ್ನಾದನೀಶಾನಂ ೯೦

ಅಕ್ಷಪಾದ ತ್ರ್ಯಕ್ಷ ವಿದ್ಯುತ್ತ
ನಕ್ಷಪಪ್ರತಿಮ ಪ್ರದೂಷಿ ಶ
ತಾಕ್ಷನಂದಾನತ ವಿರೂಪಾಕ್ಷಾಶನಿ ಸ್ಥಾಣು
ಅಕ್ಷರ ಸಿತಗ್ರೀವಸುತ್ತಮ
ಚಕ್ಷುಧರ ಸರ್ವಾಕ್ಷನಕ್ಷರ
ದ್ವ್ಯಕ್ಷ ಸಂತಾನಕ ಸಹಸ್ರಾಕ್ಷಾಕ್ಷರಾತ್ಮ[2]ನಜಂ ೯೧

---

1 ಶ್ನ (ಗ) 2 ಜನಂ (ಗ)

ಸೋಮಪಮರೇಶ ದ್ವಿಜಿಹ್ವ ವಿ
ಧೂಮ ಮೃತ್ಯುಂಜಯ ಮಹಾಬಲ
ಸೋಮ ಪೇಷಕ ಧೂಮ್ರ ಕಾಯಾಜ್ಯಪ ಪಿಶಾಚಾಸ್ಯ
ಭೀಮಧೂ[1]ಮ[1] ವಿಕರ್ಣಬಾಹುಕ
ಸೋಮವರ್ಣಿ ಮಹೌಜಸಾನದ
ಸೋಮದಪ ಬರ್ಹಿಃ ಪ್ರಕುಂದಂ ದೀಪ್ಯಮಾನ ಜಯಂ ೯೨

ಮಹಾರೂಪಜ ವಕ್ತ್ರ ಷಟ್‌ಶಿರ
ಮಹೋದರ ದುರ್ದರುಶ ಚೌಶಿರ
ಮಹಾನಳ ಸಂಜಿಹ್ವ ವರುಷತ ಶರ್ವ ಪರ್ವತಕಂ
ಮಹಾಯೋಗ ವಿಕಾಯಜೃಂಭಿತ
ಮಹಾತಪ ಸರ್ವಾಂತಕತಿಬಲ
ಮಹಾಕಾಳಂ ವಿಜಯ ಸದ್ಯೋಜಾತ ಶತಬಾಹು ೯೩

ಅದ್ರಿವಂದಿ ಸುಮಂತ್ರ ನವಶಿರ
ಭದ್ರಕಾಳ ವಿರೂಪ ಪಶುಪತಿ
ರುದ್ರ ವಿದ್ಯುಜಿಹ್ವ ಘಂಟಾಕರ್ಣ ದೀಪಾಸ್ಯಂ
ಅರ್ಧಕಂಠನಮೋಘವಿಷ್ಟಿತ
ನರ್ಧವಕ್ತ್ರ ಶತಾಸ್ಯ ರೇಣುಕ
ನರ್ಧನಾರಿ ಸಮಾನ ಕುಮುದನ ಕರ್ಣನುದ್ಧತಮಂ ೯೪

ಏಕನೇತ್ರಂ ಭೃಂಗಿ ಪಿಂಗಳ
ನೇಕಪಾದಾಂಗಾರಕಾಶನ
ಕೋಕಿಲಾಂಗ ಮತಂಗನೋಂಕಾರ ಪ್ರಮುಖರಲ್ಲಿ
ಏಕನಾಮದಲಸಂಖ್ಯಾತರ
ನೇಕಗಣವರರೆಡಬಲದೊಳು ಪಿ
ನಾಕಿಯೊಡ್ಡೋಲಗ ಸಮುಚಿತಾಸನದೊಳೊಪ್ಪಿದರು ೯೫

---

[1] ಮ್ನ (ಗ)

ನೆರೆದದುರಗಣವೃಂದ ಸಂತತಿ
ನೆರೆದ ದಾನವ ವರಗಣಂಗಳು
ನೆರೆದ ಮನುಮುನಿ ಮುಖ್ಯ ತರ್ಕ್ಯಗಣಾಗ್ರಣಿಗಳಮಮ
ನೆರೆದ ಮರ್ತ್ಯಗಣೇಶ ತಿಂಥಿಣಿ
ನೆರೆದುದಗಜಾಲೋಲನೋಲಗ
ದರಮನೆಯೊಳೊಪ್ಪಿದುದು ಪೂರ್ಣಾಂಭೋಧಿ[1]ಯೋ[1]ಲಿರಲು ೯೬

ಓಲಗದ ಕಡೆಗಡೆಯು ತಟ್ಟಿಯು
ಲಾಲಿಸಿದ ತೆಱನೆಡಬಲದ ವನ
ಮಾಲಿ ಬೊಮ್ಮರ ಜೋಕೆಯುಕ್ಕಡದೆಚ್ಚಱೆನಲಮರ್ದು
ಮೇಳದಿಂದನಿಮಿಷರ ಸಾಯುಧ
ರೋಳಿಯಿಂ ತೆತ್ತೀಸಕೋಟಿಯ
ಜಾಳವೆಣ್ದೆಸೆ ಕಾಪಿನೊಗ್ಗಿನೊಳೊಪ್ಪಿದುದು ಮೆಱೆದು ೯೭

ಇಂತು ದೇವರು ದೇವಿಯರುಪೆರ
ಸಿಂತು ದೇವಕುಮಾರರಂ ತೊಡ
ಗಿಂತು ನಂದೀಶಾದಿ ಗಣತಿಂಥಿಣಿಯ ಸಂದಣಿಯಂ
ಇಂತು ತೆತ್ತೀಸಾದಿ ಪರಿವರಿ
ಸಿಂತೆಸೆದು ಮಂದರದ ಮಂದಿರ
ದಂತದೊಳು ಬಂದಂದವಡೆದೋಲಗದೊಳಾ ಹೊತ್ತು ೯೮

ತ್ವರಿತಮನನೆಯ್ತಂದು ಶ್ರೀಮಂ
ದರದ ಬಾಗಿಲೊಳಿರ್ದುವಂದೊಳ
ಗಱುಪಿ ಕರಸಿಕೊಂಡು ಯಮನಾವೋಲಗದ ಮುಂದೆ
ಚರಿತದಿಂ ಮೈಯಿಕ್ಕಿ ತಂದಾ
ಪುರದ ಬಾಗಿಲ ಬೀಯಗಂಗಳ
ನಿರಿಸಿ ಸಿವಡಿಯ ದಂಡಮುದ್ರೆಯನೊಪ್ಪಿಸಿದನೆನಲು ೯೯

[1] ಯವೊ (ಗ)

ಇಂದುಜೂಟನ ಮನವೆ ತಾನೀ
ಯಂದರೂಪಂ ತಳೆದುದೋಯೆಂ
ಬಂದದಖಿಳಾಧೀಶ ನಂದೀಶ್ವರ ಸುವೇತ್ರಧರರ
ಇಂದಿ[1]ವೆ[1]ಲ್ಲವನೇಕೆಯಿಲ್ಲಿಗೆ
ತಂದೆ ಊಳಿಗವೇನೊ ಯಮ ನೀಂ
ಬಂದ ಕಜ್ಜವದೇನೊ ಬಿನ್ನವಿಸೇಳೆನಲಿಕೆಳ್ದು ೧೦೦

ದೇವ ಭಕ್ತಾಧೀನ ಕಾವುದು
ಯೇವೆನೆಂತೆನಲುಭಯಸಂಕಟ
ವೋವಿದಪೆ ಬಿನ್ನವಿಸಲಂಜುವೆನೆನಲಱಿದು ನಗುತರ
ದೇವ ಕಾರುಣ್ಯಾಬ್ಧಿ ದೇವರ
ದೇವನೆಂದಂ ತಪ್ಪು ನಿನಗಿ
ಲ್ಲಾವ ದೆಸೆಯಿಂದೊರೆಯೆನಲು ಭಯವುಳಿದು ಕೈಮುಗಿದು ೧೦೧

ಅರಸುಮಾರ್ಗದೆ ಬಂದು ನೆರದೀ
ನಿರಯನಾಯಕತತಿಯೊಳೊಂದಾ
ಕರದೊಡೋಯೆನಲಿಲ್ಲದಂತಿರವೆಸಗಿಯಱಿಯದೊಲು
ಮೆಱೆವ ದಶಭುಜ ಪಂಚವಕ್ತ್ರಂ
ಮಿಱುಪಜೆಡೆ [2]ಹೆ[2]ಱೆನೊಸಲು ಮೊಗ
ಣ್ಣುಱುವ ರುದ್ರಾಂಗನೆಯರೊಳು ನೆರೆವಿಲ್ಲಿಗೆಯ್ತಂದಂ ೧೦೨

ಅಱುಪಲೀ ವೃತ್ತಾಂತವಂ ನಿಲ
ಲಱಿಯದೆಯ್ತಂದೆಱೆಯ ನಿನಗಾಂ
ನೆಱೆಯೆ ಬಿನ್ನಪವೆಸಗಿದೆಂ ನಿಮ್ಮವರೊಳೆನಗಾದ
ಪರಿಭವಂಗಳನಾಂತೆನಿನ್ನ
ತ್ತರಿಸಲಾಱೆಂ ಬಿಡಿಸುಮಿದ ನೀಂ
ಕರುಣಿ ಹೀನಾಶ್ರಯದೊಳಿರಿಸೆನಗದುವೆ ಶ್ಲಾಘ್ಯತರಂ ೧೦೩

---

1 ದೆ (ಖ ಗ) 2 ಪೆ (ಗ)

ಎನೆ ತಿರಿಗಿನೋಡಿ[1]ದೊ[1]ಡೆ ಭಯದಿಂ
ವಿನಯಮತಿ ನಡನಡುಗೆ ಬರತೆಗೆದ
ಸುನಯದಿ ಬಿಗಿಯಪ್ಪಿ ತೊಡೆಯೊಳಗಳವಡಿಸಿ ಶಿವನು
ವಿನುತ ಶಿವಧರ್ಮಾರ್ಥಪಾಲಕ
ಘನಶೈವಸಿದ್ಧಾಂತ ಮಾರ್ಗವ
ಘನಕರುಣಿ ಸಾನಂದನಂ ಲಾಲಿಸುತ ಪಾಲಿಸುತಂ ೧೦೪

ವರಸುವರ್ಣ ಮಲಕ್ಕೆ ಶಿಖಿತರ
ತರದ ಭೂತಂಗಳಿಗೆ ಭಸಿತಂ
ನೆರೆದು ತೀವಿದ ವಿಷ್ಣುಮಾಯೆಗೆ ಮಚ್ಛಿವಜ್ಞಾನಂ
ಉರುತರದ ಕತ್ತಲೆಗೆ ದೀಪಂ
ಪರಿಪರಿಯ ರೋಗಕ್ಕೆಯೌಷಧಿ
ಯರಿಯ ಸಂಸಾರಕ್ಕೆ ಗುರು ಹಗೆಯಜೀಯನಾದಿಗಳಂ ೧೦೫

ನೆರದಿವ್ರೊಂದಕ್ಕೊಂದರಿಗಳೆಂ
ತಱಿ ನರಕಸಂತತಿಗೆಯುಂ ಹಗೆ
ಯೆರಡೆಯೆನ್ನಯ ಶರಣನುಂ ಪಂಚಾಕ್ಷರಿಯುಮೆನಲು
ಮರುಳೆ ಪಂಚಾಕ್ಷರಿ ಸುಸಿದ್ಧಂ
ಗರಿದೆವ್ರೊಂದೇಯಂಡದೊಳಗಣ
ನರಕದಳವಿಯಜೀಯೆಯಣುಭಕ್ತನ ಮಹತ್ವವನು ೧೦೬

ನೆರೆದ ವಿಶ್ವದೊಳುಳ್ಳ ಶಿಶು ಪಶು
ವರಿಯ ದ್ವಿಜರೊಳಗಾದ ಜೀವರ
ನರಿದುರುಪಿ ಕೊಂದಿಕ್ಕಿದಘಸಂಘಾತವೆನಿತನಿತಂ
ಶರಣನೀಕ್ಷಣದಿಂದವಾಗಲಿ
ವರಶಿವಾಣುವಿನಿಂದವಾಗಲಿ
ಉರಿ[2]ದ[2] ಪಾತಕವೆನಲಿಕಿನಸೂನು ಬಿಡುವದನು ೧೦೭

---

1 ದ (ಕ) 2 ವ (ಕ)

ಬಂದುದುಚಿತಂ ಮಗನೆ ನೀ ನವ
ಗೆಂದುದುಚಿತಂ ಧರ್ಮ ನೀನಿ
ನ್ನೊಂದು ಚಿಂತೆಯನುಳಿದುಯಿಲ್ಲಿಂ ಮೇಲೆ ಜೀವಿಗಳಂ
ತಂದುಕೊಳು ಕಲ್ಪನೆಗಳಳಿದರ
ನೆಂದು ಕರುಣಿಸಿ ಕಳುಪಿ ಶ್ರೀಸಾ
ನಂದನೊಳು ಗುರುರೂಪ ವಿಶ್ವೇಶ್ವರನೊಸೆದು ಮೆಱೆದಂ ೧೦೮

ಅಮರಕುಲ ಮಾ[1]ರ್ತ[1]ಂಡನೊಪ್ಪಿದ
ನಮರವರಮಾಣಿಕ್ಯನೊಪ್ಪಿದ
ನಮರಶಿರ [2]ಸ್ರಗ್ಭ[2]ಸಿತವಿಲಸಿತಗಾತ್ರನೊಪ್ಪಿದನು
ಅಮಲ[3]ಕೋಟ್ಯಾ[3]ರ್ಕಾಭನೊಪ್ಪಿದ
ನಮಿತನುದ್ಯತ್ತೇಜನೊಪ್ಪಿದ
ನಮಮ ಮದ್ಗುರು ರೂಪವಿ[4]ಶ್ವನುದಾರ[4]ನೊಪ್ಪಿದನು ೧೦೯

ದೇವಗಿರಿಜಾಂಭೋಧಿ ಹಿಮಕರ
ದೇವ ಗಿರಿಜಾಂಭೋಜ ಷಟ್ಪದ
ದೇವಗಿರಿಜಾಸರಸಿನಿರತ ಮರಾಳ ಭಾಳೇಕ್ಷಾ
ದೇವಗಿರಿಜಾರ್ಧಾಂಗ ಮಂಡಿತ
ದೇವಗಿರಿಜಾವಸಥ ಸುಸ್ಥಿತ
ದೇವ ಗಿರಿಜಾಲೋಲ ಶೀಲವಿಲಾಸ ಕಾಲಾರಿ ೧೧೦

ಪರಮ ಪರಶಿವ ಗರಳಧರ ಶಂ
ಕರ ಪರಾತ್ಪರ ಜಲರುಹೋದರ
ವರನಯನಪೂಜಿತಭರಣ ಕರುಣಾವರಣ ಕರುಣಿ
ಹರಶರಭನರಸಿಂಹಚರ್ಮಾಂ
ಬರ ಪುರಾರಿ ಭವಾರಿ ಗಿರಿಜಾ
ವರ ಮುರಾರಿ ಕಳೇವರಾರ್ಚಿತ ಶೂಲಧರ ಶರಣು ೧೧೧

---

[1] ರ್ತಾಂ (ಖಗ) [2] ಸಧ್ಭ (ಕಗ) [3] ನಂತಾ (ಕ) [4] ಶ್ವಾಧೀಶ (ಖಗ)

ಲಿಂಗೆ ಮಂಗಳನಿಳಯ ಜಂಗಮ
ದಂಗ ಸಿಂಗರ ಸಿಂಗ ಕಲಿತಸು
ಸಂಗ ಗಂಗಾಲಹರಿ ಪರಿವೃತ ಸೇವಿತೋತ್ತುಂಗೆ
ಲಿಂಗ ಪಿಂಗಜಟಾಕಲಾಪ ಪಿ
ಶಂಗಲೋಚನ ಜಂಗಮಾರ್ತಿಯ
ಭಂಗದೇವರ ಗೊಂಗ ಕರುಣಿಸು ಹಿಂಗದೆನಗೊಲಿದು ೧೧೨

ಶರಣು ಶರಣಸಮೀಪ ಶಂಕರ
ಶರಣು ಶರಣಸುರೂಪ ಶಶಿಧರ
ಶರಣು ಶರಣಸುಪಕ್ಷ ತ್ರ್ಯಕ್ಷಾಕ್ಷರ ಶರಣು ಶರಣು
ಶರಣು ಶರಣವಿಲಾಸ ಪುರಹರ
ಶರಣು ಶರಣವಿಕಾಶ ಪಶುಪತಿ
ಶರಣು ಶರಣನಿವಾಸಿ ಕಾಶೀವಾಸಿ ಶರಣಾಗು ೧೧೩

ಗುರುವೆ ಜಯ ಶ್ರೀಗುರುವೆ ಜಯ ವರ
ಗುರುವೆ ಜಯ ಸದ್ಗುರುವರನೆ ಜಯ
ಗುರುತರನೆ ಜಯ ಮಹಿಮಾವಲಂಬ ಮಹಾಗುರುವೆ ಜಯತು
ಗುರುವೆ ಜಯ ನಿಜಗುರುವೆ ಜಯ ಸ
ದ್ಗುರುವೆ ಜಯ ಸದ್ಗುರುವೆ ಜಯ ಕುಲ
ಗುರುವೆ ಜಯ ಗುರುರೂಪ ವಿಶ್ವೇಶ್ವರ ಜಯತು ಜಯತು ೧೧೪

ನರಕತರುವರ ಪರಶು ಕರುಣಿಸು
ನರಕವನದಾವಾಗ್ನಿ ಕರುಣಿಸು
ನರಕಗಿರಿಪವಿಯುಟದೆನಗೆ ಕರುಣಿಸುವನಾಥಂಗೆ
ನರಕತನುಮಾ[1]ರ್ತಾಂ[1]ಡ ಕರುಣಿಸು
ನರಕವರ ಹರಿಶರಭ ಕರುಣಿಸು
ನರಕ ಪುರಜಿತ ಕರುಣಿಸೆಲೆ ಸಾನಂದ ಶರಣಾಗು ೧೧೫

---

[1] ತಾರ್ಕ್ಷ (ಖಗ)

ತರುಣನೆನ್ನೊಳು ತರಳನೆನ್ನೊಳು
ದುರುಳನೆನ್ನೊಳು ಮರುಳನೆನ್ನೊಳು
ಪುರುಳದೇನುಂಟೈ ಪರೀಕ್ಷಿಸೆ ನರಕವಡಬಾಗ್ನಿ
ಕರುಣಿಸೆನ್ನಂ ನೋಡಿ ಕೃತಿಯಂ
ಶರಣರೊಳು ಸಲಿಸುವುದು ಧರೆಯೊಳು
ವರಮಹತ್ತರದಾನಿ ಮೆಱೆವುದು ದಾನಕಾಲವಿದು ೧೧೬

ನರಕಿಗಳನುದ್ಧರಿಸಿಯೆತ್ತಿದ
ಬಿರಿದು ಬಿರಿದೇ ನಿನ್ನ ಕಿಂಕರ
ನೆರೆದು ಪಡೆಯದೆ ಭಕ್ತಿಯಂ ಮೊಱೆಯಿಡುತವಿರಲಕಟ
[1]ಪೆಱ[1]ರು ನಿನ್ನಂ ನಗರೆ ಭಕ್ತಿಯ
ನಱಕೆಯಿಂದೆನಗೊಲ್ದು ಕರುಣಿಸಿ
ಮೆಱೆವುದೈ ನಿನ್ನಯ ಬಿರಿದನೆಲೆ ತಂದೆ ಸಾನಂದ ೧೧೭

ನೀನೊರೆದವ್ರೊರೆಗರ್ಥವಱಿಯಲ
ದಾನದೇಸಱನೂನ ತಪ್ಪುಕ
ಮಾನಹೀನನನೆ[2]ನ್ನುಳುಹಿ[2] ಶಿಕ್ಷಿಪುದು ರಕ್ಷಿಪುದು
ಆನದಾರವ ಕೃತಿಯದಾರದು
ನೀನೆ ಪತಿಕರಿಸು[3]ವುದ[3]ದಂ ಗುಣ
ಮಾನಿ ಶ್ರೀನಂದೀಶ ನೀಂ ನೆಱೆ[3]ಮೆಱೆ[3]ವುದಪ್ರತಿಮ ೧೧೮

ಕೀಱದಿರು ಚಾರ್ವಾಕ ನೀಂ ಬಾ
ಯಾಱದಿರು ತಾರ್ಕಿಕನೆ ಘಡ ತಲೆ
[4]ಯೂ[4]ಱದಿರು ಲೋಕಾಯತಿಕ ಬೌದ್ಧಾರುಹತರಿನ್ನು
ಮೀಱದಿರು ಪ್ರಭಾಕರಿಗ ಮುಖ
ದೋಱದಿರು ವೇದಾಂತಿ ಬಯಲುಗ
[5]ಹಾ[5]ಱದಿರು ವೈಷ್ಣವ ವಿಷಣ್ಣಾವೊಳಗನಱಿವೆನಗೆ ೧೧೯

1 ಪರ (ಗ) 2 ನ್ನುಱುಹಿ (ಖಗ) 3 ದುವಿ (ಕ) 4 ದೋ (ಖ) ತೋ (ಗ) 5 ಹೋ (ಗ)

ಹರನ ಸೊಮ್ಮದಿದೆನ್ನದೆಲ್ಲವ
ರುರುಘನವ ಮಹಿಮೆಯ ಮಹತ್ವವ
ಪರಮಪೂತತ್ವವ ಸುಸೇವ್ಯವ ಗುಣವರುಚಕರವಂ
ಒರೆವ ಹಾಡುವ ಕೀರ್ತಿಸುವ ಮಿಗೆ
ಪರಸುವಾದರದಿಂದನಾರತ
ನೆರೆದ ನಿಗಮಾದಿಯೊಳು ವರ್ತನವುಳ್ಳೊಡೊರೆ ಮತ್ತೆ ೧೨೦

ನರಕಿ ಹಾರುವ ನಿನಗೆ ನಿನ್ನಯ
ಹರಿಯ ದೆಸೆಯಿಂ ಮಟ್ಟಿಯಿಂದಾ
ಕರಿ[1]ದೊ[1]ಡಲ ಚಕ್ರಾಂಕದಿಂ ನರಕಂ ನರಕ[2]ವೆಂ[2]ಬ
ನೆರೆದ ನಿಗಮಾದಿಯೊಳಗಿನ್ನೂ
ವಿರದೆಯಿದನಿಲ್ಲೆಂಬದುಳ್ಳೊಡೆ
ವೊರೆಯದಾವುದೊ ಶಾಪಹತ ಪಾತಕ ಸುಪಾಪಾತ್ಮ ೧೨೧

ಇಕ್ಕಿದೆಂ ಶ್ರುತಿನಿಚಯ ಮುಡಿಗೆಯ
ನಿಕ್ಕಿದೆಂ ಶಾಸ್ತ್ರಾದಿ ಮುಡಿಗೆಯ
ನಿಕ್ಕಿದೆಂ ಶೈವಾಗಮಾದಿಯ ವಾಕ್ಯಮುಡಿಗೆಯಿದಂ
ಚಕ್ಕನೆತ್ತವೊ ನಿನ್ನ ದೈವಂ
ಚಿಕ್ಕುಟಿಯ್ಯಾ ವ್ಯಾಸಋಷಿಗಂ
ದಕ್ಕದೇ ನೀವ[3]ಕ್ಕುಡ[3]ರೆನಿಕ್ಕುವರೆ ಜಗದೊಳಗೆ ೧೨೨

ವೇದದೊಳು ಶಾಸ್ತ್ರದೊಳಗಾಗಮ
ವಾದನದೊಳು ಪುರಾಣದೊಳಗತಿ
ವಾದಿಯಿತಿಹಾಸದೊಳು ನಿನ್ನಯ ದೈವಕಂದಿಂದು
ವಾದನುಳಿ ಕರ್ತೃತ್ವವುಂಟೆಂ
ಬೋದದುಳ್ಳೊಡೆ ತೋಱು ಬಱವೊಣ
ವಾದವೇವುದೊ ಸಾಕು ಬೋಧಕಬೋಧೆಗಳುವಿನ್ನು ೧೨೩

1 ವೊ (ಖ) 2 ವೆಂ (ಕ) 3 ಬ್ಬುದ (ಖ ಗ)

ನೇಱಿದೆಂ ಪತ್ರಮುಮನಿದೆಯಿದೆ
ತೋಱಿದೆಂ ಶಿವಭಕ್ತಿ ಘನವಂ
ಸಾಱಿದೆಂ ವಿಧಿಯುಂ ನಿಷೇಧವನಾಱಿಸಿದೆನುಗಿದು
ಗೂಱಿದೆಂ ಹರಿಮುಖ್ಯನಥಮವ
ನೂಱಿದೆಂ ದೂಷಕರ ಶಿರವಂ
ಕೀಱಿದೆಂ ಮತ್ತಿತರ ಶಾಸ್ತ್ರವನೆತ್ತಿ ತೂಱಿರದೆ ೧೨೪

ನೆರೆದ ಪರದೈವಂಗಳಂ ಕೊಱತು
ದರಿದರಿದು ಸಣ್ಣಿಸಿ ಹಱಹಿಯಿರ
ದುರು[1]ಪಿ[1] ನೀರೊಳು ನೆರಹಿ ನಿಶ್ಚಿಂತೆಯೊಳು ಸುಖದಿಂದ
ಕರಗಿ ಗುರುಲಿಂಗಾರ್ಚನ[2]ವ[2]ಸರ
ವರಿಸದೊಯ್ಯನೆ ಮಾಳ್ಪವುತ್ಸವ
ದಿರವು ದೊರೆಕೊಳ್ಗೀ ಕಥಾರ್ಥದಾಳೋಚಕರ[3]ಗೆಂದುಂ[3] ೧೨೫

ಏಕನಿಷ್ಠೆಯುದಕ್ಕು ಜಂಗಮ
ಬಾಕುಳಿಗಳೆಂಬಳ್ಕಱಕ್ಕು ಪಿ
ನಾಕಿಯುಚಲವೆನಿಪ್ಪಮಲಭಯುಭಕ್ತಿ ದೊರೆಕೊಳ್ಗುಂ
ಲೌಕಿಕರ ಬಲುದೊಡರ[4]ದು[4]ಳಿಗಳಿ
ನಾಕಿಗಳ ಕೈವಾರದಳಿಪಿನ
ಹೆಕ್ಕಳಿ ಭ್ರಾಂತಿಗಳವುಳಿಗೀಕಥನದವರ್ಗೆಂದುಂ ೧೨೬

ನರರ ವರ್ತನವುಳಿಯುಲುಂ ಬೆರ
ಸಿರಲುವಂಜುವರುಳಿಯುದವರೊಳು
ಪೊರೆ[5]ವ[5] ಬ[6]ಳ[6]ಕೆಗಳುಳಿಗು ಲೌಕಿಕಭಾಷೆಗಳು ಮೇಲೆ
ಶರಣಪದವರ್ತನವು ಶರಣರೊ
ಳರವರಿಸದೊಡನಿರ್ಪಿರವು ಶರ
ಣರ ಕರುಣವೀಕಥೆ [7]ವೊ[7]ರೆವ ಬಾರಿಸುವವರ್ಗಳ್ಗಕ್ಕು ೧೨೭

---

[1] ಹಿ (ಕ) [2] ಮ (ಖ ಗ) [3] ಗೆಸದಾ (ಕ) [4] ಗು (ಕ) [5] ದ (ಕ) [6] ಠ (ಕ)
[7] ಐ (ಕ)

ಶರಣರೊಂದೇ ಬಿನ್ನಪವನಪ
ಧರಿಪುದಾಳ್ವರ ಮಹಾಸ್ತೋತ್ರಮ
ಮರಿಯರಾ ಶಿಷ್ಯರ ವಿನುತ ವಿಶ್ವಾಧಿಕಾರ್ಥಮವಂ
[1]ಒ[1]ರೆಯೆ ವೇದಾಂತಾದಿ ತರ್ಕಮ
ವೆರಸುವೈದಾರ್ಲಕ್ಷ ಪಠನವ
ದರಿದುವೆಂದಾನಱಿದು ಮದ್ಗುರುವಾಜ್ಞೆಯಾ ಬಲದಿಂ ೧೨೮

ನೆರೆದ ನಿಗಮಾ[2]ಳಿ[2]ಯೊಳು ಕಥೆಗಳ
ನುಱಿ[3]ಸಸಾಕ್ಷಿಕವಾಗೆ ಪೊಸತೆನ
ಲೊರೆದೆ ಸಾಸಿರದೈನೂಱಱಿಂದಱಿಯೆ ಕಿಱಿದಱ[3]ೊಳೆ
ಅರಿದುವವರ್ಗಳ ಕೃತಿಗೆ ಸರಿಮಿಗಿ
ಲೊರೆದೆನೆನ್ನದೆಯುವರ ಮನೆಗಾ
[3]ದೆ[3]ರಡಱಿಯದಿರ್ಪಾ ಸೊಣಗನೆಂದೆನ್ನ ನಡೆ[4]ಪು[4]ವುದು ೧೨೯

ಕರಮೆ ಪ್ರಸ್ತುತವಾದ ಪೊಳ್ತು
ರ್ವರೆಯ ಶಾಸ್ತ್ರಾದಿಗಳನಱಿಸುವ
ಬರೆವ ವೋದುವ ಆಯ್ವ ಪಿರಿದಾಯಾಸವಱಿದಾನು
ಭರದೆ ಶರಣರ ಮನೆಯು ತೊತ್ತಾ
ನೊರೆವೆನೆಮ್ಮವರ್ಗಾಗಿ ನೆರಪಿದೆ
ಬರೆದೆ[5]ನ[5]ದಱಿಂ ಪುಸ್ತಕವನಾರೈದು ನಡಸುವುದು ೧೩೦

ಬಾಳ್ಗೆಯೆನ್ನಯ ಗುರುಕುಲಂ ನೆಱೆ
ಬಾಳ್ಗೆ ಮಾಹೇಶ್ವರರು ಸತತಂ
ಬಾಳ್ಗೆ ಶಿವಸಮಯದ ಮಹೋನ್ನತಿ ದಶದಿಗಂತದೊಳು
ಬಾಳ್ಗೆ ಸಾನಂದೇಶ ಕೃತಿಯಿದ
ಱೇಳ್ಗೆ ಶಿವನವರುತ್ಸವಂಗಳ
ತಾಳ್ಗೆ ಶಿವನಾಲಿಸುಗೆ ಪಾಲಿಸುಗೆನ್ನನನವರತಂ ೧೩೧


---

1 ಬೊ (ಖಗ) 2 ದಿ (ಕ) 3 ನೆ (ಕ) 4 ಸು (ಖ) 5 ನಿ (ಖಗ)

ಪಾಲಿಸುಗೆ ಯಿಾಕೃತಿಯನನುದಿನ
ವಾಲಿಸುಗೆ ಶಿವನವರ್ಗಳಳ್ತಿಯಿ
ನಾಳಿಯೆನ್ನಂ ರಕ್ಷಿಸುಗೆ ತಮ್ಮೊಕ್ಕುದನೆಯಿಕ್ಕಿ
ಲೀಲೆಯಿಂ ಸದ್ಭಕ್ತರೊಲವಿಂ
ಲಾಲಿಸುಗೆ ಮುದದಿಂದೆ ಮದ್ಗುರು
ಶೂಲಿ ಶ್ರೀಗುರುರೂಪ ವಿಶ್ವೇಶ್ವರ ಶರಣು ಶರಣು ೧೩೨

ಇದು ಪರಮನಂದೀಶರೊರೆಯಿಂ
ಪುದಿದ ಸಾನಂದೇಶ ಚರಿತದೊ
ಳಿದು ಮಹೇಶಾಸ್ಥಾನದುತ್ತಮವರ್ಣನದ ಸಂಧಿ
ಇದು ಶರಣರ ಕವಿ ಪದುಮಿದೇವಂ
ಪದೆದು ಕನ್ನಡದಿಂದೆ ಮುದ್ರಿಸಿ
ದೊದವಿದೊಂಬತ್ತನೆಯ ಸಂಧಿ ಸಮಾಪ್ತ ಶಿವಮಸ್ತು ೧೩೩

—~—





ಕನ್ನಡ ಅಧ್ಯಯನ ಸಂಸ್ಥೆ

ಪ್ರಾಚ್ಯ ಕಾವ್ಯಮಾಲೆಯ ಕೆಲವು ಪ್ರಕಟಣೆಗಳು

೧. ಪದಾರ್ಥಸಾರ (ಭಾಗ ೧) : ಸಂ. ಎಂ. ಸಿ. ಪದ್ಮನಾಭ ಶರ್ಮ
೨. ಸೂಪಶಾಸ್ತ್ರ : ಸಂ. ಎಸ್. ಎನ್. ಕೃಷ್ಣಜೋಯಿಸ್
೩. ಸೊಬಗಿನ ಸೋನೆ : ಸಂ. ಬಿ. ಎಸ್. ಸಣ್ಣಯ್ಯ
೪. ಬಸವರಾಜ ಚಾರಿತ್ರ (ಸಿಂಗಿರಾಜಪುರಾಣ) : ಸಂ. ಎಚ್. ದೇವೀರಪ್ಪ
೫. ಸನತ್ಕುಮಾರ ಚರಿತೆ : ಸಂ. ಜಿ. ಜಿ. ಮಂಜುನಾಥನ್
೬. ನಳಚಂಪು : ಸಂ. ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್ ; ಎಸ್. ಎನ್. ಕೃಷ್ಣಜೋಯಿಸ್
೭. ವಿಷ್ಣುಪುರಾಣ : ಸಂ. ಎಸ್. ಎನ್. ಕೃಷ್ಣ ಜೋಯಿಸ್
೮. ಕಂಠೀರವ ನರಸರಾಜ ವಿಜಯ : ಸಂ. ಡಾ. ಆರ್. ಶಾಮಶಾಸ್ತ್ರಿ
೯. ಸೌಂದರ್ಯ ಲಹರೀ : ಸಂ. ಸು. ನಾರಾಯಣಸ್ವಾಮಿಶಾಸ್ತ್ರೀ
೧೦. ಆದಿಪರ್ವ : ಸಂ. ಕೆ. ಆರ್. ಶೇಷಗಿರಿ
೧೧. ರಸರತ್ನಾಕರಂ : ಸಂ. ಎಚ್. ಕೆ. ನರಸಿಂಹೇಗೌಡ
೧೨. ಕರಸ್ಥಲ ನಾಗಲಿಂಗನ ಚರಿತ್ರೆ : ಸಂ. ಕೆ. ಆರ್. ಶೇಷಗಿರಿ
೧೩. ಅನಂತನಾಥ ಪುರಾಣಂ : ಸಂ. ಎಚ್. ದೇವೀರಪ್ಪ; ಎಂ. ಸಿ. ಪದ್ಮನಾಭ ಶರ್ಮ
೧೪. ಮದನಮೋಹಿನಿಯ ಕಥೆ : ಸಂ. ಬಿ. ಎಸ್. ಸಣ್ಣಯ್ಯ
೧೫. ಸೂಕ್ತಿಸುಧಾರ್ಣವಂ : ಸಂ. ಎನ್. ಅನಂತರಂಗಾಚಾರ್
೧೬. ದೀಕ್ಷಾಬೋಧೆ : ಸಂ. ಎಸ್. ಬಸಪ್ಪ
೧೭. ಗುರುಭಕ್ತ ಚಾರಿತ್ರ : ಸಂ. ಕೆ. ಆರ್. ಶೇಷಗಿರಿ
೧೮. ಪದಾರ್ಥಸಾರ (ಭಾಗ ೨) : ಸಂ. ಎಂ. ಸಿ. ಪದ್ಮನಾಭ ಶರ್ಮ
೧೯. ಹರಿಹರನ ಐದು ರಗಳೆಗಳು : ಸಂ. ಎಂ. ಎನ್. ಲೀಲಾವತಿ
೨೦. ಅಬ್ಬಲೂರು ಚರಿತೆ : ಸಂ. ಎನ್. ಬಸವಾರಾಧ್ಯ
೨೧. ಕುಮಾರ ಕಾಳಗ : ಸಂ. ಕೆ. ರಾಘವೇಂದ್ರರಾವ್
೨೨. ಕೆಳದಿನೃಪ ವಿಜಯ : ಸಂ. ಆರ್. ಶಾಮಶಾಸ್ತ್ರಿ
೨೩. ಉದ್ಯೋಗಸಾರ : ಸಂ. ಎನ್. ಬಸವಾರಾಧ್ಯ
೨೪. ಗುರುಬೋಧಾಮೃತಂ : ಸಂ. ಡಿ. ಸಿದ್ಧಗಂಗಯ್ಯ; ಪಿ. ಮರಿಬಸವಾರಾಧ್ಯ
೨೫. ವರ್ಧಮಾನಪುರಾಣಂ : ಸಂ. ಬಿ. ಎಸ್. ಸಣ್ಣಯ್ಯ
೨೬. ಹರಿವಂಶಾಭ್ಯುದಯಂ : ಸಂ. ಬಿ. ಎಸ್. ಸಣ್ಣಯ್ಯ
೨೭. ವಿರಾಟಪರ್ವ : ಸಂ. ಎಸ್. ಎನ್. ಕೃಷ್ಣಜೋಯಿಸ್
೨೮. ಜನವಶ್ಯ : ಸಂ. ಜಿ. ಜಿ. ಮಂಜುನಾಥನ್
೨೯. ದ್ವಾದಶಾನುಪ್ರೇಕ್ಷೆ : ಸಂ. ಕೆ. ಆರ್. ಶೇಷಗಿರಿ
೩೦. ಹಾಲಾಸ್ಯಪುರಾಣ : ಸಂ. ಜಿ. ಜಿ. ಮಂಜುನಾಥನ್